ಗುರುನಾನಕ್

ಡಾ. ಡಿ.ಬಿ. ರಾಮಚಂದ್ರಾಚಾರ್

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು

GURUNANAK : A Monograph on Gurunanak by Dr. D.B. Ramachandraachar, Published by Ashok N. Chalawadi. Administrative Officer, Kannada Pustaka Pradikara (Kannada Book Authority), Kannada Bhavana, J.C. Road, Bangalore - 560 002

© ಈ ಆವೃತ್ತಿಯ ಗ್ರಂಥಸ್ವಾಮ್ಯ – ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

First Impression : 2001
Second Impresion : 2009
Pages : xii+93
Copies : 1000
Price : Rs.

ISBN : 81-77130056-0

ಮೊದಲ ಮುದ್ರಣ : ೨೦೦೧
ಎರಡನೆ ಮುದ್ರಣ : ೨೦೦೯
ಪುಟಗಳು : xii + 93
ಬೆಲೆ ರೂ. :
ಪ್ರತಿಗಳು : ೧೦೦೦

ಪ್ರಕಾಶಕರು:

ಅಶೋಕ ಎನ್. ಚಲವಾದಿ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ.ರಸ್ತೆ.
ಬೆಂಗಳೂರು – ೫೬೦ ೦೦೨

ದೂರವಾಣಿ : ೦೮೦ ೨೨೪೮೪೫೧೬

ಮುದ್ರಣ :

ಯಶಸ್ವಿ ಪ್ರಿಂಟ್ ಆ್ಯಡ್ಸ್
ನಂ. ೮೬, ೨ನೇ ಕ್ರಾಸ್, ಕಾವೇರಿಪುರ,
ಕಾಮಾಕ್ಷಿಪಾಳ್ಯ, ಬೆಂಗಳೂರು–೭೯
ದೂ. : ೦೮೦–೨೩೫೮೩೮೩೧
೯೪೪೮೩೭೩೫೭೭

ಮುನ್ನುಡಿ

ಜಗತ್ತಿನ ಸಾಹಿತ್ಯಕ, ಸಾಂಸ್ಕೃತಿಕ, ನೈತಿಕ, ಧಾರ್ಮಿಕ, ಸಾಮಾಜಿಕ, ರಾಜಕೀಯ ಆರ್ಥಿಕ ಮತ್ತು ವೈಜ್ಞಾನಿಕ ಕ್ಷೇತ್ರಗಳನ್ನು ತಮ್ಮ ವಿಶಿಷ್ಟವಾದ ಬದುಕು, ಪ್ರಯೋಗಶೀಲತೆ, ಕ್ರಿಯಾಶೀಲತೆ, ಹೋರಾಟ, ಬುದ್ಧಿಮತ್ತೆ, ದಾರ್ಶನಿಕ ದೃಷ್ಟಿ ಮತ್ತು ದೂರಗಾಮೀ ಚಿಂತನೆಗಳಿಂದ ಅರ್ಥಪೂರ್ಣವನ್ನಾಗಿ ಸಂಪದ್ಭರಿತವನ್ನಾಗಿ ಅತ್ಯುಪಯುಕ್ತವನ್ನಾಗಿ ಜೀವಂತಿಸಿದ ನೂರಾರು ಶ್ರೇಷ್ಠ ಚಿಂತಕರು ಇತಿಹಾಸದಲ್ಲಿ ಮೂಡಿ ತಮ್ಮ ಸಾಧನೆ ಸಿದ್ಧಿಗಳಿಂದ ಚಿರಂತನವಾದ ಪರಿಣಾಮವನ್ನು ಉಂಟುಮಾಡಿದ್ದಾರೆ ಮತ್ತು ಮಾಡುತ್ತಿದ್ದಾರೆ. ಮಾನವ ಬದುಕನ್ನು ವೈಶಿಷ್ಟ್ಯಮಯವನ್ನಾಗಿ ಸಮೃದ್ಧವನ್ನಾಗಿ ಮಾಡಲು ಹಾಗೂ ಶಾಂತಿ, ತೃಪ್ತಿ, ವೈಚಾರಿಕತೆಗಳನ್ನು ತುಂಬಲು ಇವರ ಅಪೂರ್ವವೂ, ಅನನ್ಯವೂ ಆದ ಅಸಾಧಾರಣ ಜೀವನ ಮತ್ತು ಚಿಂತನೆಗಳು ಕಾಲ, ದೇಶ, ಮತ, ಬಣ್ಣ ಮತ್ತು ಭಾಷೆಗಳನ್ನು ಮೀರಿ ಸತತ ಪ್ರಸ್ತುತವಾಗಿ ನಿರಂತರ ಸತ್‌ಸ್ಫೂರ್ತಿಯನ್ನು ಬದುಕಿಗೆ ತುಂಬುತ್ತಿವೆ. ಇಂತಹವರ ಆದರ್ಶಪರ ವ್ಯಕ್ತಿತ್ವ ಪರಿಶ್ರಮ ಮತ್ತು ಪರಿಚಿಂತನೆಗಳಿಂದಾಗಿ ಮನುಷ್ಯ ತನ್ನ ಇತಿಮಿತಿಗಳನ್ನು ಮೀರಲು, ಅಸಾಧ್ಯವಾದುದನ್ನು ಸಾಧಿಸಲು ಸಾಧ್ಯವಾಗಿದೆ, ಸಾಧ್ಯವಾಗುತ್ತಿದೆ. ಹೀಗೆ ಮಾನವ ಜೀವಿತವನ್ನು ಸದಾ ಹಸಿರುಗೊಳಿಸುವ ಪ್ರಪಂಚದ ಮಹಾನ್ ಚಿಂತಕರ ಮುಖ್ಯ ಆಲೋಚನೆಗಳನ್ನು ಕನ್ನಡಿಗರಿಗೆ ಅದರಲ್ಲೂ ಯುವಜನತೆಗೆ, ಸರಳವಾದ ಭಾಷೆಯಲ್ಲಿ ಸಂಕ್ಷಿಪ್ತವಾಗಿ ಪರಿಚಯ ಮಾಡಿಕೊಡುವ ಉದ್ದೇಶದಿಂದ ಪುಸ್ತಕ ಪ್ರಾಧಿಕಾರವು "ಜಾಗತಿಕ ಚಿಂತಕರು ಮಾಲೆ" ಎಂಬ ಹೊಸ ಪುಸ್ತಕ ಮಾಲೆಯೊಂದನ್ನು ಆರಂಭಿಸಿದೆ, ಸದ್ಯಕ್ಕೆ ೫೦ ಜನ ವಿಶ್ವಚಿಂತಕರನ್ನು ಕುರಿತು ಪುಸ್ತಕಗಳನ್ನು ಬರೆಯಿಸಿ ಪ್ರಕಟಿಸಲು ಉದ್ಯುಕ್ತವಾಗಿದೆ. ಈ ಮಾಲೆಯ ಪುಸ್ತಕಗಳನ್ನು ಸಹೃದಯ ವಾಚಕರು ಪ್ರೀತಿ ಉತ್ಸಾಹಗಳಿಂದ ಸ್ವೀಕರಿಸುವರೆಂದು ಆಶಿಸಲಾಗಿದೆ.

ಈ ಮಾಲೆಯಲ್ಲಿ ಇದೀಗ ಭಾರತದ ಮಹಾನ್ ಸಂತರೂ ಮತ್ತು ದಾರ್ಶನಿಕರೂ ಆದ ಗುರುನಾನಕ್ ಅವರನ್ನು ಕುರಿತು ಗ್ರಂಥ ಪ್ರಕಟವಾಗುತ್ತಿರುವುದು ಸಂತೋಷದ ವಿಷಯ. ಗುರುನಾನಕ್ ಅವರು ಸಿಖ್ ಪಂಥದ ಪ್ರವರ್ತಕರು ಮತ್ತು ಮೊದಲನೆಯ ಮಹಾ ಗುರುಗಳು. ನಮ್ಮ ಸಮಾಜದಲ್ಲಿ ಮತ, ಧರ್ಮ, ಪಂಥಗಳ ಬಗೆಗಿನ ದುರಭಿಮಾನದ ಪ್ರತೀಕವಾಗಿ ಮಾನವ ವಿನಾಶಕಾರಿಯಾದ ಬಿರುಕುಗಳು ಕಾಣಿಸಿಕೊಂಡು ಮಾನವ ಬದುಕೇ ಅಸಹನೀಯವಾಗಿ ಪರಿಣಮಿಸುತ್ತಿರುವುದು ಎಲ್ಲರ ಅನುಭವಕ್ಕೆ ಬಂದಿರುವ ವಿಷಯ. ಆದರೆ ಗುರುನಾನಕ್ ಅವರು ಸಿಖ್ ಪಂಥದ ಗುರುಗಳಾದರೂ ವಿಸ್ತಾರವಾದ ಬದುಕಿನ ತಳಹದಿಯಲ್ಲಿ

ಎಲ್ಲಾ ಧರ್ಮಗಳು ಒಂದೇ ಎಂಬ ದಟ್ಟವಾದ ನಂಬಿಕೆಯನ್ನು ಹೊಂದಿದ್ದ ಉದಾರವಾದ ನಿಲುವಿನ ಶ್ರೇಷ್ಠ ಚಿಂತಕ. ಈ ಕಾರಣದಿಂದಲೇ ಇವರು ಎಲ್ಲಾ ಧರ್ಮಗಳ ಜನತೆಯ ಭಾವಸಾಮರಸ್ಯಕ್ಕೆ ಒತ್ತು ಕೊಟ್ಟು ಅವರ ನಡುವೆ ಪ್ರೀತಿಯ ಮತ್ತು ಸೌಹಾರ್ದದ ಸೇತುವೆಯನ್ನು ನಿರ್ಮಿಸಲು ಶ್ರಮಿಸಿದರು. ಹಿಂದೂ ಮತ್ತು ಮುಸ್ಲಿಂರ ನಡುವೆ ಸೋದರಭಾವ ಬಂಧುತ್ವವನ್ನು ಸ್ಥಾಪಿಸಲು ಅಹರ್ನಿಶಿ ಶ್ರಮಿಸಿದರು. ಹಾಗೆಯೇ ತಮ್ಮ ಸಾಮಾಜಿಕ ಮತ್ತು ದಾರ್ಶನಿಕ ಚಿಂತನೆಗಳನ್ನು ಜನಸಾಮಾನ್ಯರಿಗೆ ಮುಟ್ಟಿಸಲು 'ಗುರುಮುಖಿ' ಎಂಬ ಲಿಪಿಯನ್ನು ಬಳಸಿದರು. ಇದು ಅಂದಿನ ಜನ ಸಾಮಾನ್ಯರಲ್ಲಿ ಆಗಲೇ ಬಳಕೆಯಲ್ಲಿದ್ದ ಭಾಷೆ. ಜನಭಾಷೆಯಲ್ಲೇ ತಮ್ಮ ಬೋಧನೆಗಳನ್ನು ಪ್ರಸ್ತುತಪಡಿಸುವ ಮೂಲಕ ಆ ಜನತೆಯ ಸಂಸ್ಕೃತಿಯನ್ನು ಗಟ್ಟಿಗೊಳಿಸಲು ಕಾರಣವಾದರು. ವಿವಿಧ ಧರ್ಮದ ಮುಖಂಡರಲ್ಲಿ ತಾರತಮ್ಯವಿಲ್ಲದೇ ಭೋಜನ ವ್ಯವಸ್ಥೆಯನ್ನು ಇವರು ಜಾರಿಗೆ ತಂದಿದ್ದರಿಂದ ತರ-ತಮಗಳ ಅಂತರ ಕಡಿಮೆಯಾಗಿ ನಾವೆಲ್ಲರೂ ಒಂದೇ ಎಂಬ ಭಾವನೆ ಜನರಲ್ಲಿ ಸ್ಫುರಿಸಲು ಅವಕಾಶವಾಯಿತು. ಹಾಗೆಯೇ ತಮ್ಮ ಪ್ರತಿಭಾಬಲದಿಂದ ಸರಳವಾದ ಮತ್ತು ಜನಮುಖಿಯಾದ ಸಾಹಿತ್ಯವನ್ನು ಅವರು ಸೃಷ್ಟಿಸಿದರು. ಈ ಮೂಲಕ ಸಿಖ್ ಧರ್ಮೀಯ ಸಾಹಿತ್ಯದ ಸೃಷ್ಟಿಗೆ ಹೊಸ ಚೇತನವನ್ನು ತುಂಬಿದರು. ಗುರುನಾನಕ್ ಅವರು ಬೋಧಿಸಿದ ಸಿದ್ಧಾಂತಗಳು ತುಂಬಾ ಪ್ರಗತಿಪರವಾಗಿವೆ. ಅವತಾರಗಳ ಮತ್ತು ಬಹುದೇವೋಪಾಸನೆಯ ನಿರಾಕರಣೆ, ಏಕದೇವತೋಪಾಸನೆಯ ಪ್ರತಿಪಾದನೆ; ದೇವರಿಗೆ ನಿರ್ದಿಷ್ಟ ರೂಪಲಿಂಗಗಳಿಲ್ಲ; ಆತ ನಿರಾಕಾರ ಮತ್ತು ಸರ್ವಶಕ್ತ, ಸಾಂಪ್ರದಾಯಿಕವಾದ ಹೋಮ-ಹವನ, ಯಜ್ಞ-ಯಾಗಗಳಿಂದ, ಮೂರ್ತಿ ಪೂಜೆಯಿಂದ, ಯಾತ್ರೆ-ಜಾತ್ರೆಗಳಿಂದ ಒಣ ಸಂಪ್ರದಾಯಗಳ ಪಾಲನೆಯಿಂದ ಭಗವಂತನ ಸಾಕ್ಷಾತ್ಕಾರ ಸಾಧ್ಯವಿಲ್ಲ; ನಿರ್ಮಲ ಮನಸ್ಸಿನ ಪ್ರಾರ್ಥನೆಯಿಂದಲೇ ಭಗವಂತನ ಇರವಿನ ಅರಿವನ್ನು ಪಡೆಯುವುದು ಸಾಧ್ಯ. ಭಗವತ್ ಪ್ರಾರ್ಥನೆಯೇ ಮನಸ್ಸಿನ ಶುದ್ಧೀಕರಣ ಸಾಧನ. ದೇವರು ಮತ್ತು ಗುರುವಿನ ಪೂರ್ಣ ಕೃಪೆಗೆ ವ್ಯಕ್ತಿ ನಡೆ-ನುಡಿಗಳು ಸಂಸ್ಕರಣಗೊಂಡು ಶುದ್ಧವಾಗಬೇಕು; ಭಕ್ತಿ ಮಾರ್ಗವೊಂದೇ ಭಗವಂತನ ಸಾಕ್ಷಾತ್ಕಾರಕ್ಕೆ ದಾರಿ. ಇಂತಹ ಪ್ರಗತಿಪರವಾದ ಮತ್ತು ವಾಸ್ತವವಾದ ಜೀವನ ಮಾರ್ಗವನ್ನು ಮತ್ತು ಮೂಲಭೂತವಾಗಿ ವ್ಯಕ್ತಿ ಶುದ್ಧತೆಯನ್ನು ಪ್ರತಿಪಾದನೆ ಮಾಡಿದ ಗುರುನಾನಕ್ ಅವರು ಇಂದಿಗೂ ಜನರ ಮನಸ್ಸಿನಲ್ಲಿ ಗೌರವದ ಸ್ಥಾನವನ್ನು ಪಡೆದು, ಪ್ರಸ್ತುತರಾಗಿದ್ದಾರೆ. ಇಂತಹ ಮಹಾನ್ ಸಾಧಕರೊಬ್ಬರ, ಚಿಂತಕರೊಬ್ಬರ ಜೀವನ ಚರಿತ್ರೆಯೊಂದನ್ನು ನಮ್ಮ ಪ್ರಸಿದ್ಧ ಲೇಖಕರಲ್ಲಿ ಒಬ್ಬರಾದ ಡಾ.ಡಿ.ಬಿ.ರಾಮಚಂದ್ರಾಚಾರ್ ಅವರು ತುಂಬಾ ಆಸಕ್ತಿಯಿಂದ ಶ್ರಮವಹಿಸಿ ಸಿದ್ಧಪಡಿಸಿ ಕೊಟ್ಟಿದ್ದಾರೆ.

ತಮ್ಮ ಸೃಜನ ಮತ್ತು ಸೃಜನೇತರ ಬರವಣಿಗೆಯಿಂದ ಕನ್ನಡ ವಿದ್ವತ್ ಲೋಕದಲ್ಲಿ ಪರಿಚಿತರಾಗಿರುವ ಡಾ.ಡಿ.ಬಿ. ರಾಮಚಂದ್ರಾಚಾರ್ ಅವರ ಈ ಕೃತಿ

ಅತ್ಯಂತ ಸರಳವಾಗಿ ಮತ್ತು ಆಕರ್ಷಕವಾಗಿ ಗುರುನಾನಕ್‌ರವರ ಸಾಧನಾಮಯ ಆದರ್ಶಜೀವನದ ಚಿತ್ರವನ್ನು ಇಲ್ಲಿ ಒದಗಿಸಿ ಕೊಟ್ಟಿದೆ. ಇವರಿಗೆ ಮತ್ತು ಈ ಕೃತಿಯನ್ನು ಜಾಗತಿಕ ಚಿಂತಕರ ಮಾಲೆಯಲ್ಲಿ ಪ್ರಕಟಿಸಲು ಸಮ್ಮತಿಸಿದ ಪ್ರಾಧಿಕಾರದ ಸದಸ್ಯರಿಗೆ ಈ ಮಾಲೆಯ ಸಂಪಾದಕರಾದ ಡಾ.ಎಂ.ಎಚ್. ಕೃಷ್ಣಯ್ಯ ಮತ್ತು ಡಾ. ಸಿ. ವೀರಣ್ಣ ಅವರಿಗೆ ಹಾಗೂ ಇದನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟಿರುವ ವಿಭಿನ್ನ ಮುದ್ರಣಾಲಯದ ಮಾಲೀಕರು ಮತ್ತು ಸಿಬ್ಬಂದಿ ವರ್ಗಕ್ಕೆ ಪ್ರಾಧಿಕಾರದ ಕೃತಜ್ಞತೆಗಳು.

ದಿನಾಂಕ :
ಸ್ಥಳ : ಬೆಂಗಳೂರು

ಡಾ.ಎಚ್.ಜೆ. ಲಕ್ಕಪ್ಪಗೌಡ
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಸಂಪಾದಕರ ಮಾತು

ಮಾನವ ಸಮಾಜ ಚಲನಶೀಲವಾದುದು. ಮಾನವನ ಸಾಮಾಜಿಕ ವ್ಯವಸ್ಥೆಯ ಅಂತರ್ ಸಂಘರ್ಷ ಮೂಲಕ ಈ ಚಲನಶೀಲತೆ ನಿರಂತರವಾಗಿ ಇರುತ್ತದೆ. ಚರಿತ್ರೆಯ ಚಕ್ರ ಎಂದೂ ಹಿಂದಕ್ಕೆ ಹೋಗುವುದಾಗಲೀ, ಪುನರಾವರ್ತನೆ ಆಗುವುದಾಗಲೀ ಸಾಧ್ಯವಾಗಿಲ್ಲ. ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯನ್ನು ಅವಲಂಬಿಸಿಕೊಂಡು ಆಯಾ ಕಾಲಗಳಲ್ಲಿ ಹೊಸ ಹೊಸ ವಿಚಾರಧಾರೆಗಳು ಸಮಾಜದಲ್ಲಿ ಬದಲಾವಣೆಗೊಳ್ಳುತ್ತವೆ. ಸಮುದಾಯದ ಮಾತು ಒಬ್ಬ 'ಪ್ರತಿಭಾವಂತ'ನ ನುಡಿಯಾಗಿ ಹೊರಬಂದು ಸಮಾಜದ ಚಲನೆಗೆ ಅನುವುಮಾಡುತ್ತದೆ.

ಜಗತ್ತಿನಲ್ಲಿ ಕಾಲಕಾಲಕ್ಕೆ ತಮ್ಮ ವಿಚಾರಗಳಿಂದ ಮಹಾನ್ ದಾರ್ಶನಿಕರೆಂದು ಹೆಸರು ಪಡೆದ ಅನೇಕ ಮಹಾನುಭಾವರ ವೈಚಾರಿಕ ವೈವಿಧ್ಯಗಳನ್ನು ಕನ್ನಡದ ಓದುಗರಿಗೆ ಪರಿಚಯಿಸಬೇಕೆಂಬುದೇ "ಜಾಗತಿಕ ಚಿಂತಕರು ಮಾಲೆ"ಯ ಉದ್ದೇಶ. ಬದಲಾಗುತ್ತಿರುವ ಸಂದರ್ಭದಲ್ಲಿ ದೇಶಭಾಷೆಗಳನ್ನು ದಾಟಿ ಆಧುನಿಕ ಸಂವಹನ ಮಾಧ್ಯಮಗಳು ಜಗತ್ತನ್ನು ಒಂದು ಪುಟ್ಟ ಸಂಸಾರವನ್ನಾಗಿ ಮಾಡುತ್ತಿರುವಾಗ, ನಮ್ಮ ಜನ ಬೇರೆ ಬೇರೆ ದೇಶ ಭಾಷೆಗಳಲ್ಲಿ ಪ್ರಸಿದ್ಧರಾದ, ಸಮಾಜದ ಬೆಳವಣಿಗೆಗೆ, ಬದಲಾವಣೆಗೆ ಕಾರಣೀಭೂತರಾದ ಚಿಂತಕರ ಚಿಂತನೆಗಳನ್ನು ಪರಿಚಯಿಸಿಕೊಳ್ಳಲೆಂದು ಈ ಪುಸ್ತಕಗಳನ್ನು ಹೊರ ತರಲಾಗುತ್ತಿದೆ.

ಈ ಮಾಲೆಯಲ್ಲಿ ಬರುವ ಎಲ್ಲಾ ಚಿಂತಕರೂ ಪ್ರಗತಿಪರರು, ಸಮಾಜದ ಬದಲಾವಣೆಗೆ ಪ್ರೇರೇಪಿಸಿದವರು ಎಂದು ಹೇಳುತ್ತಿಲ್ಲ. ಆದರೆ ಇವರೆಲ್ಲರೂ ತಮ್ಮ ಆಲೋಚನೆಗಳಿಂದ ತಮ್ಮ ಕಾಲದಲ್ಲಿ ಮತ್ತು ಈಗಲೂ ಸಮಾಜದ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿದ ಸಮರ್ಥರು ಎಂಬುದನ್ನು ನಾವು ಮರೆಯುವಂತಿಲ್ಲ. ಅಲ್ಲದೆ ಇವರಲ್ಲಿ ಕೆಲವರು ಅವರವರ ಕಾಲದಲ್ಲಿ ಪ್ರಸ್ತುತವಾದಂತೆ, ಬದಲಾದ ಸಾಮಾಜಿಕ ಸಂದರ್ಭದಲ್ಲಿ ಮೊದಲಿನ ಮಹತ್ವವನ್ನು ಕಳೆದುಕೊಂಡಿರಬಹುದು. ಆದರೂ ವಿಚಾರಗಳ ವಿವಿಧ ಮಗ್ಗಲುಗಳ ಪರಿಚಯ ನಮಗೆ ಆಗುವುದು ಅಗತ್ಯವೆಂದು ಭಾವಿಸಿ ಅವರನ್ನು ಈ ಮಾಲೆಗೆ ಸೇರಿಸಲಾಗಿದೆ. ಕನ್ನಡ ಸಾರಸ್ವತ ಮತ್ತು ತಾತ್ವಿಕ ಲೋಕದಲ್ಲಿ 'ತಾಜ ಚಿಂತಕರ' ಅಭಾವವಿದೆಯೆಂಬುದು ಕಹಿಯಾದರೂ ಸತ್ಯವಾದ ವಿಚಾರವೇ. ಆದುದರಿಂದ ಬೇರೆ ಬೇರೆ ಜನಾಂಗಗಳ ಪ್ರಖರಮತಿಗಳ ಚಿಂತನೆಗಳನ್ನು ಪರಿಚಯ ಮಾಡಿಕೊಳ್ಳುವುದು ಕನ್ನಡಿಗ ವಿಚಾರವಂತರಿಗೆ ಅತ್ಯಗತ್ಯವಾದದ್ದು. ಈ ಮಾಲೆಯ ಕೃತಿಗಳ ಓದುವಿಕೆಯಿಂದ ಕನ್ನಡಿಗರಿಗೆ

ಸ್ವಲ್ಪವಾದರೂ ವಿಭಿನ್ನ ವೈಚಾರಿಕ ಜಗತ್ತಿನ ಪರಿಚಯವಾದರೆ ಕನ್ನಡ ಪುಸ್ತಕ ಪ್ರಾಧಿಕಾರ ಕೈಗೊಂಡ ಈ ಯೋಜನೆ ಸಾರ್ಥಕವಾಯಿತೆಂದು ನಾವು ಭಾವಿಸುತ್ತೇವೆ.

ಡಾ. ಸಿ. ವೀರಣ್ಣ
ಪ್ರೊ.ಎಂ.ಎಚ್. ಕೃಷ್ಣಯ್ಯ

೫.೫.೨೦೦೦
ಬೆಂಗಳೂರು

ಎರಡು ಮಾತು

ಈ ತಿಂಗಳಿಗೆ ನಿವೃತ್ತನಾಗಿ ಒಂದು ವರುಷ ಕಳೆಯಿತು. ನಿವೃತ್ತಿಯ ಜೀವನ ವ್ಯರ್ಥಗೊಳ್ಳದಂತೆ ಹಾಗೂ ಅರಿವಿನ ಎಲ್ಲೆ ವಿಸ್ತಾರಗೊಳ್ಳುವಂತೆ ಗುರುನಾನಕ್‌ರ ಬಗ್ಗೆ ಪುಸ್ತಕವೊಂದನ್ನು ಬರೆದು ಕೊಡುವಂತೆ, ಕರ್ತೃತ್ವಶಾಲಿಗಳೂ, ಹಿರಿಯ ಮಿತ್ರರೂ, ಪುಸ್ತಕ ಪ್ರಾಧಿಕಾರದ ಅಧ್ಯಕ್ಷರೂ ಆದ ಡಾ. ಎಚ್.ಜೆ. ಲಕ್ಕಪ್ಪಗೌಡರು ಅವಕಾಶವೊಂದನ್ನು ನೀಡಿ ಪ್ರೋತ್ಸಾಹಿಸಿದ್ದಾರೆ. ಸನ್ಮಾನ್ಯ ಲಕ್ಕಪ್ಪಗೌಡರಿಗೆ ಹಾಗೂ ಅವರ ಸಿಬ್ಬಂದಿ ವರ್ಗದವರಿಗೆ ನನ್ನ ಆತ್ಮೀಯ ವಂದನೆಗಳು. ಅಧ್ಯಯನಕ್ಕೆ ಅಗತ್ಯವಾಗಿದ್ದ ಕೆಲವು ಗ್ರಂಥಗಳನ್ನು ಒದಗಿಸಿದ ಪ್ರಿಯ ಬಂಧು ಶ್ರೀಕಾಂತನಿಗೆ, ಹಸ್ತಪ್ರತಿಯನ್ನು ತಯಾರಿಸಿ, ಬರಹದ ಲೋಪದೋಷಗಳತ್ತ ಗಮನ ಸೆಳೆದ ಸಹಧರ್ಮಿಣಿ ಗಿರಿಜೆಗೆ ಧನ್ಯವಾದಗಳು ಎನ್ನಲೆ ? ಕೃತಕವಾದೀತು ಅಲ್ಲವೆ ?

೮.೧.೨೦೦೧ **ಡಾ. ಡಿ.ಬಿ. ರಾಮಚಂದ್ರಾಚಾರ್**

ಎರಡನೆ ಮುದ್ರಣದ ಅರಿಕೆ

ಪುಸ್ತಕ ಮರುಮುದ್ರಣಗೊಳ್ಳುವ ಕ್ರಿಯೆ, ಲೇಖಕನ ಆಯಸ್ಸನ್ನು ಹೆಚ್ಚಿಸುವ ಕ್ರಿಯೆ.

ನನ್ನ ಆಯಸ್ಸಿನ ಹೆಚ್ಚಳಕ್ಕೆ ಕಾರಣರಾದ ಪ್ರಿಯ ಮಿತ್ರರೂ, ನಾಡಿನ ಸುಪ್ರಸಿದ್ಧ ಕವಿಗಳೂ ಆದ ಡಾ. ಸಿದ್ಧಲಿಂಗಯ್ಯನವರಿಗೆ, ಮತ್ತು ಸಹೃದಯ, ಕಾರ್ಯಶೀಲ ಅಧಿಕಾರಿಗಳಾದ ಅಶೋಕ. ಎನ್. ಚಲವಾದಿಗಳಿಗೆ ಹಾಗೂ ಅವರ ಸಿಬ್ಬಂದಿವರ್ಗದವರಿಗೆ ಪ್ರೀತಿಯ ಧನ್ಯವಾದಗಳು.

ಡಾ. ಡಿ.ಬಿ. ರಾಮಚಂದ್ರಾಚಾರ್

ಗುರುನಾನಕ್

(ಜೀವನ) ಹಿನ್ನೆಲೆ :

ಸಮಾಜದಲ್ಲಿ ಮಹಾನ್ ಚೇತನ ಕಾಣಿಸಿಕೊಂಡಾಗ, ಆ ಚೇತನದ ಆಗಮನಕ್ಕೆ ಸಮಾಜ ಸಜ್ಜಾಗಿರುತ್ತದೆ. ಗುರು ನಾನಕ್‌ರು ಉದಿಸಿದ ಸನ್ನಿವೇಶದ ಸ್ಥೂಲ ಪರಿವೀಕ್ಷಣೆ ಮೇಲಿನ ಮಾತನ್ನುಸಮರ್ಥಿಸುತ್ತದೆ.

ಮಧ್ಯಕಾಲೀನ ಭಾರತ ರಾಜಕೀಯವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಸಂಕ್ಷೋಭೆಗೆ ಒಳಗಾಗಿದ್ದ ಭೂಪ್ರದೇಶ. ಹಿಂದೂ ಧರ್ಮದ ವರ್ಣಾಶ್ರಮ ವ್ಯವಸ್ಥೆ ತನ್ನ ಮೂಲ ವಿಶಾಲ, ಗಂಭೀರ ದೃಷ್ಟಿಯನ್ನು ಕಳೆದುಕೊಂಡು, ಪರಸ್ಪರರನ್ನು ಶೋಷಿಸುವ ತಂತ್ರವಾಗಿ, ನಾಲ್ಕು ವರ್ಣಗಳು ಮತ್ತೆ ಮತ್ತೆ ವಿಭಾಗಗೊಂಡು, ಜನ ಸಮುದಾಯ ಜಾತಿಯ ಹೆಸರಿನಲ್ಲಿ ಛಿದ್ರ ಛಿದ್ರವಾಗಿತ್ತು.

ಸಂಸಾರದ ವ್ಯಕ್ತಿ ಕೇಂದ್ರದಿಂದ ಸನ್ಯಾಸವೆಂಬ ಸಮೂಹ ಕೇಂದ್ರಕ್ಕೆ ಧಾವಿಸಿ, ಆತ್ಮೋದ್ಧಾರ, ಸಮಾಜೋದ್ಧಾರಗಳನ್ನು ಸಾಧಿಸಬೇಕಾದ ಸನ್ಯಾಸಾಶ್ರಮ ಹತ್ತು ಬಗೆಗಳಾಗಿ ಒಡೆದು ಹೋಗಿತ್ತು.

ಮಾನವ ಶಕ್ತಿಯ ಉತ್ಕೃಷ್ಟತೆಯನ್ನು ಸಾಧಿಸಿ, ಜಗತ್ತಿಗೆ ಪ್ರತಿಬಿಂಬಿಸುವ ಯೋಗಿ ವರ್ಗದಲ್ಲಿ ಹನ್ನೆರಡು ವಿಧಗಳು ಉದ್ಭವಿಸಿತ್ತು.

ವಿವಿಧ ಪಂಗಡಗಳ ಧರ್ಮಗುರುಗಳಲ್ಲಿ ಪರಸ್ಪರ ಪೈಪೋಟಿ, ಒಣಪ್ರತಿಷ್ಠೆಗಳು, ಪರಾಕಾಷ್ಠತೆಗೆ ತಲ್ಪಿತ್ತು.

ಒಂದು ಕಾಲದಲ್ಲಿ ಸಮಾಜದ ಕಣ್ಣಾಗಿದ್ದ ಬ್ರಾಹ್ಮಣರು, ವೇದ, ಶಾಸ್ತ್ರ, ಪುರಾಣಗಳ ಶುಷ್ಕ ಚರ್ಚೆ, ಟೀಕೆ, ಟಿಪ್ಪಣಿಗಳಲ್ಲಿ ಮಗ್ನರಾಗಿದ್ದರು.

ಜೈನ, ಬೌದ್ಧ ಮತಗಳ ಪ್ರಚಂಡ ಚಂಡ ಮಾರುತದಿಂದ ಹಿಂದೂ ಧರ್ಮವನ್ನು ರಕ್ಷಿಸಿಕೊಂಡು ಬ್ರಾಹ್ಮಣರು ದಣಿವಾರಿಸಿಕೊಳ್ಳುವುದರಲ್ಲಿ ನಿರತರಾಗಿದ್ದರು.

ಷಟ್‌ದರ್ಶನಗಳು ವಾದದ ಗದಾ ಪ್ರಹಾರಕ್ಕೆ ಸಿಕ್ಕಿ ತುಂಡು ತುಂಡುಗಳಾಗಿ ಹೋಗಿದ್ದವು. ಶಾಸ್ತ್ರವೇತ್ತರೆಂದೆನಿಸಿಕೊಂಡವರು ಜನ ಸಾಮಾನ್ಯರಲ್ಲಿ ಪಾರಲೌಕಿಕ ಭಯವನ್ನು ಬಿತ್ತುತ್ತಾ, ಮೂಢ ನಂಬಿಕೆಗಳನ್ನು ಹುಟ್ಟಿ ಹಾಕುತ್ತಾ, ಮಂತ್ರ-ಮಾಟಗಳಿಂದ ಜನತೆಯನ್ನು ಆಕರ್ಷಿಸುತ್ತಾ, ಮೋಸದ ಬದುಕಿಗೆ ನಾಂದಿ ಹಾಡಿದ್ದರು. ಸತ್ಯವೆನ್ನುವುದು

ಸಂಪೂರ್ಣ ಅಂತರ್ಧಾನವಾಗಿ, ಸುಳ್ಳು ನಾನಾ ವೇಷ ಭೂಷಣಗಳಿಂದ ಕಂಗೊಳಿಸುತಿತ್ತು.

ತೈಮೂರ, ಬಾಬರರಂತಹ ಧಾಳಿಕೋರರ ಧಾಳಿಗೆ ಸಿಕ್ಕಿದ ಜೈನ, ಹಿಂದು ಮತಗಳು ಅಗಾಧ ಸಂಖ್ಯೆಯಲ್ಲಿ ತಮ್ಮ ತಮ್ಮ ಮತಗಳ ಹಿಂಬಾಲಕರನ್ನು ಕಳೆದುಕೊಂಡು, ಮುಸ್ಲಿಂ ಪ್ರಭುತ್ವದ ಕ್ರೂರತೆಗೆ ಮರವಟ್ಟು ಹೋಗಿದ್ದವು. ಗಂಡಸರ ಕಾಮುಕತನಕ್ಕೆ ಹೆಂಗಸರು ಬಲಿ ಪಶುಗಳಾಗಿ, ತಮ್ಮತನವನ್ನು ಕಳೆದುಕೊಂಡು, ಜೀವವಿದ್ದ ಬೊಂಬೆಗಳಾಗಿದ್ದರು.

ಹಿಂದು ಮತ್ತು ಮುಸ್ಲಿಂರಲ್ಲಿದ್ದ ಅಪನಂಬಿಕೆ ಪರಸ್ಪರರ ದ್ವೇಷವಾಗಿ ಉಲ್ಬಣಗೊಂಡಿತ್ತು.

ಭಾರತದ ಮುಸ್ಲಿಂರು ಅರೇಬಿಯಾದಿಂದ ಬಂದವರೆ ? ಪ್ರಾಣಭಯದಿಂದ, ಮಾನನಷ್ಟದಿಂದ, ಅಧಿಕಾರ ಮತ್ತು ಸಂಪತ್ತಿನ ಲೋಭದಿಂದ ಮತಾಂತರಗೊಂಡಿದ್ದ ಹಿಂದುಗಳೇ ಅಲ್ಲವೆ ?

ಹೊಸ ಮತಾಂತರಿ ಹೆಚ್ಚು ಧರ್ಮಾಂಧನಾಗಿರುವುದೂ ಸಹ ಸಹಜವೇ.

ಹಿಂದುಗಳು ವೇದವನ್ನಾಗಲಿ, ಮುಸ್ಲಿಂರು ಕುರಾನ್‌ನನ್ನಾಗಲಿ ಅಧ್ಯಯನ ಮಾಡದೆ, ಅಂಧಾನುಕರಣೆಯ ಆಚರಣೆಗಳಲ್ಲಿಯೇ ತೊಳಲಾಡುತ್ತಿದ್ದರು.

ಬ್ರಾಹ್ಮಣರು ಮತ್ತು ಮೌಲ್ವೀಗಳು ತಮ್ಮ ತಮ್ಮ ಧರ್ಮಗಳ ಶ್ರೇಷ್ಠತೆಯನ್ನು ಸ್ಥಾಪಿಸಲು ಪರಸ್ಪರ ದೂಷಿಸುತ್ತಾ ತಮ್ಮ-ತಮ್ಮ ಹಿಂಬಾಲಕರನ್ನು ಹಿಂಸಾಚಾರಕ್ಕೆ ಪ್ರಚೋದಿಸುತ್ತಾ, ಸಮಾಜದ ಶಾಂತಿಯನ್ನು ಕಲುಷಿತಗೊಳಿಸಿದ್ದರು. ಕ್ರಿ.ಶ. ಹತ್ತನೆ ಶತಮಾನದಿಂದ ಮುಸಲ್ಮಾನರ ಧಾಳಿಗೆ ಈಡಾದ ಈ ಭೂಪ್ರದೇಶ ತೈಮೂರನ ಧಾಳಿಯಲ್ಲಿ ತತ್ತರಿಸಿ ಹೋಗಿತ್ತು. ತೈಮೂರ್ ಉತ್ತರ ಹಿಂದೂಸ್ಥಾನವನ್ನೆಲ್ಲಾ ಖಡ್ಗಬಲದಿಂದ ತನ್ನದನ್ನಾಗಿಸಿಕೊಳ್ಳುವ ಮಹತ್ವಾಕಾಂಕ್ಷೆಯಲ್ಲಿ, ಹಿಂದುಗಳೆನ್ನದೆ, ಮುಸ್ಲಿಂರೆನ್ನದೆ, ತನಗೆ ಎದುರಾದವರನ್ನು ಕತ್ತರಿಸುತ್ತಾ, ಊರು ಊರುಗಳನ್ನು ಲೂಟಿ ಮಾಡುತ್ತಾ, ಸರ್ವ ಜಾತಿಯ ಮಹಿಳೆಯರ ಮಾನಭಂಗ ಗೈಯುತ್ತಾ, ಅವನ ಸೈನ್ಯ ಬದುಕನ್ನು ನರಕವನ್ನಾಗಿಸಿಬಿಟ್ಟಿತ್ತು.

ರಾಜರುಗಳು, ನವಾಬರು, ಪಾಳೇಗಾರರು, ತಮ್ಮ ತಮ್ಮ ರಾಜ್ಯಗಳನ್ನಾಗಲಿ, ಪ್ರಜೆಗಳನ್ನಾಗಲಿ, ಕಡೆಗೆ ತಮ್ಮನ್ನಾಗಲಿ ಸಂರಕ್ಷಿಸಿಕೊಳ್ಳಲಾಗದೆ, ತೈಮೂರನ ಮೃಗೀಯ ಶಕ್ತಿಗೆ ತಲೆಬಾಗಿದ್ದರು.

ದೇವರು, ಧರ್ಮಗಳಲ್ಲಿನ ಸಾಮಾನ್ಯನ ನಂಬಿಕೆ ಅಲ್ಲಾಡಿ ಹೋಗಿತ್ತು.

"ಜನಮನವೇ ಯುಗ ಶಕ್ತಿಯಾಗಿ" ತನ್ನ ಸನ್ಮೌಲ್ಯಗಳ ರಕ್ಷಣೆಗಾಗಿ ಹಂಬಲಿಸುತ್ತಿತ್ತು.

ಇಂತಹ ಮಂಕು ಕವಿದ ವಾತಾವರಣದಲ್ಲಿ ಭಾರತದ ಪಶ್ಚಿಮಭಾಗದಲ್ಲಿ, ಅಪಾರವಾಗಿ ಮುಸ್ಲಿಂ ಧಾಳಿಯಿಂದ ಹಾನಿಗೆ ಒಳಗಾಗಿದ್ದ ಪಂಜಾಬ್ ಪ್ರದೇಶದಲ್ಲಿ ಸಾತ್ವಿಕ ಮಹಾನಕ್ಷತ್ರವೊಂದು ಲೋಕಕ್ಕೆ ಮಾರ್ಗದರ್ಶಕ ಬೆಳಕಾಗಿ ಮೂಡಿತು.

ಭಾರತದಂತಹ ವಿಶಾಲವೂ, ವಿವಿಧ ಭಾಷಾ ಸರಸ್ವತಿಯ ಆವಾಸ ಸ್ಥಳವೂ ಆದ ನಾಡಿನಲ್ಲಿ ವ್ಯಕ್ತಿಯೋರ್ವ ಸರ್ವ ವ್ಯಾಪಿಯಾಗಿ ಕಾರ್ಯನಿರ್ವಹಿಸುವುದು ಕಷ್ಟ. ಶ್ರೀ ಗುರುನಾನಕ್ ಅವರು ಜನ್ಮ ತಾಳಿದ ಸಂದರ್ಭದಲ್ಲಿಯೇ ಭಾರತದ ವಿವಿಧ ಭಾಗಗಳಲ್ಲಿ ಜನ್ಮವೆತ್ತಿದ ಸಂತರು ಅಂದಿನ ರಾಜಕೀಯ, ಸಾಮಾಜಿಕ, ಧಾರ್ಮಿಕ, ಅಭದ್ರತೆ, ಗೊಂದಲಗಳ ನಡುವೆಯೇ 'ಶ್ರೀ ಸಾಮಾನ್ಯ'ನ ತಲ್ಲಣಗೊಂಡ ಮನಸ್ಸಿಗೆ ಆಶ್ವಾಸನೆ, ನೈತಿಕಶಕ್ತಿ, ನೆಮ್ಮದಿಗಳನ್ನು ನೀಡಿ ನಂಬಿಕೆಯನ್ನು ಪುನರ್ ಸ್ಥಾಪಿಸಿದರು.

ತಾಮಸ-ರಾಜಸ ಶಕ್ತಿಗಳ ವಿರುದ್ಧ ಸಾತ್ವಿಕ ಶಕ್ತಿ ಸಾಧಿಸಿದ ಸಾರ್ವಕಾಲಿಕ ವಿಜಯ ಇದು.

ಕಾಶಿಯ ಕಬೀರ್ ಮತ್ತು ರವಿದಾಸ್ - ಶ್ರೀ ರಮಾನಂದರ ಪ್ರಭಾವದಲ್ಲಿ ಭಕ್ತಿ ಪಂಥದ ರೂವಾರಿಗಳಾಗಿ, ಸಮಾಜದಲ್ಲಿ ರೂಢಮೂಲವಾಗಿ ಬೆಳೆದು ಬಂದಿದ್ದ ಜಾತಿ ಪದ್ಧತಿಗೆ ಪ್ರಬಲ ಪರಶುಗಳಾಗಿದ್ದರು.

ಶ್ರೀ ರಮಾನಂದರು ಶ್ರೀ ರಾಮಾನುಜರ ಶಿಷ್ಯ ಪರಂಪರೆಗೆ ಸೇರಿದವರು. ಜಾತಿ ಪದ್ಧತಿಯನ್ನು ಮೀರಿನಿಂತು ಜನ ಸಾಮಾನ್ಯರ ಬದುಕನ್ನು ಎತ್ತಲು ಪ್ರಯತ್ನಿಸಿದವರು. ಕಬೀರ್ ಆಗಲೇ ಹಿಂದು-ಮುಸ್ಲಿಂರ ನಡುವೆ ಸ್ನೇಹ ಸೇತುವೆಯಾಗಿದ್ದರು.

ನಾನಕರು ಸಾರ್ವಜನಿಕ ರಂಗದಲ್ಲಿ ಕಾಣಿಸಿಕೊಳ್ಳುವ ಪೂರ್ವದಲ್ಲಿಯೇ ಅವರ ಕಾರ್ಯಕ್ಷೇತ್ರಕ್ಕೆ ಇಂಬಾಗಿ ಸಿದ್ಧತೆ ನಡೆದಿತ್ತು. ಮಾರ್ಗದರ್ಶನ ಸಿದ್ಧವಾಗಿತ್ತು. ಬಂಗಾಲದ ಶ್ರೀ ಚೈತನ್ಯ ದೇವ, ಅಸ್ಸಾಂನ ಶ್ರೀ ಶಂಕರ ದೇವ, ಕರ್ನಾಟಕದ ಶ್ರೀ ಪುರಂದರದಾಸ, ಮಹಾರಾಷ್ಟ್ರದ ನಾಮದೇವ, ಚಿತ್ತೂರಿನ ರಾಣಿ-ಸಂತ ಝಲಿ, ರಾಜಸ್ಥಾನದ ಭಕ್ತ ಮೀರಾಬಾಯಿ, ಶ್ರೀ ಗುರುನಾನಕ್ ಅವರ ಸಮಕಾಲೀನರು.

ನೇಕಾರ ಜಾತಿಯ ಕಬೀರ, ಚಮ್ಮಾರ ಜಾತಿಗೆ ಸೇರಿದ ರವಿದಾಸ, ಒಕ್ಕಲಿಗನಾಗಿದ್ದ ಧನ್ನಾ, ಕ್ಷೌರಿಕನಾಗಿದ್ದ ಸೇನಾ, ರಾಜ್‌ಪುತ್‌ನಾಗಿದ್ದ ಪೀಪಾ – ರಮಾನಂದರ ಪ್ರಮುಖ ಶಿಷ್ಯರು. ಚಿತ್ತೂರಿನ ರಾಣಿ ಝಲೀ, ಮೇವಾರದ ಮೀರಾಬಾಯಿ ಅವರಂತಹ ಉಚ್ಚಕುಲದವರು ರವಿದಾಸನಿಂದ ಉಪಾಸನಾ ದೀಕ್ಷೆ ಪಡೆದು – ಭಕ್ತಿಗೆ ಜಾತಿಯ ಸೋಂಕಿಲ್ಲವೆಂಬುದನ್ನು ಜಗತ್ತಿಗೆ ಸಾರಿದವರು.

ಇಂತಹ ಅಭೂತಪೂರ್ವ ಸಾತ್ವಿಕ ಕ್ರಾಂತಿಯ ಮಂಗಳ ಸನ್ನಿವೇಶದಲ್ಲಿ – ಭಕ್ತಿ – ಶಕ್ತಿಗಳ ಸಂಗಮವಾಗಿ ರೂಪು ಪಡೆದ, ಸಿಕ್ ಜನಾಂಗ–ಧರ್ಮಗಳ ಕುಂಡಲಿನಿ ಶಕ್ತಿಯಾಗಿ ಕಾಣಿಸಿಕೊಂಡ ಮಹಾನ್ ದಾರ್ಶನಿಕ ಸಂತ ಶ್ರೀ ಗುರು ನಾನಕ್.

ಬಾಲ್ಯ ಮತ್ತು ಯೌವ್ವನ

ಅಂದಿನ ಪಂಜಾಬ್ ಪ್ರಾಂತ್ಯದ ತಲವಂದಿ ಎಂಬ ಗ್ರಾಮದ ಕಂದಾಯಾಧಿಕಾರಿಯಾಗಿದ್ದ ಶ್ರೀ ಮೆಹತ ಕಾಲು ಮತ್ತು ತೃಪ್ತ ಎಂಬ ದಂಪತಿಗಳ ಮೂರನೆ ಮಗುವಾಗಿ ಸಾವಿರದ ನಾನೂರ ಅರವತ್ತೊಂಬತ್ತು ಏಪ್ರಿಲ್ ಹದಿನೈದರಂದು ನಾನಕ್ ಜನಿಸಿದ (೧೫.೪.೧೪೬೯). ನಾನಕನಿಗೆ ಒಬ್ಬ ಅಣ್ಣ, ಒಬ್ಬ ಅಕ್ಕ ಜೊತೆಗಾರರಾಗಿ ಬೆಳೆದರು.

ಮಗುವಿನ ಜಾತಕವನ್ನು ಪರಿಶೀಲಿಸಿದ ಮನೆತನದ ಪುರೋಹಿತ ಹರ ದಯಾಲ್ "ಈ ಮಗು ಸಾಮಾನ್ಯರ ಮನೆಯಲ್ಲಿ ಹುಟ್ಟಿದರೂ ಸಾಮಾನ್ಯನಲ್ಲ. ಧರ್ಮ ಗುರುವಾಗಿ ಎಲ್ಲರಿಂದ ಪೂಜಿತನಾಗುವ, ಅಸಮಾನ್ಯನೆಂದೆನಿಸುವ" ಎಂದು ಭವಿಷ್ಯ ನುಡಿದ.

ಅಂದಿನ ಸಮಾಜದ ಇತರ ಮಕ್ಕಳಂತೆಯೇ ನಾನಕನ ಬಾಲ್ಯವೂ ಹೆಚ್ಚಿನ ಘಟನೆಗಳಿಲ್ಲದೆ ಸಾಗಿತು. ಏಳು ವರ್ಷದ ಬಾಲಕನನ್ನು ಗೋಪಾಲ ಎಂಬ ಗುರುವಿನ ಬಳಿ ವಿದ್ಯಾಭ್ಯಾಸಕ್ಕೆ ಕಳುಹಿಸಿದರು. ಆತನ ಬಳಿ, ನಾನಕ ಪಂಜಾಬಿ ಭಾಷೆಯನ್ನು, ಸಾಮಾನ್ಯ ಗಣಿತವನ್ನು ಕಲಿತನು. ಬ್ರಿಜನಾಥ ಶಾಸ್ತ್ರಿ ಎಂಬುವರ ಬಳಿ ಸ್ವಲ್ಪ ಸಂಸ್ಕೃತದ ಕಲಿಕೆಯೂ ನಡೆಯಿತು. ಕುತುಬುದ್ದೀನ್ ಎಂಬ ಮೌಲ್ವಿಯ ಬಳಿ ತಕ್ಕ ಮಟ್ಟಿಗೆ ಪಾರ್ಸಿ ಮತ್ತು ಅರಬ್ಬೀ ಭಾಷೆಗಳನ್ನು ಕಲಿತ.

ಆದರೂ ಬಾಲಕನಿಗೆ ವಿಧ್ಯಾಭ್ಯಾಸದಲ್ಲಿ ಆಸಕ್ತಿ ಹುಟ್ಟಲೇ ಇಲ್ಲ. ಸದಾ ಯಾವುದೋ ಧ್ಯಾನದಲ್ಲಿ ತಲ್ಲೀನನಾದಂತೆ, ಏನನ್ನೋ ಯೋಚಿಸುತ್ತಾ ಕುಳಿತು ಬಿಡುತ್ತಿದ್ದ. ಮಾತು ಕಡಿಮೆ, ಆದರೆ ಮಾತನಾಡಿದರೆ ವಿನಯಪೂರ್ಣ ಧ್ವನಿಯಲ್ಲಿಯೇ ಖಚಿತ ಆಲೋಚನೆ ವ್ಯಕ್ತವಾಗುತ್ತಿತ್ತು. ತನ್ನಲ್ಲಿದ್ದ ವಸ್ತುಗಳನ್ನು, ತಿಂಡಿ–ತಿನಿಸುಗಳನ್ನು

ಇನ್ನೊಬ್ಬರಿಗೆ ಕೊಡುವುದರಲ್ಲಿ ಹುಡುಗ ನಾನಕ್‌ಗೆ ಬಹಳ ಸಂತೋಷವಾಗುತ್ತಿತ್ತು.

ಬಾಲ್ಯದಲ್ಲಿ ಅವನು ಆಡಿದ್ದ ಮಾತುಗಳು ಅವನ ಉಜ್ವಲ ಭವಿಷ್ಯದತ್ತ ಬೆರಳು ಮಾಡುತ್ತವೆ.

ಸಂಪ್ರದಾಯಸ್ಥನಾದ ಮೆಹತ ಕಾಲು – ಮಗನ ಉಪನಯನ ಸಮಾರಂಭವನ್ನು ಏರ್ಪಡಿಸಿದ. ಯಜ್ಞೋಪವೀತ ಧಾರಣೆಯ ಸಂದರ್ಭದಲ್ಲಿ ಬಾಲಕ ತಟ್ಟನೆ ಅದನ್ನು ವಿರೋಧಿಸಿಬಿಟ್ಟ.

''ಈ ನೂಲಿನ ಎಳೆಗಳು ನನಗೆ ಬೇಕಾಗಿಲ್ಲ. ಇದು ಕಿತ್ತುಹೋಗುತ್ತದೆ. ಸುಟ್ಟು ಹೋಗುತ್ತದೆ. ಪರಲೋಕಕ್ಕೆ ನನ್ನ ಜೊತೆ ಬರುವುದಿಲ್ಲ.''

ಬಾಲಕನ ಈ ಮಾತು ಸಂಪ್ರದಾಯಬದ್ಧ ಸಮಾಜದಲ್ಲಿ ಉಂಟು ಮಾಡಿರಬಹುದಾದ ಆಕ್ರೋಶ, ಅಸಹನೆಗಳನ್ನು ಊಹಿಸಿಕೊಳ್ಳಬಹುದು.

ಪುರೋಹಿತ ಹರದಯಾಲ್ ತಾನು ಹೇಳಿದ್ದ ಭವಿಷ್ಯ ಮೊಳಕೆಯಲ್ಲಿಯೇ ಪ್ರಕಾಶಗೊಳ್ಳುತ್ತಿರುವುದನ್ನು ಅರಿತ. ಆದರೂ ಹುಡುಗನನ್ನು ಕೆಣಕಿದ. 'ನಿನಗೆ ಬೇಕಾದ ಜನಿವಾರ ಯಾವುದು ?' ಹುಡುಗ ತಡವರಿಸದೆ ಉತ್ತರಿಸಿದ.

''ಕರುಣೆಯೆಂಬ ಹತ್ತಿಯಿಂದ ತೃಪ್ತಿಯೆಂಬ ನೂಲು ತೆಗೆದು, ಸತ್ಯವೆಂಬ ಮುಷ್ಟಿಯಿಂದ ಅದನ್ನು ಹೊಸೆದು ಗಟ್ಟಿ ಮಾಡಿ ಸಂಯಮವೆಂಬ ಗಂಟುಕಟ್ಟಿ ಸಿದ್ಧಪಡಿಸಿದ ಜನಿವಾರ ನನಗೆ ಬೇಕು."

ಇದು ಆಡುವ ವಯಸ್ಸಿನ ಹುಡುಗನ ಮಾತೆ? ಈ ಮಾತಿಗೆ ಪ್ರತಿ ಹೇಳುವ ಶಕ್ತಿ ಯಾರಿಗೂ ಇರಲಿಲ್ಲ ನಿಜ. ಆದರೆ ನೆರೆದ ನೆಂಟರಿಷ್ಟರಿಗೆಲ್ಲ ಮೆಹತ ಕಾಲೂವಿನ ಮಗನಿಗೆ ತಲೆ ಕೆಡುತ್ತಿದೆ ಎಂಬುದರಲ್ಲಿ ಅನುಮಾನ ಉಳಿಯಲಿಲ್ಲ.

ತತ್ವ ಚಿಂತನೆಯಿಂದ ಹೊಟ್ಟೆ ತುಂಬುವುದಿಲ್ಲ. ತನ್ನ ಮಗ ಲೌಕಿಕ ವ್ಯವಹಾರದಲ್ಲಿ ಆಸಕ್ತನಾಗದೆ, ಯಾರಿಗೂ ಅರ್ಥವಾಗದ ಅಧ್ಯಾತ್ಮದ ಬಗ್ಗೆ ಮಾತನಾಡುತ್ತಾ, ಅನ್ಯಮನಸ್ಕನಾಗಿ ಕುಳಿತರೆ ಅವನ ಜೀವನ ನಡೆಯುವುದಾದರೂ ಹೇಗೆ ?

ಯಾವ ಕೆಲಸಕ್ಕೂ ಬಾರದ ಮಗನಿಂದ ಏನು ಪ್ರಯೋಜನ ? ದನ ಕಾಯುವುದಕ್ಕೇ ಲಾಯಕ್ಕು ಎಂದು ನಿರ್ಧರಿಸಿ, ದನ ಕಾಯಲು ನಿಯಮಿಸಿದ.

ನಾನಕ್‌ಗೆ ಈ ಕೆಲಸ ತುಂಬಾ ಪ್ರಿಯವೇ ಆಯಿತು. ದನಗಳನ್ನು ಅವುಗಳ ಪಾಡಿಗೆ ಮೇಯಲು ಬಿಟ್ಟು, ತಾನು ನಿಶ್ಚಿಂತೆಯಿಂದ

ಧ್ಯಾನಮಗ್ನನಾಗಲು ಒಳ್ಳೆಯ ಅವಕಾಶ ದೊರೆಯಿತು. ಅದೂ ಅಲ್ಲದೆ ಕಾಡಿನಲ್ಲಿ ಆಗಾಗ್ಗೆ ಸಾಧುಸಂತರ ಸಂಪರ್ಕವೊದಗಿ ಅವರ ಮಾರ್ಗದರ್ಶನ ಪಡೆಯುವ, ಹೊಸ ಹೊಸ ವಿಚಾರಗಳನ್ನು ಅರಿಯುವ ಅವಕಾಶ ಒದಗಿತು.

ಒಂದು ದಿನ ಬೆಳೆದ ಬೆಳೆಯನ್ನು ದನಗಳು ಮೇಯ್ದು, ಹೊಲದ ಮಾಲೀಕನಿಗೂ, ಮೆಹ್ತಾ ಕಾಲುವಿಗೂ ದೊಡ್ಡ ಜಗಳವೇ ಆಯಿತು. ಊರಿನ ಯಜಮಾನ ರಾಯಬೂಲರ ಹೊಲದ ಯಜಮಾನನಿಗೆ ನಷ್ಟ ತುಂಬಿ ಕೊಡಲು ಮುಂದೆ ಬಂದ.

ಈ ಘಟನೆಯಿಂದ ದನಕಾಯುವ ಕೆಲಸಕ್ಕೂ ಮಗ ನಾಲಾಯಕ್ಕು ಎಂದು ತಂದೆ ಭಾವಿಸಿದ.

ಮಗನಿಗೆ ಮದುವೆ ಮಾಡಿ, ಆಗ ಸರಿಹೋಗಬಹುದು ಎಂದು ಬಂಧು ಮಿತ್ರರು ಹಿತ ನುಡಿದರು.

ಸುಲಖನಿ ಎಂಬ ಕನ್ಯೆಯೊಡನೆ ವಿವಾಹವೂ ಆಯಿತು. ನಾನಕ್ ಸಂಸಾರಿಯಾದ. ಶ್ರೀ ಚಂದ್ರ ಮತ್ತು ಲಕ್ಷ್ಮೀದಾಸರೆಂಬ ಇಬ್ಬರು ಮಕ್ಕಳೂ ಆದರು. ನಾನಕ್‌ನ ವರ್ತನೆ ಬದಲಾಗಲಿಲ್ಲ. ಸಂಸಾರದಲ್ಲಿ, ವ್ಯವಹಾರದಲ್ಲಿ ಆಸಕ್ತಿ ಮೂಡಲೇಇಲ್ಲ. ದಿನದ ಬಹುಕಾಲಧ್ಯಾನದಲ್ಲಿಯೇ ಕಳೆದು ಹೋಗುತ್ತಿತ್ತು.

ಮಗನನ್ನು ಸಣ್ಣ ವ್ಯಾಪಾರದಲ್ಲಾದರೂ ತೊಡಗಿಸಬೇಕೆಂದು ತಂದೆ ಸ್ವಲ್ಪ ಹಣವನ್ನು ಕೊಟ್ಟು, ವಸ್ತುಗಳನ್ನು ತರಲು ಹತ್ತಿರದ ಪಟ್ಟಣಕ್ಕೆ ಕಳುಹಿಸಿದ.

ಬರಿಕೈಯಲ್ಲಿ ಹಿಂದಿರುಗಿದ ಮಗನನ್ನು ಕಂಡು ತಂದೆ ಅವಾಕ್ಕಾದ.

ತಂದೆ–ಪದಾರ್ಥಗಳು ಎಲ್ಲಿ ?

ನಾನಕ್– ದಾರಿಯಲ್ಲಿ ಸಾಧುಗಳು ಹಸಿದಿದ್ದರು. ನೀ ಕೊಟ್ಟಿದ್ದ ಹಣದಲ್ಲಿ ಅವರಿಗೆ ಊಟ ಹಾಕಿಸಿದೆ.

ತಂದೆ – ಇನ್ನು ವ್ಯಾಪಾರ – ವ್ಯವಹಾರ – ಲಾಭದ ಗತಿ ಏನು.

ನಾನಕ್ – ಇಹಲೋಕ ಪರಲೋಕಗಳೆರಡರಲ್ಲೂ ನನಗೊಬ್ಬನಿಗೇ ಅಲ್ಲ, ನಿನಗೂ ಲಾಭವಾಗುವಂತೆ ಮಾಡಿದ್ದೇನೆ. ಇದಕ್ಕಿಂತ ಲಾಭದಾಯಕ ವ್ಯವಹಾರ ಯಾವುದು?

ಮಗನ ಮಾತಿನಿಂದ ತಂದೆಯ ತಾಳ್ಮೆಯ ಎಳೆ ಕಡಿಯಿತು. ಬೆಳೆದ ಮಗ ಎರಡು ಮಕ್ಕಳ ತಂದೆ – ಎಂಬುದನ್ನೂ ಯೋಚಿಸದೆ ಚೆನ್ನಾಗಿ ಥಳಿಸಿದನಂತೆ.

ಮಗ ವ್ಯಾಪಾರವನ್ನೂ ಮಾಡಲಾರ. ದನ–ಕರುಗಳನ್ನು

ನೋಡಿಕೊಳ್ಳಲಾರ, ಹೋಗಲಿ ಹೊಲ ಗದ್ದೆಗಳ ಉಸ್ತುವಾರಿಯನ್ನಾದರೂ ನಡೆಸಲಿ – ಜೀವನಕ್ಕೆ ಏನಾದರೂ ಮಾಡಬೇಕಲ್ಲ ಎಂದು ತಂದೆ ಚಿಂತಿಸಿದ.

ಮಗ ವ್ಯವಸಾಯ ಮಾಡಲೂ ನಿರಾಕರಿಸಿದ.

"ನನ್ನ ದೇಹವೇ ಒಂದು ಹೊಲ. ಮನಸ್ಸೇ ಅದನ್ನು ಉಳುವ ಎತ್ತು, ವಿನಯವೆಂಬ ನೀರುಣಿಸಿ, ದೈವ ಶ್ರದ್ಧೆಯ ಬೀಜಬಿತ್ತಿ ನಾ ಬೆಳೆವ ಬೆಳೆ, ನನ್ನ ಕುಟುಂಬಕ್ಕೇ ಅಲ್ಲ. ಇಡೀ ಪ್ರಪಂಚಕ್ಕೆ ಸಾಕಾಗುತ್ತದೆ, ಹೊಲದ ಒಡೆಯ ಪರಮಾತ್ಮ, ನಾ ಅವನ ಗೇಣಿದಾರ. ನನಗೆ ಅತಿವೃಷ್ಟಿ – ಅನಾವೃಷ್ಟಿಗಳ ಭಯವಿಲ್ಲ. ನಾ ಎಂದೂ ಉಪವಾಸ ಬೀಳುವುದಿಲ್ಲ. ನಾ ಬೇಡಿದಷ್ಟನ್ನು ಅವನು ಕೊಡುತ್ತಾನೆ, ಹೆಚ್ಚಿಲ್ಲ, ಕಡಿಮೆ ಇಲ್ಲ."

ಮಗನ ಮಾತು ತಂದೆ–ತಾಯಿಗಳಿಗೆ ಆನಂದ ತರಲಿಲ್ಲ. ಗಾಢ ಚಿಂತೆಗೆ ಅವರು ಗುರಿಯಾದರು. ಬಿಕ್ಕಿ ಬಿಕ್ಕಿ ಅತ್ತರು. ಹುಚ್ಚನ ಹಾಗೆ ವರ್ತಿಸುತ್ತಾ ನಮ್ಮನ್ನು ಅಣಕಕ್ಕೆ, ನಗೆಗೆ ಗುರಿ ಮಾಡಬೇಡ ಎಂದು ಬೇಡಿಕೊಂಡರು.

ಎಲ್ಲಾ ಬಂಡೆಯ ಮೇಲೆ ಸುರಿದ ಮಳೆ ಆಯಿತು. ಸ್ಥಳ ಬದಲಾವಣೆ, ಗುಣ ಬದಲಾವಣೆಗೆ ಸಹಾಯಕವಾಗಬಹುದೆಂದು ಸುಲ್ತಾನ ಪುರಿಯಲ್ಲಿದ್ದ ಅಕ್ಕ ನಾನಕಿಯ ಮನೆಗೆ ಕಳುಹಿಸಲು ಯೋಚಿಸಿದರು.

ಸುಲ್ತಾನ್‌ಪುರದ ನವಾಬ ದೌಲತ್‌ಖಾನ್. ಅವನ ಉಗ್ರಾಣಿ ಜಯ ರಾಮನಿಗೆ ನಾನಕಿಯನ್ನು ಕೊಡಲಾಗಿತ್ತು. ನಾನಕ್‌ಗೆ ನವಾಬನ ನೌಕರರಿಗೆ ಪಡಿತರ ಹಂಚುವ ಚಿಕ್ಕ ಕೆಲಸವೂ ದೊರೆಯಿತು. ಸುಲ್ತಾನ್ ಪುರಿಯಲ್ಲಿಯೇ ಸಂಸಾರ ಹೂಡಿದ. ಅವನ ಬಾಲ್ಯದ ಮಿತ್ರ ಮರ್ದಾನ ಎಂಬ ಮುಸ್ಲಿಂ ಯುವಕ ಇವನ ಜೀವದ ಗೆಳೆಯನಾದ. ಇವರಿಬ್ಬರ ಸ್ನೇಹ ಕಡೆಯವರೆಗೂ ಉಳಿದು ಬಂದಿತು. ನಾನಕ್ ತನ್ನ ಕೆಲಸದಲ್ಲಿ ಪ್ರಾಮಾಣಿಕವಾಗಿ ಮಗ್ನನಾಗಿದ್ದರೂ ಧಾನ್ಯ ಅಳೆಯುವಾಗ ತೇರ (ಹದಿಮೂರು) ಸಂಖ್ಯೆಯನ್ನು ಉಚ್ಚರಿಸಿದ ತಕ್ಷಣ ಭಾವಸಮಾಧಿ ಉಂಟಾಗುತ್ತಿತ್ತು.

ತೇರ, ಮೈ ತೇರ (ನಾನು ನಿನ್ನವನು) ಎಂದು ಹಾಡುತ್ತಾ ಕುಳಿತು ಬಿಡುತ್ತಿದ್ದ.

ನಾನಕನ ಬಗ್ಗೆ ಕೆಲವರು ಪುಕಾರು ನೀಡಿದರು. ಸ್ವತಃ ನವಾಬನೇ ತನಿಖೆ ನಡೆಸಿದ. ಎಲ್ಲವೂ ಸರಿಯಾಗಿತ್ತು.ನಾನಕ್‌ನ ತಂಟೆಗೆ ಅವನು ಹೋಗಲಿಲ್ಲ.

ಸುಲ್ತಾನ್‌ಪುರದಲ್ಲಿ ನಾನಕನ ಆಧ್ಯಾತ್ಮಿಕ ಸಾಧನೆ ಕ್ರಮಬದ್ಧವಾಗಿ ಮುಂದುವರಿಯಿತು.

ತಾನೇ ರಚಿಸಿದ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದ. ಮರ್ದಾನ ತನ್ನ ವಾದ್ಯ ನುಡಿಸುತ್ತಾ ಅವನ ಜೊತೆಗಾರನಾಗುತ್ತಿದ್ದ. ವಾತಾವರಣದಲ್ಲಿ ಭಕ್ತಿ ಭಾವ ತಾನೇ ತಾನಾಗಿ ತುಳುಕುತ್ತಿತ್ತು. ಸುತ್ತಲ ಜನ ತಾವಾಗಿಯೇ ಆ ಗಾಯನ ಗೋಷ್ಠಿಯಲ್ಲಿ ಭಾಗವಹಿಸುತ್ತಿದ್ದರು.

ಕೆರೆಯ ದಂಡೆಯ ಬೋರೇ ಹಣ್ಣಿನ ಮರದ ಕೆಳಗೆ ಧ್ಯಾನದಲ್ಲಿ ಮಗ್ನನಾಗುತ್ತಿದ್ದ.

ಲೌಕಿಕ–ಪಾರಲೌಕಿಕಗಳೆರಡರಲ್ಲೂ ನಾನಕ್ ತೃಪ್ತಿ ಪೂರ್ಣವಾದ ಪ್ರಗತಿ ಸಾಧಿಸಿದ.

ಸುಲ್ತಾನ್‌ಪುರ ನಾನಕನ ಸಾಧನೆಯ ರಂಗಸ್ಥಳವಾಯಿತು. ಮರ್ದಾನ ಕೇವಲ ಲೌಕಿಕ ಸ್ನೇಹಿತ ಮಾತ್ರನಲ್ಲ – ಆಧ್ಯಾತ್ಮಿಕ ವಲಯದ ಸಂಗಾತಿಯೂ ಆದ.

ಹಿಂದು–ಮುಸ್ಲಿಂ ಸಹಯೋಗದಲ್ಲಿ ಹೊಸ ಧರ್ಮದ ಸ್ಥಾಪನೆಗೆ ಪೂರ್ವರಂಗ ಸಿದ್ಧವಾಯಿತು.

ಸಾಕ್ಷಾತ್ಕಾರ

ಸುಲ್ತಾನಪುರದಲ್ಲಿದ್ದಾಗ, ನಿತ್ಯ ಕೆರೆಗೆ ಸ್ನಾನಕ್ಕೆ ಹೋಗುವುದು, ಸ್ನಾನಾನಂತರ ಧ್ಯಾನ ಮಗ್ನನಾಗುವುದು ನಡೆದು ಬಂದಿದ್ದ ಪದ್ಧತಿ.

ಒಮ್ಮೆ ಹೀಗೆ ಧ್ಯಾನ ಮಗ್ನನಾದ ನಾನಕ್‌ಗೆ ಮೂರು ದಿನಗಳಾದರೂ ಧ್ಯಾನ ಸಡಿಲವಾಗಲಿಲ್ಲ.

ಈ ಸಂದರ್ಭದಲ್ಲಿಯೇ ಅವನಿಗೆ ದೈವ ಸಾಕ್ಷಾತ್ಕಾರವಾಯಿತು ಎಂದು ಹೇಳುತ್ತಾರೆ.

ಭಗವಂತ ನಾನಕನಿಗೆ ಒಂದು ಬಟ್ಟಲಿನಲಿ ಅಮೃತವನ್ನು ಕೊಟ್ಟ. ಅದನ್ನು ಕುಡಿದ ನಾನಕನಿಗೆ ಭಕ್ತಿ, ಸತ್ಯ, ಸಂಯಮಗಳು ಲಭಿಸಿದವು ಎನ್ನುತ್ತಾರೆ.

"ನಾನಕ, ನಾನು ಯಾವಾಗಲೂ ನಿನ್ನೊಡನೆಯೇ ಇರುತ್ತೇನೆ. ನನ್ನ ಸಂಪೂರ್ಣ ಆಶೀರ್ವಾದ ನಿನಗಿದೆ. ಇಂದಿನಿಂದ ನೀನು ಕೇವಲ ನಾನಕನಲ್ಲ, ಗುರು ನಾನಕ್" ಎಂದು ಅಂತರ್ ವಾಣಿ ನುಡಿಯಿತು ಎನ್ನುತ್ತಾರೆ. ನಡೆದದ್ದು ಏನೋ ಯಾರಿಗೂ ಗೊತ್ತಿಲ್ಲ. ಆದರೆ ನಾನಕನ ಮೊಗದಿಂದ ಒಂದು ದಿವ್ಯ ಪ್ರಭೆ ಅಂದಿನಿಂದ ಚಿಮ್ಮಲಾರಂಭಿಸಿತು ಎಂದು ವರ್ಣಿಸಿದ್ದಾರೆ.

ಮೂರು ದಿನಗಳ ನಂತರ ಮನೆಗೆ ಹಿಂದಿರುಗಿದ ನಾನಕ್, "ನಾನು ಇಲ್ಲಿ ಕಾಣುತ್ತಿರುವುದು ಹಿಂದುವನ್ನೂ ಅಲ್ಲ, ಮುಸಲ್ಮಾನನನ್ನೂ ಅಲ್ಲ. ಕೇವಲ ಮನುಷ್ಯನನ್ನು ಮಾತ್ರ." ಸಾಕ್ಷಾತ್ಕಾರಗೊಂಡ ನಾನಕ್ ಪದೇ ಪದೇ ಆಡಿದ ಮಾತು ಇದು.

ಮುಸಲ್ಮಾನರ ಆಡಳಿತ ಪ್ರಬಲವಾಗಿದ್ದ ಕಾಲ. ಸಣ್ಣದೊಂದು ಟೀಕೆಯನ್ನು ಸಹಿಸದ ಆ ಜನ ನಾನಕನ ಮಾತಿನಿಂದ ಸಿಟ್ಟುಗೊಂಡರು. ನವಾಬನ ತನಕ ದೂರು ಹೊತ್ತರು.

ನವಾಬ ನಾನಕ್‌ನನ್ನು ಕರೆಸಿದ.

ಜನ ನಿನಗೆ ಹುಚ್ಚು ಹಿಡಿದಿದೆ ಎಂದು ಹೇಳುತ್ತಿದ್ದಾರೆ ಎಂದು ಗದರಿದ. ನಾನಕ್ ಬಹು ಶಾಂತವಾಗಿಯೇ

"ಹೌದು ನನಗೆ ಹುಚ್ಚು ಹಿಡಿದಿದೆ. ಪರಮಾತ್ಮನ ಹುಚ್ಚು ಹಿಡಿದಿದೆ, ಅವನನ್ನು ಬಿಟ್ಟು ಮತ್ತೆ ಯಾರೂ ಕಾಣುತ್ತಿಲ್ಲ."

ನವಾಬ – "ಕಾಣುತ್ತಿರುವ ಮುಸಲ್ಮಾನರು ನಿನಗೆ ಮುಸಲ್ಮಾನರಲ್ಲ. ಹಾಗಾದರೆ ನಿಜವಾದ ಮುಸಲ್ಮಾನರಾರು ?"

ನಾನಕ್ – "ಮುಸಲ್ಮಾನನೆಂದು ಕರೆದುಕೊಳ್ಳುವುದು ಸುಲಭ, ಮುಸಲ್ಮಾನನಾಗುವುದು ಬಹಳ ಕಷ್ಟ".

"ಯಾವನಿಗೆ ಕರುಣೆಯೇ ಮಸೀದಿಯೋ, ಶ್ರದ್ಧೆಯೇ ಪ್ರಾರ್ಥನೆಯೋ, ಪ್ರಾಮಾಣಿಕ ಜೀವನವೇ ಪವಿತ್ರಕುರಾನೋ, ಸಂಯಮವೇ ಉಪವಾಸವಾಗಿದೆಯೋ ಅವನೇ ನಿಜವಾದ ಮುಸಲ್ಮಾನ."

ಘಂಟಾನಾದದಂತೆ ಮೊಳಗಿತು ನಾನಕನ ವಾಣಿ.

ಖಾಜಿ – ನಿನಗೆ ನಿಜವಾಗಲೂ ಮುಸ್ಲಿಂ ಧರ್ಮದಲ್ಲಿ ನಂಬಿಕೆ ಇದ್ದರೆ ನಮ್ಮೊಡನೆ ಮಸೀದಿಗೆ ಪ್ರಾರ್ಥನೆಗೆ ಬರುತ್ತೀಯಾ ?

ನಾನಕ್ – ಓಹೋ ಆಗಲಿ ಅದಕ್ಕೇನು, ಭಗವಂತನ ಪ್ರಾರ್ಥನೆಗೆ ಮಸೀದಿಯಾದರೇನು ? ದೇವಸ್ಥಾನವಾದರೇನು ?

ನವಾಬ, ಖಾಜಿಯರ ಜೊತೆಗೆ ನಾನಕ್ ಮಸೀದಿಗೆ ತೆರಳಿದ. ಮುಸ್ಲಿಂ ಪದ್ಧತಿಯಂತೆ ಅವರಿಬ್ಬರು ಮಂಡಿಯೂರಿ ಪ್ರಾರ್ಥನೆ ನಡೆಸುವಾಗ ನಾನಕ್ ದೂರ–ನಗುತ್ತಾ ನಿಂತಿದ್ದ.

ನಮಾಜ್ ಮುಗಿಯಿತು.

ಖಾಜಿ – ನಮ್ಮ ಜೊತೆ ನಮಾಜ್‌ಗೆ ಬಂದು ನೀನೇಕೆ ನಮಾಜ್ ಮಾಡಲಿಲ್ಲ.

ನಾನಕ್ – ಖಾಜಿ ಸಾಹೇಬರೇ, ನಿಮ್ಮ ದೇಹ ಯಾಂತ್ರಿಕವಾಗಿ ಬಾಗುತ್ತಿತ್ತೇ ಹೊರತು ನಿಮ್ಮ ಮನಸ್ಸು, ನಿಮ್ಮ ಕುದುರೆ ಮರಿ ಬಿಚ್ಚಿಕೊಂಡು

ಎಲ್ಲಿ ಬಾವಿಗೆ ಬೀಳುತ್ತದೋ ಎಂದು ಚಿಂತಿತವಾಗಿತ್ತು.

ನವಾಬರ ಮನಸ್ಸು–ಅರೇಬಿಯದಲ್ಲಿ ಕುದುರೆ ವ್ಯಾಪಾರ ನಡೆಸುತ್ತಿತ್ತು.

ಮನಸ್ಸು ಭಗವಂತನಲ್ಲಿ ಇಲ್ಲದಿದ್ದರೆ ಅದು ಎಂತಹ ಪ್ರಾರ್ಥನೆ ಎಂದು ಕರಾರುವಾಕ್ ಆಗಿ ನುಡಿದ ನಾನಕನ ಮುಂದೆ ನವಾಬ ಮತ್ತು ಖಾಜಿ ನಿರುತ್ತರರಾಗಿದ್ದರು ಮಾತ್ರವಲ್ಲ, ತಮ್ಮೆದುರು ಇರುವ ವ್ಯಕ್ತಿ ಸಾಮಾನ್ಯನಂತೆ ಕಂಡರೂ ಅಸಾಮಾನ್ಯನೆಂಬ ಅರಿವು ಅವರಿಗೆ ಉಂಟಾಗಿತ್ತು. ಊರಿನ ಮುಖ್ಯಸ್ಥನಾಗಿದ್ದ ರಾಯ್ ಬುಲರ್ ಎಂಬ ಮುಸ್ಲಿಂ ಸಹ ನಾನಕನ ದೈವೀ ಶಕ್ತಿಯನ್ನು ಮನಗಂಡಿದ್ದ. ಸಾಕ್ಷಾತ್ಕಾರದ ಘಟನೆ ನಡೆದದ್ದು ೧೫೦೭ರಲ್ಲಿ. ಆಗ ನಾನಕನಿಗೆ ೩೮ ವರುಷಗಳು.

ಅಂದಿನಿಂದ ಮುಂದಿನ ಎಂಟು ವರುಷಗಳು ತಾ ಕಂಡ ಸತ್ಯವನ್ನು ತನ್ನವರೊಡನೆ ಹಂಚಿಕೊಳ್ಳಲು – ಕತ್ತಲೆಯ ಮನಸ್ಸುಗಳಿಗೆ ಬೆಳಕನ್ನು ನೀಡಲು – ಹಳ್ಳಿಯಿಂದ ಹಳ್ಳಿಗೆ, ಮರ್ದಾನನನ್ನು ಜೊತೆ ಮಾಡಿಕೊಂಡು ಸುತ್ತಿದ.

ಜ್ಯೋತಿ ಕತ್ತಲೆಡೆಗೆ ನಡೆದಂತೆಲ್ಲಾ – ಕತ್ತಲು ಹೆದರಿ ಕರಗುತ್ತಾ ಹೋಯಿತು. ಅಶಾಂತಿಯ ತುಮುಲದಲ್ಲಿದ್ದ ಪಂಜಾಬಿನ ಸಾಮಾನ್ಯನ ಪಾಲಿಗೆ ಶಾಂತಿ–ಸೌಹಾರ್ದ–ಭಗವದ್ ಪ್ರೇಮದ ತಂಗಾಳಿ ಬೀಸಿದಂತಾಯಿತು.

ನಾಡಿನ ಜಡರು ಹರಿದು ಚೇತನ ಎಚ್ಚೆತ್ತಿತು.

ಸಿದ್ಧಾಂತ

ವ್ಯಕ್ತಿಯೋರ್ವ ತನ್ನ ಸ್ವಪ್ರಯತ್ನದಿಂದ ಸಾಧಿಸಬಹುದಾದ ಎತ್ತರಕ್ಕೆ ಎಲ್ಲೆ ಇಲ್ಲ.

ಆದರೆ ಲೋಕದಲ್ಲಿ ನೂರಕ್ಕೆ ತೊಂಬತ್ತು ಜನ, ಉಳಿದ ಪ್ರಾಣಿ ವರ್ಗದಂತೆಯೇ, ತಮ್ಮ ದೈಹಿಕ ಬಯಕೆಗಳ ಪೂರೈಕೆಯಲ್ಲಿಯೇ ತಮ್ಮ ಶಕ್ತಿ ಸರ್ವಸ್ವವನ್ನೂ ವ್ಯಯಿಸಿ ರಿಕ್ತರಾಗಿ ಬಿಡುತ್ತಾರೆ.

ಅಲ್ಲೊಬ್ಬ – ಇಲ್ಲೊಬ್ಬ – ಪ್ರಕೃತಿಯಿಂದ ಲಭ್ಯವಾಗಿರುವ ಸಾಮರ್ಥ್ಯವನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳಲು ಯತ್ನಿಸುತ್ತಾನೆ. ಇಂತಹ ಸಾಮರ್ಥ್ಯಶಾಲಿಗಳಲ್ಲಿ ಆರಿಸಿದ ಕೆಲವರು ತಮ್ಮ ವೈಯಕ್ತಿಕ ವಿಕಾಸವನ್ನು ತಮ್ಮ ಸಮಾಜದ ವಿಕಾಸದೊಡನೆ ಬೆಸೆದು ಬಿಡುತ್ತಾರೆ. ಅಂತಹ ಅಪರೂಪದ ಜನವೇ ಲೋಕಶಕ್ತಿಗಳಾಗಿ ಮಿಂಚುತ್ತಾರೆ.

ನಾನಕ್ ಇಂತಹ ಅಪರೂಪದ ಚೇತನ. ತಾನು ಗಳಿಸಿದ ಆಧ್ಯಾತ್ಮ ಶಕ್ತಿಯನ್ನು ಸಮಾಜದ ಒಳಿತಿಗೆ ಧಾರೆಯೆರೆದ ಮಹಾತ್ಮ. ವ್ಯಕ್ತಿ–

ಶಕ್ತಿಯಾಗಿ ವಿಕಾಸ ಹೊಂದಿ, ಆ ಶಕ್ತಿ, ಸಮಾಜದ ಶಕ್ತಿಯಾಗಿ ಪರಿವರ್ತಿತವಾಗುವುದು ಆಯಾ ಕಾಲದ, ಆಯಾ ಸಮಾಜದ ಅಗತ್ಯಗಳನ್ನು ಅವಲಂಬಿಸಿರುತ್ತದೆ. ಹದಿನೈದನೆ ಶ.ಮಾ.ದ ಭಾರತ, ಅದರಲ್ಲೂ ಪಂಜಾಬ್ ಪ್ರಾಂತ್ಯದಲ್ಲಿ ಅಂದು ಪ್ರಬಲವಾಗಿದ್ದ ಮೌಲ್ವಿಗಳ ಹಾಗೂ ಬ್ರಾಹ್ಮಣ ಪುರೋಹಿತಶಾಹಿಗಳ ಪ್ರಭಾವ; ಎರಡೂ ಮತದವರು ತಮ್ಮ ತಮ್ಮ ಮತಗಳ ಶ್ರೇಷ್ಠತೆಯನ್ನು ಸಾಧಿಸಲು ಅನುಸರಿಸುತ್ತಿದ್ದ ಮಾರ್ಗ ನೂರಾರು ದೇವರುಗಳ ಹೆಸರುಗಳಲ್ಲಿ ನಡೆಸುತ್ತಿದ್ದ ಹಬ್ಬ, ಜಾತ್ರೆಗಳು; ಅವುಗಳಿಂದ ಉಂಟಾಗುತ್ತಿದ್ದ ಘರ್ಷಣೆಗಳು; ಇಸ್ಲಾಂ ಧರ್ಮದವರಿಂದ, ಮೂರ್ತಿ ಪೂಜೆಯ ಬಗ್ಗೆ ನಡೆಯುತ್ತಿದ್ದ ವ್ಯಂಗ್ಯ, ಟೀಕೆಗಳ ಅಪಪ್ರಚಾರ; ಬ್ರಾಹ್ಮಣ ಸಂಸ್ಕೃತಿ ಹೇರಲು ಯತ್ನಿಸುತ್ತಿದ್ದ ಕಂದಾಚಾರದ ಭಾರ; ಇವೆಲ್ಲದರ ನಡುವೆ ಸಾಮಾನ್ಯರಲ್ಲಿ ಸಾಮಾನ್ಯರಾದವರಿಗೆ ಉಂಟಾಗಿದ್ದ ದಿಕ್ಕು ತಪ್ಪಿದ ಸ್ಥಿತಿ; ಇತ್ಯಾದಿ, ಇತ್ಯಾದಿಗಳನ್ನು ಬಹು ಹತ್ತಿರದಿಂದ ಸೂಕ್ಷ್ಮವಾಗಿ ಗಮನಿಸಿದ್ದ ನಾನಕ್, ಮೂಲಭೂತ ಮಾರ್ಪಾಡಿನತ್ತ ದಾಪುಗಾಲು ಹಾಕಿದ.

ನಾನಕ್‌ನ ಸಿದ್ಧಾಂತವನ್ನು ಕೆಳಗೆ ಸೂಚಿಸಿರುವಂತೆ ಸಂಕ್ಷೇಪಿಸಬಹುದು.

೧. ಎಲ್ಲಾ ಅವತಾರಗಳನ್ನು ತಿರಸ್ಕರಿಸಿ, ಬಹು ದೇವತಾ ಉಪಾಸನೆಯನ್ನು ನಿರಾಕರಿಸಿ, ಏಕ ದೇವತಾ ಉಪಾಸನೆಯನ್ನು ಪ್ರಬಲವಾಗಿ ಬೋಧಿಸಿದ.

೨. ನಾನಕ್‌ನ ಪರಮಾತ್ಮನಿಗೆ ರೂಪವಿಲ್ಲ, ಲಿಂಗವಿಲ್ಲ, ಅದು ವಿಶ್ವಚೇತನ ಶಕ್ತಿ, ನಿರಾಕಾರ, ಸರ್ವವ್ಯಾಪ್ತ, ಸರ್ವಶಕ್ತ, ಸರ್ವರ ಅಂತರ್ಯಾಮಿ.

೩. ಅಳತೆಗೆ ಸಿಗಲಾರದ ಆ ಮಹಾನ್ ಶಕ್ತಿಯನ್ನು ತನ್ನಲ್ಲಿ ಕಂಡುಕೊಳ್ಳಲು ಪ್ರಯತ್ನಿಸುವುದೇ ಪರಮ ಪೂಜೆ.

೪. ಹವನ, ಹೋಮ, ಯಜ್ಞ, ಯಾಗಗಳಿಂದಲಾಗಲಿ; ದೇವಾಲಯಗಳಲ್ಲಿ ವಿವಿಧಾಕಾರದ ಮೂರ್ತಿಗಳನ್ನು ಪೂಜಿಸುವುದರಿಂದಾಗಲಿ; ಯಾತ್ರೆಗಳನ್ನು ಮಾಡುತ್ತಾ ನದಿಗಳಲ್ಲಿ ಮುಳುಗು ಹಾಕುತ್ತಾ ಹರಕೆಗಳನ್ನು ಒಪ್ಪಿಸುವುದರಿಂದಾಗಲಿ; ಬ್ರಾಹ್ಮಣರ ಕಾಲು ತೊಳೆದು, ದಕ್ಷಿಣೆ ನೀಡಿ, ಆಶೀರ್ವಾದ ಪಡೆಯುವುದರಿಂದಾಗಲಿ ಆತ್ಮಸ್ವರೂಪಿಯಾದ ಪರಮಾತ್ಮನ ಸಾಕ್ಷಾತ್ಕಾರ ಸಾಧ್ಯವಿಲ್ಲ.

೫. ತರ್ಕ, ಆಗಮ, ಬಲಿಗಳು ಭಗವದ್ ಶಕ್ತಿಯ ದರ್ಶನ ಮಾಡಿಸಲಾರವು.

೬. ಭಗವಂತನ ಕೃಪೆ ನಮ್ಮತ್ತ ಹರಿದು ಬರಲು ನಾವು ವಿದ್ವಾಂಸ ಆಗಬೇಕಾಗಿಲ್ಲ. ಶ್ರೀಮಂತರಾಗಬೇಕಾಗಿಲ್ಲ. ಲೌಕಿಕ ಅಧಿಕಾರದಿಂದ ಪ್ರಯೋಜನವಿಲ್ಲ.

೭. ಶುದ್ಧಮನದ ಪ್ರಾರ್ಥನೆಗೆ ಇರುವ ಶಕ್ತಿ ಇನ್ನು ಯಾವುದಕ್ಕೂ ಇಲ್ಲ. ಭಗವಾನ್ ನಾಮದ ಜಪಕ್ಕಿಂತ ದೊಡ್ಡ ಯೋಗವಿಲ್ಲ.

೮. ನಿತ್ಯ ನಿರಂತರವಾಗಿ ಮನಸ್ಸು ಭಗವಾನ್ ನಾಮದ ಜಪದಲ್ಲಿ ಮಗ್ನವಾಗಿರುವಾಗ ಮನಸ್ಸಿನಲ್ಲಿ ಕಲ್ಮಷ ಸೇರಲು ಸಾಧ್ಯವಿಲ್ಲ. ಮನಸ್ಸನ್ನು ಸದಾ ಭಗವದ್ ಸಾನಿಧ್ಯದಲ್ಲಿ ನಿಲ್ಲಿಸುವ ಪರಮ ಸಾಧನ ಜಪ. ಜಪವೇ ಆಧ್ಯಾತ್ಮದ ದ್ವಾರ.

೯. ಮುಕ್ತಿ ಎನ್ನುವುದನ್ನು ನಾವು ನಮ್ಮ ಶಕ್ತಿಯಿಂದ ಗಳಿಸಲು ಸಾಧ್ಯವಿಲ್ಲ. ಭಗವಂತ ಕರುಣೆಯಿಂದ ನಮಗೆಕರುಣಿಸುವಂತಹದು.

೧೦. ಶ್ರೀ ಹರಿಃ ಓಂ ಎನ್ನುವುದೇ ಆಧ್ಯಾತ್ಮಿಕ ದ್ವಾರವನ್ನು ತೆರೆಯುವ, ಭಗವದ್ ಸಾನಿಧ್ಯಕ್ಕೆ ಒಯ್ಯುವ ಮಹಾಮಂತ್ರ.

೧೧. ಆಧ್ಯಾತ್ಮಿಕ ಪ್ರಪಂಚಕ್ಕೆ ಮೂರು ಮೆಟ್ಟಿಲುಗಳು.

ಅ–ಶಬ್ದ ಆ–ನಾಮ ಇ–ಗುರು

ಶಬ್ದ ಅನುಭವ ವಾಹಕ. ಪ್ರಪಂಚದಲ್ಲಿ ಅನಾಹತವಾಗಿ ಶಬ್ದ ಇದೆ. ಮನಸ್ಸು ಆ ದಿವ್ಯ ಶಬ್ದದಲ್ಲಿ ಮುಳುಗಬೇಕು. ಆಗ ಮಾತ್ರ ಬಾಹ್ಯ ಇಂದ್ರಿಯಗಳಿಗೆ ಲಭ್ಯವಾಗದ ಅನೇಕ ಅಂತರ್ ಅನುಭವಗಳು ಸಾಧಕನ ತೆಕ್ಕೆಗೆ ದಕ್ಕುತ್ತವೆ.

ನಾಮವೆನ್ನುವುದು ದೈವ ಸಾಕ್ಷಾತ್ಕಾರಕ್ಕೆ ಮಾನವನನ್ನು ನಡೆಸುವ ಮಹಾಮಾರ್ಗದರ್ಶಿ.

ಶ್ರೀ ಹರಿಃ ಓಂ ಎಂಬ ನಾಮಜಪ ವ್ಯಕ್ತಿಯನ್ನು ಶಕ್ತಿಯನ್ನಾಗಿಸುತ್ತದೆ. ಗುರು ಬೇರೆಯಲ್ಲ, ದೈವ ಬೇರೆಯಲ್ಲ. ದೈವವೇ ನಮ್ಮ ವಿಕಾಸಕ್ಕೆ ಗುರುವಿನ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ.

ಗುರು ಶಿಷ್ಯನ ಮಾನಸಿಕ ಸ್ಥಿತಿ – ಶಕ್ತಿಗಳನ್ನು ಅರಿತು, ಅದಕ್ಕೆ ಹೊಂದುವ ಬೀಜಮಂತ್ರವನ್ನು ಉಪದೇಶಿಸಿ, ಮನಸ್ಸಿನ ಚಂಚಲತೆಯನ್ನು ನಿವಾರಿಸಿ, ಶಿಷ್ಯನನ್ನು ಸಾಧನ ಪಥದಲ್ಲಿ ನಿಲ್ಲಿಸುತ್ತಾನೆ. ಇದೇ ಗುರುವಿನ ಹುಕುಂ.

೧೨. ಶಬ್ದ–ನಾಮ–ಗುರುಗಳ ಕೃಪೆ ಪೂರ್ಣ ದೊರಕಬೇಕಾದರೆ ವ್ಯಕ್ತಿಯ ನಡೆ–ನುಡಿಗಳು ಸಂಸ್ಕರಣಗೊಳ್ಳಬೇಕು. ನೈತಿಕ ನಿಯಮಗಳನ್ನು

ಪಾಲಿಸದ ವ್ಯಕ್ತಿ ಆಧ್ಯಾತ್ಮಿಕ ಮಾರ್ಗದಲ್ಲಿ ಮುಂದುವರಿಯಲಾರ.

೧೩. ಶಬ್ದ–ನಾಮ–ಗುರು–ನೀತಿಗಳು ಒಂದಾದಾಗ ಸತ್ಯ ಗೋಚರವಾಗುತ್ತದೆ. ಇದೇ ಮೋಕ್ಷ. ಈ ಮೋಕ್ಷ ಭಗವದ್ ಕೃಪೆಯಿಂದ ಮಾತ್ರವೇ ದೊರಕುವಂತಹದು.

೧೪. ದೈವ ಸಾಕ್ಷಾತ್ಕಾರಕ್ಕೆ ಇರುವ ಮಾರ್ಗ ಒಂದೇ. ಅದೇ ಭಕ್ತಿ ಮಾರ್ಗ.

ಇಸ್ಲಾಂ ಧರ್ಮ ಬಹು ಪ್ರಬಲ ಸ್ಥಾನದಲ್ಲಿದ್ದು, ಹಿಂದುಗಳ ಮೂರ್ತಿ ಪೂಜೆ, ಬಹುದೇವತಾ ಉಪಾಸನೆ ಲೇವಡಿಗೆ ಒಳಗಾಗಿದ್ದ ಕಾಲದಲ್ಲಿ, ನಾನಕರ ನಿರಾಕಾರ ದೈವದ ಪ್ರತಿಪಾದನೆ, ಧ್ಯಾನದ ಪ್ರಾಮುಖ್ಯತೆಗಳು ಹಿಂದು ಧರ್ಮಕ್ಕೆ ನೂತನ ಶಕ್ತಿಯನ್ನು ನೀಡಿದವು. ಅಂದಿನ ಕಾಲಕ್ಕೆ ನಾನಕರ ಬೋಧನೆ ಜನ ಸಾಮಾನ್ಯರನ್ನು ಬಹುವಾಗಿ ಆಕರ್ಷಿಸಿತು.

ಸಾವಿರಾರು ದೇವ–ದೇವತೆಗಳ ಹೆಸರಿನಲ್ಲಿ ಕಚ್ಚಾಡುತ್ತಿದ್ದ ಜನತೆಗೆ ಶಾಂತಿಯನ್ನು ಒದಗಿಸಿತು.

ಸಿಕ್ ಮತದ ಸ್ಥಾಪನೆಗೆ ಅಗತ್ಯವಾಗಿದ್ದ ಧಾರ್ಮಿಕ ತಳಹದಿಯನ್ನು ಒದಗಿಸಿತು.

ನಾನಕರ ದೈವ ಕಲ್ಪನೆ ಅವರದೇ ಆದ ಸ್ವಂತ ಕಾಣ್ಕೆಯಲ್ಲ. ಹಿಂದು ಧರ್ಮದಲ್ಲಿ ನಿರಾಕಾರ, ನಿರ್ಗುಣ ಬ್ರಹ್ಮನ ಬಗ್ಗೆ ಬಹು ಹಿಂದೆಯೇ ಪ್ರಸ್ತಾಪಿಸಲ್ಪಟ್ಟಿತ್ತು.

ಉಪನಿಷತ್ತು ಮೂರ್ತಿ ಪೂಜೆಯನ್ನು ಸ್ಪಷ್ಟವಾಗಿಯೇ ನಿರಾಕರಿಸಿದ್ದವು.

ದೈವಕ್ಕೆ ಸರ್ವಜ್ಞತ್ವ, ಸರ್ವ ವ್ಯಾಪಕತ್ವ, ಸರ್ವ ಶಕ್ತ ಗುಣಗಳನ್ನು ಆಗಲೇ ಆರೋಪಿಸಿತ್ತು. ಜನಮನದಿಂದ ದೂರ ಸರಿದಿದ್ದ ಆ ಪ್ರಾಚೀನ ವಿಚಾರಗಳನ್ನು ಗುರುನಾನಕ್ ಮತ್ತೊಮ್ಮೆ ಉಜ್ವಲಗೊಳಿಸಿದರು.

ನಾನಾ ದೇವತೆಗಳ ಹಬ್ಬ–ಹರಿದಿನ–ಜಾತ್ರೆಗಳಲ್ಲಿ ಮಗ್ನವಾಗಿದ್ದ ಸ್ಥೂಲಾಕಾರ ಮಾನ್ಯವಾಗಿದ್ದ ಕಾಲದಲ್ಲಿ ಸೂಕ್ಷ್ಮ ವಿಚಾರಗಳನ್ನು ನಾನಕ್ ಪ್ರಸ್ತಾಪಿಸಿ – ನೂತನ ಆಂದೋಲನಕ್ಕೆ ಕಾರಣವಾದರು. ಇಸ್ಲಾಂ ಮತ್ತು ಹಿಂದು ಧರ್ಮಗಳ ಬೆರಕೆಯಾಗಿ ಸಿಕ್‌ಧರ್ಮ ರೂಪುಗೊಂಡಿದೆ ಎಂಬ ಮಾತು ಪ್ರಚಲಿತವಾಗಿದೆ. ಆದರೆ ಈ ಮಾತು ಸತ್ಯಕ್ಕೆ ದೂರ.

ಕಬೀರ, ರಮಾನಂದ, ರವಿದಾಸ ಮುಂತಾದವರು ಭಕ್ತಿ ಪಂಥದ ರೂವಾರಿಗಳಾಗಿ ನಾನಕ್‌ನಿಗಿಂತ ಮುಂಚೆಯೇ ಜನ ಮಾನ್ಯತೆ ಪಡೆದಿದ್ದರು.

ಈ ಭಕ್ತ ಪರಂಪರೆಯಲ್ಲಿ ಅನೇಕ ಜನ ಸಮಾಜದ ಕೆಳವರ್ಗದಿಂದ ಬಂದವರಾಗಿದ್ದರು.

ಜಾತಿಯನ್ನು ಧಿಕ್ಕರಿಸಿ–ನೀತಿಗೆ ಮಾನ್ಯತೆಯನ್ನು ನೀಡಿ, ದೈವದೊಲುಮೆಗೆ ಭಕ್ತಿಯೇ ಪರಮ ಮಾರ್ಗವೆಂಬುದನ್ನು ತಮ್ಮ ಜೀವನದಲ್ಲಿಯೇ ಸಾಧಿಸಿ ತೋರಿಸಿದ್ದರು. ಈ ಹಿನ್ನೆಲೆಯಲ್ಲಿ ನೋಡಿದಾಗ ನಾನಕ್‌ರ ಮತ ಸಂತರ ಪರಂಪರೆಯ ಮುಂದುವರಿದ ಭಾಗವೆಂಬುದು ಖಚಿತವಾಗುತ್ತದೆ.

ಸೂಫಿ ಪಂಥದ ಸಂತರು ನಾನಕರ ಮೇಲೆ ಪ್ರಭಾವ ಬೀರಿದ ಮಹಾನುಭಾವರು.

ಅವರ ವಚನಗಳಲ್ಲಿ ವ್ಯಕ್ತವಾದ ಭಾವಕ್ಕೂ, ಸಂತರ ವಾಣಿಗಳಲ್ಲಿ ವ್ಯಕ್ತವಾದ ಭಾವಕ್ಕೂ, ಭಕ್ತಿಯ ಆವೇಶಕ್ಕೂ ಬಹು ಸಾಮ್ಯವಿದ್ದುದರಿಂದಲೇ ಸಿಕ್ಕರ ಪರಮ ಪವಿತ್ರ ಗ್ರಂಥವಾದ ಗ್ರಂಥ ಸಾಹೇಬ್‌ನಲ್ಲಿ ಸೂಫಿ ಸಂತರ ವಾಣಿ ಸಂಕಲನಗೊಂಡಿದೆ.

ಸಿಖ್‌ರ ಪವಿತ್ರ ಗ್ರಂಥ 'ಗ್ರಂಥ ಸಾಹೇಬ್'ನ್ನು ಒಂದು ೧ ಅಂಕಿಯ ಮುಂದೆ ಓಂಕಾರವನ್ನು ಉಚ್ಚರಿಸಲಾಗುತ್ತದೆ. ಇದರ ಅರ್ಥ ಓಂ ವಾಚ್ಯನಾದ ದೈವ ಒಬ್ಬನೇ. ಅವನಿಗೆ ಹೆಸರು ಇಡುವ ಹಾಗಿದ್ದರೆ ಸತ್ ಎಂದು ಕರೆಯಬಹುದು. ಆತನೇ ಕರ್ತೃ. ಆತ ಸರ್ವ ವ್ಯಾಪಿ. ದೇಶ–ಕಾಲಾತೀತ. ಅವನಿಗೆ ಹಾನಿ–ವೃದ್ಧಿಗಳಿಲ್ಲ. ಜನನ–ಮರಣಗಳಿಲ್ಲ. ಆತನನ್ನು ಗುರುಮುಖೇನ ಸಾಕ್ಷಾತ್ಕರಿಸಿ ಕೊಳ್ಳಬಹುದು.

ದೇವರು ಎನ್ನುವುದು ಎಲ್ಲಾ ಕಾಲಗಳನ್ನೂ, ಎಲ್ಲಾ ಲೋಕಗಳನ್ನು ಬೆಳಗುವಂತಹ ಒಂದು ಬೆಳಕು.

ಇದೇ ಸಿಖ್ ಸಿದ್ಧಾಂತದ ಮೂಲ ಮಂತ್ರ (ಕಲೀಮ). ನಾನಕ್ ತಾನು ಕಂಡ ಬೆಳಕಿನ ಸತ್ಯವನ್ನು ಲೋಕದೆಲ್ಲೆಡೆ ಹರಡಲು ಸಂಚಾರ ಕೈಗೊಂಡ. ಭಾರತದ ಉದ್ದಗಲ ಮಾತ್ರವಲ್ಲ, ಭಾರತದ ಹೊರಗೂ ಅವನ ಜ್ಞಾನ ಯಾತ್ರೆ ಸಾಗಿತು.

ಪಂಜಾಬ್‌ನ ಬೆಳಕು ಲೋಕದ ಬೆಳಕಾಗಿ ಹರಡಿತು.

ಸಂಚಾರ

ಲೋಕ ಸಂಚಾರ ವ್ಯಕ್ತಿಯ ಅನುಭವವನ್ನು ಹೆಚ್ಚಿಸುತ್ತದೆ. ಸಹನೆಯನ್ನು ವೃದ್ಧಿಸುತ್ತದೆ. ಬೇರೆ ಬೇರೆ ಸ್ತರದ ವ್ಯಕ್ತಿಗಳ ಗುಣ-ಶೀಲಗಳು ನಮ್ಮ ಅರಿವಿನ ಶಕ್ತಿಯನ್ನು ವಿಸ್ತರಿಸುತ್ತವೆ.

ಪ್ರತಿಯೊಬ್ಬ ಆಧ್ಯಾತ್ಮಿಕ ವ್ಯಕ್ತಿಯೂ ತನ್ನ ಸಾಧನೆಯ ಅಂಗವಾಗಿ ಸಂಚಾರ ಕೈಗೊಳ್ಳುತ್ತಾನೆ. ಇದಕ್ಕೆ ಮುಖ್ಯ ಕಾರಣ ತಾನು ಕಂಡುಕೊಂಡ ಆನಂದದ ಮಾರ್ಗವನ್ನು ಜನತೆಗೆ ಪರಿಚಯಿಸುವುದು.

ದೀನರಲ್ಲಿ ದೀನರಾದ ಸಾಮಾನ್ಯರು ಗುರುವನ್ನು ಹುಡುಕಿಕೊಂಡು ಬರಲು ಸಾಧ್ಯವಾಗುವುದಿಲ್ಲ. ಕಾರಣ, ಮೊದಲನೆಯದಾಗಿ ಅವರಿಗೆ ಗುರುವಿನ ಮಹತ್ವವೇ ತಿಳಿದಿರುವುದಿಲ್ಲ. ಎರಡನೆಯದಾಗಿ, ತಮ್ಮ ತಮ್ಮ ಸಂಸಾರ ತಾಪತ್ರಯದಿಂದ ಹೊರಬರಲು ಸಾಧ್ಯ.ವಾಗುವುದಿಲ್ಲ. ಆದುದರಿಂದಲೇ ಪ್ರಪಂಚದ ಮಹಾಮಹಿಮರೆಲ್ಲರೂ (ಆತ ಬುದ್ಧನಾಗಿರಬಹುದು, ಕ್ರಿಸ್ತನಾಗಿರಬಹುದು) ತಾವೇ ಜನ ಸಾಮಾನ್ಯರತ್ತ ಧಾವಿಸಿ ಬರುತ್ತಾರೆ.

೧೫೦೭ ರಿಂದ ಎಂಟು ವರುಷಗಳ ಕಾಲ ಪಂಜಾಬ್ ಪ್ರಾಂತ್ಯದೆಲ್ಲೆಡೆ ಸಂಚರಿಸಿ - ತನ್ನ ಜನರಿಗೆ ಅಗತ್ಯವಾಗಿದ್ದ ಶಾಂತಿ ಸಹನೆಗಳ ಉಪದೇಶ ನೀಡಿದರು.

ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಪಶ್ಚಿಮ ಸಮುದ್ರದಿಂದ ಪೂರ್ವ ಸಮುದ್ರದವರೆಗೆ ಭಾರತದ ಹಲವಾರು ಹಿಂದು ಮತ್ತು ಮುಸ್ಲಿಂ ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸಿ, ಸಿದ್ಧರೊಡನೆ, ಯೋಗಿಗಳೊಡನೆ, ಪಂಡಿತರೊಡನೆ, ಮೌಲ್ವಿಗಳೊಡನೆ - ವಿಚಾರ ವಿನಿಮಯ ನಡೆಸಿ, ಸರ್ವ ಧರ್ಮದ ತಿರುಳು ಒಂದೇ ಎಂಬುದನ್ನು ಜನತೆಗೆ ಮನದಟ್ಟು ಮಾಡಿಸಿದರು.

ಶ್ರೀ ಗುರು ನಾನಕರು ತಮ್ಮ ಸಂಚಾರದ ಕಾಲದಲ್ಲಿ ಕರ್ನಾಟಕದ ಬೀದರ್ ಮತ್ತು ಧಾರವಾಡಗಳಿಗೆ ಭೇಟಿ ನೀಡಿದ್ದರು. ಬೀದರ್‌ನಲ್ಲಿ ಈಗಲೂ ಸಿಖ್ಖರ ಒಂದು ಪುಣ್ಯ ಕ್ಷೇತ್ರವಿದೆ. ಗುರುನಾನಕ್ ಝರಾ ಎಂಬ ಹೆಸರಿನ ನೀರಿನ ತೊರೆಯೂ ಇದೆ.

ಶ್ರೀ ಗುರು ನಾನಕರು ಲೋಕ ಸಂಚಾರದಲ್ಲಿದ್ದಾಗ ಗೃಹಸ್ಥರಂತೆ, ಹಿಂದು ಸಾಧು ಸಂತರಂತೆ, ಮುಸ್ಲಿಂ ಫಕೀರರಂತೆ ವೇಷ - ಭೂಷಣಗಳನ್ನು ಧರಿಸುತ್ತಿದ್ದರು. ಬಾಹ್ಯ ವೇಷ ಭೂಷಣಗಳು ವ್ಯಕ್ತಿಯ ವ್ಯಕ್ತಿತ್ವದ ಮಹತ್‌ನ್ನು ಹೆಚ್ಚಿಸುವುದೂ ಇಲ್ಲ- ಕುಗ್ಗಿಸುವುದೂ ಇಲ್ಲ ಎಂಬುದನ್ನು ಸಾರುವುದೇ ಇದರ ಉದ್ದೇಶ.

ಸಂಚಾರದ ವೇಳೆಯಲ್ಲಿ ಮರ್ದಾನನಂತಹ ತನ್ನ ಆಪ್ತರನ್ನು ಕುರಿತು – "ದೈವದ ದಾರಿಯಲ್ಲಿ ಹೋಗುವವ ದೈವವನ್ನು ಮಾತ್ರ ನೆಚ್ಚಿಕೊಳ್ಳಬೇಕೆ ಹೊರತು, ಮತ್ತೊಬ್ಬರ ದಾನವನ್ನಾಗಲಿ, ಭಿಕ್ಷೆಯನ್ನಾಗಲಿ ಅಪೇಕ್ಷಿಸಬಾರದು" ಎಂದು ಖಂಡಿತವಾಗಿ ನಿಯಮಿಸುತ್ತಿದ್ದರು.

ಶ್ರೀಮಂತ ಶಿಷ್ಯರು ಹೆಚ್ಚು ಹೆಚ್ಚು ಕೊಡಲು ಬಂದಾಗ "ಹಸಿದವನಿಗೆ ಉಣಿಸುವವನು, ಬಟ್ಟೆಯಿಲ್ಲದ ಬಡವರಿಗೆ ಬಟ್ಟೆ ಕೊಡುವವನು ನಿಜವಾಗಿಯೂ ದೇವರ ಪ್ರೀತಿಗೆ ಪಾತ್ರನಾಗುತ್ತಾನೆ. ಆದರೆ ದಾನ ಕೊಡುವವನು ತನ್ನ ಸಂಪತ್ತನ್ನು ಪ್ರಾಮಾಣಿಕವಾಗಿ ಗಳಿಸಿರಬೇಕು ಮತ್ತು ದಾನ ಪಡೆಯುವವನು ತನಗೆ ಅವಶ್ಯ ಇದ್ದಷ್ಟನ್ನು ಮಾತ್ರ ಸ್ವೀಕರಿಸಬೇಕು."

ಇದು ಸಮಾಜದ ಶ್ರೀಮಂತರಿಗೆ ನೀಡಿದ ಮೆಲು ಧ್ವನಿಯ ಎಚ್ಚರಿಕೆ, ಸಂಚಾರ ಕಾಲದಲ್ಲಿ ಅನೇಕ ಸಲ ದುಷ್ಟರ ಕೈಗೆ ಸಿಕ್ಕಿ ಅಪಾಯಕ್ಕೆ ಒಳಗಾಗುವ ಪ್ರಸಂಗಗಳು ಎದುರಾದವು. ಇಂತಹ ಪ್ರಸಂಗಗಳು ಮಹಾತ್ಮರ ಸತ್ವಪರೀಕ್ಷೆಗಳಾಗಿ, ಅವರ ಶಕ್ತಿ ಲೋಕ ವಿಖ್ಯಾತವಾಗಲು ಕಾರಣವಾಗುತ್ತವೆ.

ಬಾಬರನ ಸೈನ್ಯಕ್ಕೆ ಸೆರೆಸಿಕ್ಕಿದ ನಾನಕ್ ಸೈನಿಕರು ವಿಧಿಸಿದ ಕಠಿಣವಾದ ಕಾರ್ಯಗಳನ್ನು ದೈವಸ್ತುತಿ ಗೈಯುತ್ತಾ, ನಗುನಗುತ್ತಾ ಮಾಡಿ ಬಾಬರನ ಆಶ್ಚರ್ಯಕ್ಕೆ ಕಾರಣರಾಗುವುದಲ್ಲದೆ – ಆತನಿಂದ ಸನ್ಮಾನಿತರೂ ಆಗುತ್ತಾರೆ.

ದೈವದಲ್ಲಿ ಕುಂದದ ನಂಬಿಕೆ ಎಂತಹ ವಿಪತ್ತಿನಲ್ಲೂ ಅವರ ಧೃತಿಯನ್ನು ರಕ್ಷಿಸುತ್ತದೆ.

ಸಜ್ಜನ ವೇಷದ ದುಷ್ಟನ ಮನೆಯಲ್ಲಿ ಉಳಿಯುವ ಪ್ರಸಂಗ ಬರುತ್ತದೆ. ರಾತ್ರಿ ಗುರುವಿನ ಬಳಿ ಇರುವುದನ್ನು ದೋಚಿ, ಅವರನ್ನು ಕೊಲೆ ಮಾಡುವ ಸಂಚು ಆತನದು. ಮಲಗುವ ಮುನ್ನ ನಾನಕ ಮರ್ದಾನನ ವಾದ್ಯದ ಶೃತಿಗೆ ಧ್ವನಿ ಸೇರಿಸಿ ಹಾಡಲು ಪ್ರಾರಂಭಿಸುತ್ತಾರೆ. ಹಾಡಿನ ಅರ್ಥ. "ಹಿತ್ತಾಳೆಯೂ ಚಿನ್ನದಂತೆಯೇ ಫಳ ಫಳನೆ ಹೊಳೆಯುತ್ತಿದ್ದರೂ ಒರೆಗೆ ಹಚ್ಚಿದಾಗ ಅದರ ಬಣ್ಣ ಬಯಲಾಗುತ್ತದೆ. ಗೆಳೆಯನಂತೆ ವರ್ತಿಸುವವನ ಒಳಗು, ದೈವದ ಎದುರು ಲೆಕ್ಕ ಒಪ್ಪಿಸುವಾಗ ಹೊರ ಬೀಳುತ್ತದೆ. ನದಿಯ ದಂಡೆಯ ಮೇಲಿನ ಕೊಕ್ಕರೆ ಮಹಾ ಧ್ಯಾನಿಯಂತೆ ಕಂಡರೂ, ಅದರ ಧ್ಯಾನವೆಲ್ಲಾ ಅದರ ಆಹಾರದ ಕಡೆಗೇ, ತೋರಿಕೆಯ ಒಳ್ಳೆಯತನ ದೇವರೆದುರು ವ್ಯರ್ಥ." ಈ ಹಾಡನ್ನು ಕೇಳುತ್ತಾ ಕೇಳುತ್ತಾ ದುಷ್ಟನ ಮನಸ್ಸು ಪಶ್ಚಾತ್ತಾಪದಿಂದ ಕುದಿಯಿತು.

ಗುರುವಿನ ಮುಂದೆ ತನ್ನ ಪಾಪವನ್ನು ಬಯಲುಗೊಳಿಸಿ, ತನ್ನ ಸಂಪತ್ತನ್ನೆಲ್ಲಾ ಬಡವರಿಗೆ ದಾನ ಮಾಡಿ ನಾನಕರ ಶಿಷ್ಯನಾದ.

ಸಂಚಾರದ ವೇಳೆಯಲ್ಲಿ ಲಾಹೋರಿನಲ್ಲಿ ದುನಿಚಾಂದ್ ಎಂಬ ಲಕ್ಷಾಧಿಪತಿ ತನ್ನ ತಂದೆಯ ಶ್ರಾದ್ಧದ ನಿಮಿತ್ತ, ವಿಜೃಂಭಣೆಯಿಂದ ಊಟಕ್ಕೆ ಏರ್ಪಾಟು ಮಾಡಿದ್ದ. ಗುರು ನಾನಕ್‌ರನ್ನು ಆಮಂತ್ರಿಸಿದ. ಆಗ ನಾನಕರು 'ನನ್ನದೊಂದು ಕೋರಿಕೆ ಇದೆ. ಅದನ್ನು ನೆರವೇರಿಸುವ ಹಾಗಿದ್ದರೆ ನಿಮ್ಮ ಊಟದ ಆಹ್ವಾನವನ್ನು ಒಪ್ಪಿಕೊಳ್ಳುತ್ತೇನೆ' ಎಂದರು.

ಶ್ರೀಮಂತ ಬಹು ಬಿಗುಮಾನದಿಂದ 'ಆಗಲಿ ಗುರುಗಳೇ' ನಿಮ್ಮ ಕೋರಿಕೆ ಏನು ಎಂದ. ಏನು ಕೇಳಿದರೂ ನೆರವೇರಿಸುವ ಗತ್ತಿನಲ್ಲಿ. ಗುರುನಾನಕರು ಬಹು ಮೃದುವಾದ ಧ್ವನಿಯಲ್ಲಿ "ನನ್ನ ಬಳಿ ಒಂದು ಸಣ್ಣ ಸೂಜಿ ಇದೆ, ಬಹಳ ದಿನಗಳಿಂದಲೂ ಅದನ್ನು ಕಾಪಾಡಿಕೊಂಡು ಬಂದಿದ್ದೇನೆ, ಅದನ್ನು ಈಗ ನಿಮಗೆ ಒಪ್ಪಿಸುತ್ತಾ ಇದ್ದೇನೆ. ತಾವು ಅದನ್ನು ನನಗೆ ಸ್ವರ್ಗದಲ್ಲಿ ಕೊಡಬೇಕು".

ಶ್ರೀಮಂತನಿಗೆ ತಡೆಯಲಾರದಷ್ಟು ನಗು ಬಂದಿತು. 'ಗುರುಗಳೇ ಸೂಜಿಯನ್ನು ಸ್ವರ್ಗಕ್ಕೆ ಒಯ್ಯುವುದು ಹೇಗೆ?' ಎಂದು ಮರು ಪ್ರಶ್ನಿಸಿದ.

ನಾನಕರು – "ಸಣ್ಣ ಸೂಜಿಯೊಂದನ್ನು ಒಯ್ಯಲಾರದ ನೀನು ಈಗ ತೋರಿಸಿಕೊಳ್ಳುತ್ತಿರುವ ಈ ಸಂಪತ್ತನ್ನೆಲ್ಲಾ ಸ್ವರ್ಗಕ್ಕೆ ಹೇಗೆ ಒಯ್ಯಬಲ್ಲೆ?' ಎಂದು ಕೇಳಿದರು.

ಸತ್ತಾಗ ಸಂಪತ್ತು ತನ್ನನ್ನು ಹಿಂಬಾಲಿಸುವುದಿಲ್ಲ ಎಂಬ ವಾಸ್ತವ ಸತ್ಯ ಶ್ರೀಮಂತನ ಹೃದಯಕ್ಕೆ ತಾಗಿ ಮಹಾ ಪರಿವರ್ತನೆ ಆತನಲ್ಲಿ ಉಂಟಾಯಿತು. ದೀನ ದಲಿತರ ಸೇವೆಗೆ ತನ್ನ ಬದುಕನ್ನು ಮುಡುಪಾಗಿಸಿದ.

ಸಮಾಜದಲ್ಲಿ ರೂಢಮೂಲವಾಗಿ ಬೆಳೆದು ಬಂದಿದ್ದ ಮೇಲು–ಕೀಳು – ಶ್ರೀಮಂತ–ಬಡವ ಎಂಬ ಕೃತಕ ವಿಭಾಗವನ್ನು ಒಡೆದು ಜನಸಾಮಾನ್ಯರಲ್ಲಿ ಸಮಾನತೆಯನ್ನು ಸಾಧಿಸಲು ನಾನಕ್ ತಮ್ಮ ಸಂಚಾರದ ಕಾಲದಲ್ಲಿ ಬಹಳವಾಗಿ ಪ್ರಯತ್ನಿಸಿದ್ದಾರೆ.

ಸೈಯದಪುರದಲ್ಲಿ ನಾನಕರು ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದಿದ್ದ ಲಾಲೂ ಎಂಬ ಬಡಗಿಯ ಸತ್ಕಾರವನ್ನು ಪಡೆದರು.

ಕ್ಷತ್ರಿಯ ಕುಲದ ಸಂತರೊಬ್ಬರು ಕೀಳು ಕುಲದವನ ಮನೆಯಲ್ಲಿ ಊಟ ಮಾಡಿದ ಘಟನೆ ಅಂದಿನ ಕಾಲಕ್ಕೆ ಕೋಲಾಹಲವನ್ನುಂಟು ಮಾಡಿದ ಘಟನೆ.

ಅದೇ ಊರಿನ ಉಚ್ಚ ಕುಲದ ಶ್ರೀಮಂತ ಸುತ್ತಮುತ್ತಣ ಸಾಧು ಸಂತರಿಗೆಲ್ಲ ಔತಣ ಕೂಟವೇರ್ಪಡಿಸಿದ. ನಾನಕರನ್ನು ಆಮಂತ್ರಿಸಿದ. ಅದಕ್ಕೆ ನಾನಕರು "ಕೀಳು ಕುಲದವರಲ್ಲಿಯೇ ಕೀಳಾದ ಅನೇಕರು ಇರುವಾಗ ನಾನು ಅಂತಹವರ ಸಂಗಾತಿಯಾಗಲು ಬಯಸುತ್ತೇನೆಯೇ ಹೊರತು, ಶ್ರೀಮಂತರೊಡನೆ ಸ್ಪರ್ಧಿಸುವ ಬಯಕೆ ತಮಗಿಲ್ಲ"ವೆಂದು ಆತನ ಆಹ್ವಾನವನ್ನು ನಿರಾಕರಿಸಿದರು. ಆಗ ಅಲ್ಲಿದ್ದ ಉನ್ನತಸ್ತರದ ಜನ ಕೋಪಗೊಂಡು "ಕೀಳು ಕುಲದವನ ಮನೆಯಲ್ಲಿ ಊಟ ಮಾಡಲು ಬೇಸರವಾಗದ ನಿಮಗೆ, ಇಲ್ಲಿ ಊಟ ಮಾಡಲು ಕಸಿವಿಸಿಯಾಗುತ್ತದೆಯೇ?" ಎಂದು ಪ್ರತಿಭಟಿಸಿದಾಗ "ಬಡಗಿ ಲಾಲೂವಿನ ಮನೆಯ ಊಟ ಹಾಲು-ಜೇನಿನಂತೆ ಇತ್ತು, ಇವನ ಮನೆಯ ಊಟದಲ್ಲಿ ರಕ್ತದ ವಾಸನೆ ಬರುತ್ತಿದೆ" ಎಂದು ಸ್ಪಷ್ಟವಾಗಿ ನುಡಿಯುವುದರ ಮೂಲಕ ಮೇಲು ವರ್ಗದವರು ಅನ್ಯಾಯದ ಮಾರ್ಗದಲ್ಲಿ ಶ್ರೀಮಂತರಾಗುತ್ತಿದ್ದಾರೆ ಎಂಬುದನ್ನೂ ಖಚಿತವಾಗಿ ಸೂಚಿಸಿದರು. ಗುರು ನಾನಕ್‌ರು ಸನ್ಯಾಸಿಯಂತೆ ಕಾವಿ ಧರಿಸಿರಲಿಲ್ಲ. ಸಂಸಾರವನ್ನು ತ್ಯಜಿಸಿರಲಿಲ್ಲ. ಅವರ ದೃಷ್ಟಿಯಲ್ಲಿ ಜೀವನವೆನ್ನುವುದು ಭಗವಂತನೆಡೆಗೆ ಸಾಗುವ ಒಂದು ಸಾಧನ ಮಾರ್ಗ. ಅದಕ್ಕೆ ವೇಷ ಮುಖ್ಯವಲ್ಲ, ನಡತೆ ಮುಖ್ಯ. "ಅಗತ್ಯವಿಲ್ಲದ ಸುಖವನ್ನು ಬಯಸುವುದು ಪಾಪ, ಹಾಗೆಯೇ ಜೀವನದ ಅಗತ್ಯಗಳನ್ನು ನಿರಾಕರಿಸುವುದೂ ಪಾಪವೇ'' ಇದು ಅವರ ಜೀವನ ದೃಷ್ಟಿ. ಹಿಂದು-ಮುಸ್ಲಿಂರಲ್ಲಿ ತಲೆಮಾರಿನಿಂದ ತಲೆಮಾರಿಗೆ ಸಾಗಿ ಬರುತ್ತಿದ್ದ ಅಪನಂಬಿಕೆ, ದ್ವೇಷಗಳನ್ನು ಹೋಗಲಾಡಿಸಿ ಪರಸ್ಪರರಲ್ಲಿ ಸ್ನೇಹ-ಸೌಹಾರ್ದಗಳನ್ನು ಮೂಡಿಸಲು ನಾನಕ್‌ರು ತಮ್ಮ ಜೀವನವನ್ನೇ ಮುಡುಪಾಗಿಸಿದ್ದರು. ಭಾರತದ ಹಿಂದು ಪುಣ್ಯ ಕ್ಷೇತ್ರಗಳನ್ನು ಸಂದರ್ಶಿಸಿದಂತೆಯೇ ಮುಸ್ಲಿಂರ ಪರಮ ಪವಿತ್ರ ಯಾತ್ರಾಸ್ಥಳಗಳಾದ ಮಕ್ಕಾ, ಮದೀನ ಮತ್ತು ಬಾಗದಾದ್‌ಗಳಿಗೂ ಮರ್ದಾನನನ್ನು ಜೊತೆಗೆ ಕರೆದುಕೊಂಡು ಯಾತ್ರೆ ಹೊರಟರು.

ಆಗ ಅವರು ಧರಿಸಿದ್ದು ಮುಸ್ಲಿಂ ಯಾತ್ರಿಕನ ಉಡುಪು, ಕೈಯಲ್ಲಿ ಮಣ್ಣಿನ ಪಾತ್ರೆ, ಕಂಕುಳಲ್ಲಿ ಪ್ರಾರ್ಥನಾ ಚಾಪೆ ಮತ್ತು ಪವಿತ್ರ ಕುರಾನ್ ಗ್ರಂಥ !

ಅವರ ಮಕ್ಕಾ ಯಾತ್ರೆಯ ಸಂದರ್ಭದ ಒಂದು ಕತೆ ಬಹಳ ಪ್ರಚಲಿತವಿದೆ.

ಒಮ್ಮೆ ದೇಹಾಲಸ್ಯದಿಂದ ಮಲಗಿ ನಿದ್ರಿಸುತ್ತಿದ್ದ ನಾನಕ್‌ರನ್ನು ಅಲುಗಾಡಿಸಿ ಎಬ್ಬಿಸಿ "ಎಲೆ ಧರ್ಮ ದ್ರೋಹಿಯೇ, ನಿನ್ನ ಕಾಲುಗಳು

ಪರಮ ಪವಿತ್ರವಾದ 'ಕಾಬಾ'ದ ಕಡೆಗೆ ಇದೆಯಲ್ಲ" ಎಂದು ಗದರಿದ. ನಾನಕರು ಶಾಂತವಾಗಿಯೇ ತಾವು ಬಹು ಆಯಾಸದಿಂದ ಇರುವುದಾಗಿಯೂ, ಕಾಬಾ ಇಲ್ಲದ ದಿಕ್ಕಿಗೆ ತಮ್ಮ ಕಾಲುಗಳನ್ನು ಹೊರಳಿಸಿ ಉಪಕರಿಸಬೇಕೆಂದು ಕೇಳಿಕೊಂಡರು. ಆತ ಆಗಲಿ ಎಂದು ಅವರ ಕಾಲುಗಳನ್ನು ಬೇರೆ ದಿಕ್ಕಿಗೆ ಹೊರಳಿಸಿದ. ಆಲ್ಲೂ ಕಾಬಾ ಕಾಣಿಸಿತು. ಯಾವ ಯಾವ ದಿಕ್ಕಿಗೆ ಕಾಲು ತಿರುಗಿದರೂ ಅಲ್ಲೆಲ್ಲಾ ಕಾಬಾದ ದರ್ಶನವಾಯಿತು. ಆಗ 'ಆಹಾ ಇಲ್ಲೊಬ್ಬ ಪವಾಡಪುರುಷ ಬಂದಿದ್ದಾನೆ' ಎಂಬ ಅರಿವು ಉಂಟಾಯಿತು.

ಮೂಢನಂಬಿಕೆಗಳನ್ನು ಕಂಡಾಗಲೆಲ್ಲಾ ನಾನಕರು ತಮ್ಮ ಹರಿತವಾದ ತರ್ಕದಿಂದ ಮೂಢನಂಬಿಕೆಯ ಬೇರನ್ನು ಅಲ್ಲಾಡಿಸಲು ಪ್ರಯತ್ನಿಸಿದ್ದಾರೆ.

ಒಮ್ಮೆ ಪ್ರವಾಸದಲ್ಲಿದ್ದಾಗ–ಹರಿದ್ವಾರದಲ್ಲಿ ಕೆಲವು ಯಾತ್ರಿಕರು ತಮ್ಮ ಪಿತೃಗಳಿಗೆ ತರ್ಪಣ ಕೊಡುತ್ತಿರುವುದನ್ನು ನೋಡಿದ ನಾನಕರು–ಅದೇ ನದಿಯ ನೀರನ್ನು ಬೊಗಸೆ ಬೊಗಸೆ ಎತ್ತಿ ಬೇರೊಂದು ದಿಕ್ಕಿಗೆ ಎರಚಲು ಪ್ರಾರಂಭಿಸಿದರು.

ಯಾತ್ರಿಕರು ಆಶ್ಚರ್ಯಗೊಂಡು 'ಏನು ಮಾಡುತ್ತಾ ಇದ್ದೀರಿ' ಎಂದು ಕೇಳಿದರು. 'ನಾನು ಊರು ಬಿಟ್ಟಾಗಲಿಂದ ನನ್ನ ಹೊಲಕ್ಕೆ ನೀರು ಸಿಕ್ಕಿದೆಯೋ ಇಲ್ಲವೋ–ಇಲ್ಲಿಂದ ನೀರು ಕಳುಹಿಸಲು ಪ್ರಯತ್ನಿಸುತ್ತಾ ಇದ್ದೇನೆ' ಎಂದಾಗ ಅವರು ಇವರ ಮೂಢತೆಗೆ ನಕ್ಕರು. ಆಗ ನಾನಕರು ಶಾಂತವಾಗಿಯೆ–'ತಾವು ಇಲ್ಲಿ ಕೊಡುವ ತರ್ಪಣದ ನೀರು ಪರಲೋಕಕ್ಕೆ ತಲ್ಪುವ ಹಾಗಿದ್ದರೆ–ನಾನು ಎರಚಿದ ನೀರು ಈ ಲೋಕದಲ್ಲಿಯೇ ಕೆಲವೇ ಮೈಲಿಗಳ ಆಚೆಗೆ ತಲ್ಪಲಾರದೆ?' ಎಂದು ಮರುಪ್ರಶ್ನಿಸಿದಾಗ – ಯಾತ್ರಿಕರು ನಿರುತ್ತರರಾದರು. ಹೀಗೆ ಸಂಚಾರ ಕಾಲದಲ್ಲಿ ನಾನಕ್‌ರು ಲೋಕದ ನಾನಾ ಧರ್ಮದ, ನಂಬಿಕೆಯ, ಸ್ತರದ ಜನರೊಡನೆ ತಮ್ಮ ದರ್ಶನವನ್ನು ಹಂಚಿಕೊಂಡು –ತಮ್ಮತ್ತ ಜನರನ್ನು ಆಕರ್ಷಿಸಿ – ಹೊಸದೊಂದು ಮತಕ್ಕೆ ಭದ್ರವಾದ ಬುನಾದಿಯನ್ನು ಒದಗಿಸಿದರು.

ಪಂಜಾಬಿ ಸಾಹಿತ್ಯಕ್ಕೆ ಗುರುನಾನಕರ ಕೊಡುಗೆ

ಕ್ರಿ.ಶ. ೧೧೭೩–೧೨೬೫ರವರೆಗೆ ಇದ್ದ ಷೇಕ್ ಫರೀದ್ (Sheikh Farid) ಅವರಿಂದ ಪಂಜಾಬಿ ಸಾಹಿತ್ಯದ ಉಗಮವನ್ನು ಗುರ್ತಿಸುವುದು ರೂಢಿ.

ಪಂಜಾಬಿ ಸಾಹಿತ್ಯದ ವಿಕಾಸದಲ್ಲಿ ಗುರುನಾನಕ್‌ರ ಪಾತ್ರ ಅದ್ವಿತೀಯ. ಗುರುನಾನಕ್‌ರಿಗೂ ಷೇಕ್ ಫರೀದ್ ಅವರಿಗೂ ನಡುವೆ ಎರಡು ಶತಮಾನಗಳ ಕಾಲದ ಅಂತರವಿದೆ. ಈ ಎರಡು ಶ.ಮಾ.ಗಳಲ್ಲಿ ಸೃಷ್ಟಿಯಾಗಿರಬಹುದಾದ ಸಾಹಿತ್ಯದ ಬಗ್ಗೆ ಇಂದು ಯಾವ ಮಾಹಿತಿಯೂ ಸಿಗುತ್ತಿಲ್ಲ.

ಸತತ ಅಕ್ರಮಣಕಾರರ ಧಾಳಿಗೆ ಈಡಾಗಿದ್ದ ದೇಶದಲ್ಲಿ, ಜನಜೀವನ ಅಲ್ಲೋಲ, ಕಲ್ಲೋಲವಾಗಿದ್ದ ಸಂದರ್ಭದಲ್ಲಿ ಸಾಹಿತ್ಯ ಸೃಷ್ಟಿಯಾಗದೆಯೂ ಇರಬಹುದು. ಅಥವಾ ಜನ ಜೀವನವೇ ಜೀವ ಭೀತಿಯಿಂದ ತಲ್ಲಣಗೊಂಡಿದ್ದ ಕಾಲದಲ್ಲಿ ಸಾಹಿತ್ಯ-ಕಲೆಗಳು ಸಂರಕ್ಷಣೆ ಸಿಗದೆ ನಾಶವಾಗಿರಬಹುದು.

ಗುರುನಾನಕರೇ ಬಾಬರನ ಸೈನ್ಯಕ್ಕೆ ಸೆರೆಸಿಕ್ಕಿದ್ದ ವಿಚಾರ, ನಾನಕರ (೧೫೨೧) "ಬಾಬರವಾಣಿ"ಯಿಂದ ವ್ಯಕ್ತವಾಗುತ್ತದೆ.

ಗುರುನಾನಕರು ಧಾರ್ಮಿಕ ಪ್ರಪಂಚದ ನೇತಾರರಾಗಿ, ಹೊಸ ಮತವೊಂದರ ಸ್ಥಾಪಕರಾದಂತೆಯೇ ಸಾಹಿತ್ಯ ರಂಗದಲ್ಲೂ ಹೊಸ ಮನ್ವಂತರಕ್ಕೆ ಕಾರಣರಾದವರು.

ಗ್ರಂಥ ಸಾಹೇಬ್‌ನಲ್ಲಿ ಸಂಕಲನಗೊಂಡಿರುವ ಅವರ ಸಾಹಿತ್ಯವನ್ನು ಗಮನಿಸಿದಾಗ, ಅಂದು ಪ್ರಚಲಿತವಿದ್ದ, ಆದರೆ ಇಂದು ಕಣ್ಮರೆಯಾಗಿರುವ ಅನೇಕ ಸಾಹಿತ್ಯ ಪ್ರಕಾರಗಳತ್ತ ಹೊಸ ಬೆಳಕು ಚೆಲ್ಲುತ್ತದೆ. ಉದಾಹರಣೆಗೆ ಗ್ರಂಥಸಾಹೇಬ್‌ನಲ್ಲಿ ದಾಖಲಾಗಿರುವ ನಾನಕರ (var) ಒಂದು ಆಶಾರಾಗ್‌ನ ವಾರ್‌ನ್ನು ತಂಡಾದ ರಾಜ್‌ನ ವಾರ್‌ನ ಹಾಗೆ ಹಾಡುವಂತೆಯೂ, ಮಜ್‌ರಾಗದ ವಾರ್‌ನ್ನು (Majh Rag) ಮಲ್ಲಿಕ್ ಮುರಿದ್ (Malik Murid) ವಾರ್‌ನಂತೆ ಹಾಡುವಂತೆಯೂ ನಿರ್ದೇಶನ ನೀಡಲಾಗಿದೆ.

ಗ್ರಂಥ ಸಾಹೇಬ್‌ನಲ್ಲಿರುವ ಗುರುನಾನಕರ ರಚನೆಗಳಲ್ಲಿ ಅವರ ಕಾಲಕ್ಕಿಂತಲೂ ಪೂರ್ವದಲ್ಲಿದ್ದ-ಈಗ ಕಣ್ಮರೆಯಾಗಿರುವ ಆರು ವಾರ್‌ಗಳನ್ನು ಗುರ್ತಿಸಿದ್ದಾರೆ.

ಗ್ರಂಥ ಸಾಹೇಬ್‌ನಲ್ಲಿರುವ ನಾನಕ್‌ರ ರಚನೆಗಳನ್ನು ಹಾಡಲು ಅನುಕೂಲವಾಗುವ ಹಾಗೆ ವಿವಿಧ ರಾಗಗಳಲ್ಲಿ ಅಳವಡಿಸಲಾಗಿದೆ.

ನಾನಕರ ರಚನೆಗಳನ್ನು ಪದಗಳು (ಪದ್ಯಗಳು) ಅಷ್ಟಪದಗಳು (ಎಂಟು ಪದ್ಯಗಳ ಒಂದು ಗುಂಪು) ಚಹಾಂತ್, ಬಹಾರ, ಪಹರೇ,

ಸೋಲೇ, ಸವಯ್ಯಾ (ಅನಿಯತ ಸಾಲುಗಳ, ವಿವಿಧ ಪದ್ಯ ಪ್ರಕಾರಗಳು) ಮುಂತಾದ ಪ್ರಾಚೀನ ಜಾನಪದ ಪ್ರಕಾರಗಳಲ್ಲಿ ವಿಂಗಡಿಸಬಹುದಾಗಿದೆ.

ನಾನಕರು ತಮ್ಮ ಹೆಚ್ಚಿನ ಸಾಹಿತ್ಯವನ್ನು ಜಪು (Japu) ಸಿದ್ಧಗೋಷ್ಠಿ (Sidha Ghosti), ಓಂಕಾರ್ (Omkar) ವಾರ್ (Vars)ಗಳೆಂಬ ಪ್ರಕಾರಗಳಲ್ಲಿ ರಚಿಸಿದ್ದಾರೆ. ಈಎಲ್ಲಾ ಸಾಹಿತ್ಯ ಪ್ರಕಾರಗಳ ಮೂಲ ಜನಪದರ ಹಾಡುಗಳಲ್ಲಿ ಇದ್ದಿರಬಹುದು. ಲಿಪಿಯಲ್ಲಿ ಶಾಶ್ವತಗೊಳ್ಳದೆ ಕಂಠದಿಂದ ಕಂಠಕ್ಕೆ ಹರಿದು ಹೋಗುತ್ತಿದ್ದ ಆ ಸಾಹಿತ್ಯ ಪ್ರಕಾರಗಳನ್ನು ತಮ್ಮ ಆಲೋಚನೆಯ ಅಭಿವ್ಯಕ್ತಿಯ ಮಾಧ್ಯಮಗಳನ್ನಾಗಿ ಆರಿಸಿಕೊಂಡು– ಅವುಗಳಿಗೆ ಶಾಶ್ವತ ರೂಪವನ್ನು ಕೊಡುವಲ್ಲಿ ನಾನಕರು ಅದ್ವಿತೀಯ ಸ್ಥಾನವನ್ನು ತಮ್ಮದಾಗಿಸಿಕೊಂಡಿದ್ದಾರೆ. ಪಂಜಾಬಿನ ಉದ್ದಗಲ ಸದಾ ಸಂಚಾರದಲ್ಲಿರುತ್ತಿದ್ದ ನಾನಕರು, ಬೇರೆ, ಬೇರೆ ಭಾಗಗಳಲ್ಲಿ ಜನ ಮಾತನಾಡುತ್ತಿದ್ದ ಗ್ರಾಮ್ಯ ಭಾಷೆಯ ಸೊಗಡನ್ನು ಹತ್ತಿರದಿಂದ ಗಮನಿಸುವ, ಬಳಸುವ ಅವಕಾಶವನ್ನು ಪಡೆದಿದ್ದುದರಿಂದ ಜನಪದರ ಭಾಷಾ ವೈವಿಧ್ಯದಿಂದ ತಮ್ಮ ಬರವಣಿಗೆಯನ್ನು ಸುಂದರಗೊಳಿಸುವುದರ ಜೊತೆಗೆ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

ಜನಪದರಲ್ಲಿ ಬಳಕೆಯಲ್ಲಿದ್ದ 'ಲಿಪಿ'ಯನ್ನು ತಮ್ಮ ಬರವಣಿಗೆಗೆ ಆಯ್ದುಕೊಂಡು ಆಡಳಿತದ ಮಾಧ್ಯಮವಾಗಿದ್ದ ಅರೇಬಿಕ್, ಪರ್ಷಿಯನ್ ಮತ್ತು ದೇವನಾಗರಿ 'ಲಿಪಿ'ಗೆ ಬದಲಾಗಿ, ತಮ್ಮ ನಾಡಿನ ಸ್ವಂತಿಕೆಯನ್ನು ಪ್ರತಿಷ್ಠಾಪಿಸುವ ನಿಟ್ಟಿನಲ್ಲಿ ಜನಪದದ ಲಿಪಿಗೆ ಗುರುಮುಖಿ ಎಂದು ಕರೆದು – ಅದನ್ನು ತಮ್ಮ ಕೃತಿ ರಚನೆಗೆ ಬಳಸಿ – ಲಿಪಿಗೆ ಹಾಗೂ ಭಾಷೆಗೆ ಘನತೆಯನ್ನು ತಂದುಕೊಟ್ಟ ಧೀಮಂತ ಸಾಹಿತಿ – ಗುರುನಾನಕ್‌ರು. ನಾನಕ್‌ರ ಸಾಹಿತ್ಯ ಮುಖ್ಯವಾಗಿ ಮೂರು ಭಾಷೆಗಳಲ್ಲಿ ರಚನೆಗೊಂಡಿದೆ – ೧) ಅಪಭ್ರಂಶ. ೨) ಹಿಂದ್ವಿ ೩)ಪಂಜಾಬಿ. ಇದು ಪಂಜಾಬಿ ಭಾಷೆಯ ವಿಕಾಸದ ಅಧ್ಯಯನಕ್ಕೆ ಯೋಗ್ಯವಾದ ವಿಷಯ.

ಮೂರೂ ಭಾಷೆಗಳಲ್ಲೂ ಸಮಾನ ಪ್ರಭುತ್ವ ಇದ್ದ ನಾನಕರು ಒಂದು ಭಾಷೆಯಲ್ಲಿ ಬರೆಯುವಾಗ ಉಳಿದೆರಡು ಭಾಷೆಗಳಲ್ಲಿನ ಪದಗಳನ್ನಲ್ಲದೆ, ಸಂಸ್ಕೃತ, ಪರ್ಷಿಯನ್, ಅರೇಬಿಕ್ ಭಾಷೆಗಳಿಂದಲೂ ಪದಗಳನ್ನು ತಮ್ಮ ಅಭಿವ್ಯಕ್ತಿಯ ಸೌಕರ್ಯಕ್ಕಾಗಿ ಎಗ್ಗಿಲ್ಲದೆ ಬಳಸುವುದರ ಮೂಲಕ ಪಂಜಾಬಿ ಭಾಷೆಯ ಅಭಿವ್ಯಕ್ತಿಯ ಶಕ್ತಿಯನ್ನು ಬಹುವಾಗಿ ಶ್ರೀಮಂತಗೊಳಿಸಿದ್ದಾರೆ.

ನಾನಕರ ಸಾಹಿತ್ಯದ ಕೇಂದ್ರ ಬಿಂದು ಭಕ್ತಿ. ಭಗವದ್ ಆರಾಧನೆ. ಭಗವದ್ ಸಾಕ್ಷಾತ್ಕಾರಕ್ಕಾಗಿ ಅನವರತ ಹಂಬಲದ ಭಾವನೆಗಳನ್ನು ಸುಂದರವಾದ ರೂಪಕ, ಉಪಮಾನಗಳ ಮೂಲಕ ವ್ಯಕ್ತಪಡಿಸಿದ್ದಾರೆ.

ಉದಾ :

೧.ಪರಮನ ಸ್ವರೂಪ ನಾವು ಅರಿಯಲು ಸಾಧ್ಯವೆ ?
ನೂರಾರು ಸಾವಿರ ಸಲ
ಯುಗ-ಯುಗಗಳು ಅವನ ಅರಿಯಲು ಯತ್ನಿಸಿದರೂ
ಅರಿವಿನ ಅಳತೆಗೆ ಮೀರಿ ನಿಲ್ಲುವ ಅನಂತ
ಆಳವಾದ ಧ್ಯಾನದಲಿ ಚಿತ್ತವ ನಿಲ್ಲಿಸಿ
ನಿಶ್ಯಬ್ದದ ಗರ್ಭಗಳಲಿ ಅವನ ಅರಸುತ ಅಲೆದರೂ
ಧ್ಯಾನಾತೀತನಾತ,
ಅವನ ಅರಿವ ಬಯಕೆ
ಕಾಣುವ ಹಸಿವಿನ ಮುಂದೆ
ಇಡೀ ಪ್ರಪಂಚವೇ ಕ್ಷುಲ್ಲಕ.
ಮಾನವ ಆತ್ಮ ಅನಂತನ ಅರಿಯಲು ಅನಂತ ಕಾಲದಿಂದ
ಪರಿತಪಿಸುತಿದೆ ನೋಡಾ.
ಅವನಿಗಾಗಿ ಹುಡುಕಾಟ ನಿಲ್ಲದು.
ಈ ಹುಡುಕಾಟದಲಿ ವಿವೇಕ, ಜ್ಞಾನಗಳು ನಮ್ಮೊಡನೆ
ಬಹುದೂರ ಬರಲಾರವು.
ಅವ ನಡೆಸಿದಂತೆ ನಡೆಯುತ
ಅವನ ಕರುಣೆಗಾಗಿ ಕಾಯುತ
ನಿರೀಕ್ಷೆಯ ಪಥದಲಿ ಸಾಗುವುದೊಂದೇ
ಪರಮ ಸತ್ಯದ ದಾರಿ.
೨. ಸತ್ಯವೇ ಎಲ್ಲಕಿಂ ಮಿಗಿಲು
ಸತ್ಯಕಿಂ ಮಿಗಿಲು ಸತ್ಯದ ನಡತೆ.

ಕಡೆಯ ದಿನಗಳು

ನಾನಕರು ತಮ್ಮ ಸಾಕ್ಷಾತ್ಕಾರದ ತರುವಾಯ ಸುಮಾರು ಹತ್ತೊಂಬತ್ತು ವರುಷಗಳು ಭಾರತದ ಹಾಗೂ ಹೊರ ದೇಶದ ಸಂಚಾರದಲ್ಲಿದ್ದರು.

ತಮ್ಮ ಐವತ್ತೇಳನೆ ವಯಸ್ಸಿಗೆ ಕರ್ತಾರಪುರದಲ್ಲಿ ತಮ್ಮ ಹೊಲದಲ್ಲಿಯೇ ಆಶ್ರಮ ರಚಿಸಿಕೊಂಡು ನೆಲೆಸಿದರು. ಆಗ ಅವರೊಡನೆ ಹೆಂಡತಿ, ಮಕ್ಕಳು, ತಂದೆ-ತಾಯಿ ಮುಂತಾದ ಬಂಧು ಬಳಗದವರೆಲ್ಲ ಒಟ್ಟಿಗೆ ಇದ್ದರು.

ದೇಶದ ಜನತೆಗೆ ನಾನಕರು ಇದ್ದ ಸ್ಥಳವೇ ಯಾತ್ರಾಸ್ಥಳವಾಯಿತು.

ಅವರ ಪ್ರಭಾವಕ್ಕೆ ಒಳಗಾದ ಅನೇಕರು ಕರ್ತಾರಪುರದಲ್ಲಿಯೇ ನೆಲೆಸಿದರು.

ಅವರನ್ನು ಕಾಣಲು ಅವರು ನಡೆಸುತ್ತಿದ್ದ ಸತ್ಸಂಗ ಗೋಷ್ಠಿಯಲ್ಲಿ ಭಾಗವಹಿಸಲು ಸಾವಿರಾರು ಜನ ನಿತ್ಯ ಅವರಲ್ಲಿಗೆ ಬರುತ್ತಿದ್ದರು.

ಬಂದವರಿಗೆಲ್ಲಾ ಜಾತಿ ಭೇದವಿಲ್ಲದೆ ಅವರ ಮನೆಯಲ್ಲಿ ಊಟದ ವ್ಯವಸ್ಥೆ ಇರುತಿತ್ತು.

ಇಂದು ಸಿಕ್ ಧರ್ಮದ ಪ್ರಧಾನ ಅಂಗವಾದ ಲಂಗರ್ (ಸಾಮೂಹಿಕ ಅಡಿಗೆ ಮನೆ) ಅವರ ಕಾಲದಲ್ಲಿಯೇ ರೂಢಿಗೆ ಬಂದಿತ್ತು.

ಕರ್ತಾರಪುರದಲ್ಲಿ ಹದಿಮೂರು ವರುಷಗಳನ್ನು ಕಳೆದರು. ತಮ್ಮ ಅವತಾರದ ಕಡೆಯನ್ನು ಅರಿತ ಗುರು ತಮ್ಮ ಉತ್ತರಾಧಿಕಾರಿಗಳಾಗಿ ಶಿಷ್ಯ ಲೆಹನ–ನನ್ನು (Lehna) (ಗುರು ಅಂಗದ್) ೧೫೩೮ರಲ್ಲಿ ಆರಿಸಿದರು.

ತಂದೆಯ ನಿರ್ಧಾರ ಮಕ್ಕಳಿಗೆ ಸರಿ ಕಾಣಲಿಲ್ಲ. ಹಿರಿಯ ಮಗ ಶ್ರೀಚಂದ್ – ಬೇರೆಯಾಗಿ ಧರ್ಮ ಪ್ರಸಾರದ ಕಾರ್ಯದಲ್ಲಿ ಮಗ್ನನಾದ.

ಸೆಪ್ಟೆಂಬರ್ ಇಪ್ಪತ್ತೆರಡು ಸಾವಿರದ ಐನೂರ ಮೂವತ್ತೊಂಬತ್ತರಂದು ಶ್ರೀ ಗುರು ನಾನಕ್ ಅವರು ಮಹಾ ಸಮಾಧಿಗೆ ಸಂದರು.

ಗುರುವಿನ ಅಂತ್ಯ ಕ್ರಿಯೆಗೆ ಸಂಬಂಧಿಸಿದಂತೆ ಅದ್ಭುತ ರಮ್ಯ ಕತೆಯೊಂದು ಪ್ರಚಾರದಲ್ಲಿದೆ.

ಶ್ರೀ ಗುರುವಿನ ದೇಹದ ಅಂತ್ಯ ಕ್ರಿಯೆ ಹಿಂದು ಪದ್ಧತಿಯಂತೆ ನಡೆಯಬೇಕೆ ? ಮುಸ್ಲಿಂ ಪದ್ಧತಿಯಂತೆ ನಡೆಯಬೇಕೆ ? – ಶಿಷ್ಯರಲ್ಲಿ ವಾದ ಪ್ರಾರಂಭವಾಯಿತು.

ಎರಡೂ ಪಂಗಡದ ಹಿರಿಯರು ಒಂದು ನಿರ್ಧಾರಕ್ಕೆ ಬಂದರು. ಶರೀರದ ಮೇಲೆ ವಸ್ತ್ರವನ್ನು ಹೊದಿಸಿ ಹಿಂದುಗಳು ಮತ್ತು ಮುಸ್ಲಿಂರು ಶರೀರದ ಮೇಲೆ ಹೂಗಳನ್ನು ಇಡತಕ್ಕದ್ದು.

ಯಾರ ಹೂಗಳು ಮೊದಲು ಬಾಡುತ್ತವೋ ಅವರು ಮತ್ತೊಬ್ಬರಿಗೆ ಗುರುವಿನ ದೇಹವನ್ನು ಬಿಟ್ಟು ಕೊಡತಕ್ಕದೆಂದು ತೀರ್ಮಾನವಾಯಿತು.

ಅಂತೆಯೇ ಹೊಸ ವಸ್ತ್ರ ಹೊದೆಸಿ ಎರಡು ಪಂಗಡದವರು ಹೂಗಳನ್ನು ಇರಿಸಿದರು.

ಮಾರನೆ ದಿನ ನೋಡಿದಾಗ ಯಾರ ಹೂಗಳು ಬಾಡಿರಲಿಲ್ಲ. ಎರಡೂ ಪಂಗಡದವರು ಸಂತಸಗೊಂಡರು, ಆಶ್ಚರ್ಯಚಕಿತರಾದರು.

ವಸ್ತ್ರವನ್ನು ತೆಗೆದಾಗ – ಶ್ರೀ ಗುರುವಿನ ಶರೀರ ಕಾಣೆಯಾಗಿತ್ತು. ಶರೀರವಿದ್ದ ಜಾಗದಲ್ಲಿ ಮಗಮಗಿಪ ಹೂವಿನ ರಾಶಿ ಇತ್ತು.

ಶರೀರದ ಮೇಲಿನ ವಸ್ತ್ರವನ್ನೇ ಎರಡು ಭಾಗ ಮಾಡಿ ಹಿಂದುಗಳು ಮತ್ತು ಮುಸ್ಲಿಂರು ತಮ್ಮ ತಮ್ಮ ಪದ್ಧತಿಯಂತೆ ಅಂತ್ಯ ಕ್ರಿಯೆ ನಡೆಸಿದರಂತೆ.

ಹಿಂದು–ಮುಸ್ಲಿಂರನ್ನು ಸಮಾನ ದೃಷ್ಟಿಯಲ್ಲಿ ಕಂಡ ಶ್ರೀ ಗುರುವಿನ ನಿರಂಜನ ಬದುಕು ನಿಗೂಢ ಮುಕ್ತಾಯದಲ್ಲಿ ಸ್ಫೂರ್ತಿ ಚಿಲುಮೆಯಾಗಿ ಉಳಿಯಿತು.

ಗುರು ನಾನಕರ ವಿಚಾರ ಧಾರೆ

ವ್ಯಕ್ತಿಯೊಬ್ಬನ ಅನುಭವ ಆತನ ಆಲೋಚನೆಯನ್ನು ರೂಪಿಸುತ್ತದೆ. ವ್ಯಕ್ತಿಯ ಅನುಭವ, ಆ ವ್ಯಕ್ತಿ ಬದುಕಿದ ಕಾಲಘಟ್ಟದ ಪ್ರಭಾವವನ್ನು ತನ್ನ ಗರ್ಭದಲ್ಲಿ ಧರಿಸಿರುತ್ತದೆ.

ಸುಧಾರಕ ಎಂದೆನಿಸಿಕೊಳ್ಳುವ ವ್ಯಕ್ತಿಯ ಆಲೋಚನೆಗಳು ವ್ಯಕ್ತಿಯೊಬ್ಬನ ಇಷ್ಟಾನಿಷ್ಟಗಳನ್ನು ಅವಲಂಬಿಸಿರುವುದಿಲ್ಲ. ಅವನು ಬದುಕಿದ್ದ ಸಮಾಜದ ಗತಿ–ಸ್ಥಿತಿಗಳು ಸುಧಾರಕನ ಮನೋಭಾವವನ್ನು ರೂಪಿಸುತ್ತವೆ. ಈ ಹಿನ್ನೆಲೆಯಲ್ಲಿ ಗುರುನಾನಕರ ಜೀವನವೆನ್ನುವುದು ಭಾರತದ ಅಂದಿನ ಕ್ಷೋಭೆಗೆ ಒಳಗಾಗಿದ್ದ ಸನ್ನಿವೇಶದಲ್ಲಿ ವಿಕಾಸಗೊಂಡುದು ಎಂಬುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು.

ಪ್ರವಾದಿ ಮಹಮದ್‌ರು ಇಸ್ಲಾಂ ಧರ್ಮವನ್ನು ಅರೇಬಿಯಾದಲ್ಲಿ ಪ್ರಚುರಪಡಿಸಿದ ಸ್ವಲ್ಪ ಸಮಯದಲ್ಲಿಯೇ, ಅರಬ್ ದೇಶದ ವರ್ತಕರ ಮೂಲಕ ಭಾರತದ ಗಡಿಯನ್ನು ಪ್ರವೇಶಿಸಿತು.

ವರ್ತಕರ ಮೂಲಕ ಭಾರತದ ಸಿರಿಯ ವೈಭವವನ್ನು ತಿಳಿದ ಅರಬ್, ಟರ್ಕಿಗಳು, ಮಂಗೋಲರು, ಪರ್ಶಿಯನ್‌ರು, ಆಫ್‌ಘನ್ನರು ಮುಂತಾದ ದೇಶಗಳ ಧಾಳಿಕೋರರು ಭಾರತಕ್ಕೆ ಧಾವಿಸಿ ಬಂದರು. ಈ ಧಾಳಿಕೋರರ ಉದ್ದೇಶ ಎರಡು.

೧. ಭಾರತದ ಸಂಪತ್ತನ್ನು ಲೂಟಿ ಮಾಡಿ, ತಮ್ಮ ದೇಶಕ್ಕೆ ಸಾಗಿಸುವುದು.
೨. ಪ್ರವಾದಿ ಮಹಮದ್‌ರ ಆದೇಶದಂತೆ ವಿಗ್ರಹಗಳನ್ನು ನಾಶಪಡಿಸಿ, ಕಾಫರರನ್ನು ಇಸ್ಲಾಂ ಧರ್ಮೀಯರನ್ನಾಗಿ ಮತಾಂತರಿಸಿ, ಇಸ್ಲಾಂ ಧರ್ಮೀಯರ ಸಂಖ್ಯೆಯನ್ನು ಹೆಚ್ಚಿಸುವುದು. ಭಾರತದ ಮೇಲೆ ಧಾಳಿ ನಡೆಸುವುದೊಂದು ಅಲ್ಲಾನ ಕರುಣೆಯಿಂದ ದೊರೆತ ಭಾಗ್ಯ. ಇಲ್ಲಿಯ ವಿಗ್ರಹ ಆರಾಧಕರನ್ನು ಇಸ್ಲಾಂ ಮತಕ್ಕೆ ಮತಾಂತರಗೊಳಿಸುವುದು

ಅಲ್ಲಾನನ್ನು ಮೆಚ್ಚಿಸುವ ಪವಿತ್ರ ಕಾರ್ಯ.

ಭಾರತದ ಧಾಳಿಗೆ ಪಂಜಾಬ್ ಪ್ರಾಂತ್ಯವೇ ದಿಡ್ಡಿ ಬಾಗಿಲು. ಧಾಳಿಕೋರರ ಪ್ರಚಂಡ ಉಗ್ರತೆಗೆ ಬಲಿಯಾದ ಹಿಂದುಗಳ ಪರಿಸ್ಥಿತಿ ವರ್ಣನಾತೀತ.

ಹಿಂಸಾಚಾರ, ಅನಾಚಾರಗಳ ಮೂಲಕ ಪ್ರಾಣದ ಭಯವೊಡ್ಡಿ ಕತ್ತಿಯ ಮೊನೆಯಲ್ಲಿ, ವಿಗ್ರಹ ಆರಾಧಕರೂ, ಬಹುದೇವತಾ ಉಪಾಸಕರೂ ಆದ ಹಿಂದುಗಳನ್ನು ಇಸ್ಲಾಂ ಧರ್ಮಕ್ಕೆ ಮತಾಂತರಗೊಳಿಸಿದ್ದಲ್ಲದೆ, ಅವರಲ್ಲಿದ್ದ ಚಿನ್ನ, ಬೆಳ್ಳಿಗಳನ್ನು ಲೂಟಿ ಮಾಡಿ ಅವರನ್ನು ರಿಕ್ತಾವಸ್ಥೆಗೆ ತಳ್ಳುವುದರ ಮೂಲಕ ಪಾಶವೀ ಶಕ್ತಿಯ ವಿಜಯವನ್ನು ಸಾಧಿಸಿದರು. ವರ್ತಕರ ಮೂಲಕ ಸ್ನೇಹಾಚಾರದಲ್ಲಿ ಕಾಣಿಸಿಕೊಂಡ ಇಸ್ಲಾಂ – ಧಾಳಿಕೋರರ ಮೂಲಕ ಹಿಂಸಾಚಾರದಲ್ಲಿ ವಿಜೃಂಭಿಸಿತು.

ಮೂರನೆ ಹಂತದಲ್ಲಿ ಇಸ್ಲಾಂ ಧರ್ಮದ ಸಾಧು ಸಂತರು (ಸೂಫಿಗಳು)[೧] ಕುರಾನ್ ಗ್ರಂಥದ ವಿಶಾಲ ತತ್ವಗಳನ್ನು, ಇಸ್ಲಾಂ ಧರ್ಮದ ಸಂಪ್ರದಾಯಗಳನ್ನು ಶಾಂತ ರೀತಿಯಲ್ಲಿ ಪ್ರೀತಿಯ ಮೂಲಕ ಹರಡಲು ಪ್ರಯತ್ನಿಸುತ್ತಾ, ಹಿಂಸೆಗೆ ಹೆದರಿ ದೂರವಾಗಿದ್ದವರನ್ನು ಪ್ರೀತಿಯ ಮಾರ್ಗದಲ್ಲಿ ಆಕರ್ಷಿಸಲು ಪ್ರಯತ್ನಿಸಿದರು.

ಹಿಂದು ಧರ್ಮದಲ್ಲಿ ಅಂತ್ಯಜರೆಂದು ಎಲ್ಲರಿಂದಲೂ ಕಡೆಗಣಿಸಲ್ಪಟ್ಟಿದ್ದ ಸಾವಿರಾರು ಜನರನ್ನು ಇಸ್ಲಾಂ ಧರ್ಮದೆಡೆಗೆ ಸೆಳೆದು, ಅವರನ್ನು ಮುಸ್ಲಿಂರನ್ನಾಗಿ ಮತಾಂತರಿಸಿ, ಮೂಲ ಅರಬ್ ಮುಸ್ಲಿಂಗೆ ಸಮಸಮವಾಗಿ ಮತಾಂತರಗೊಂಡ ವ್ಯಕ್ತಿಗೆ ಗೌರವ, ಆದರಗಳು ದೊರೆಯುವಂತೆ ವಾತಾವರಣವನ್ನು ನಿರ್ಮಿಸುವುದರ ಮೂಲಕ ಸೂಫಿ ಸಂತರು ಭಾರತದಲ್ಲಿ ಇಸ್ಲಾಂ ಧರ್ಮವನ್ನು ಶಕ್ತಿಶಾಲಿಯಾದ ಧರ್ಮವನ್ನಾಗಿಸಲು ಸಮರ್ಥರಾದರು. ಒಂದು ಕಡೆ ಮತಾಂತರಗೊಂಡ ಹಿಂದುಗಳು. ಹೊಸ ಮತಾಂತರಿಯ ಉಕ್ಕುವ ಉತ್ಸಾಹದಿಂದ ಇಸ್ಲಾಂ ಧರ್ಮವನ್ನು ಹಾಡಿ ಹೊಗಳುತ್ತಾ, ಎತ್ತಿ ಹಿಡಿಯುತ್ತಾ, ಹೊಸ – ಹೊಸ ಮತಾಂತರಕ್ಕೆ ದಾರಿ ಮಾಡಿಕೊಡುತ್ತಾ ಇಸ್ಲಾಂ ಪ್ರವಾಹಕ್ಕೆ ಪಾತ್ರಗಳಾಗಿದ್ದರು.

ಮತ್ತೊಂದು ಕಡೆ, ಪ್ರತಿದಿನವೂ, ಆಡಳಿತ ಸೂತ್ರವನ್ನು ಹಿಡಿದ ಮುಸ್ಲಿಂ ಧರ್ಮದವರ ಸರ್ವ ವಿಧದ ಕಿರುಕುಳವನ್ನು ಸಹಿಸುತ್ತಾ, ಆದರೆ ತಮ್ಮ ಮೂಲ ಧರ್ಮದಲ್ಲಿನ ನಂಬಿಕೆಯನ್ನು ಕಳೆದುಕೊಳ್ಳದೆ, ಪ್ರಾಣ ಮತ್ತು

೧. Suff-meaning wool. they wore garments of coarsewool as a badge of poverty.

ಮಾನ ಭಯದಿಂದ ಬದುಕನ್ನು ಸಾಗಿಸುತ್ತಿದ್ದ ಹಿಂದುಗಳು. ಇಂತಹ ಸಮಾಜದಲ್ಲಿ ಪರಸ್ಪರ ಅಪನಂಬಿಕೆ, ದ್ವೇಷ, ತಿರಸ್ಕಾರ, ಭಯ–ಅನಿಶ್ಚಯತೆಗಳೇ ಪ್ರಧಾನವಾದ ಲಕ್ಷಣಗಳು.

ನಾನಕ್ ಹುಟ್ಟಿದಾಗ ಇದ್ದ ಸಮಾಜದ ಸ್ಥಿತಿ ಇದು. ಅವರು ಬೆಳೆದ ಸಮಾಜದಲ್ಲಿ ಇದ್ದದ್ದು ಹಿಂದು – ಮುಸ್ಲಿಂರ ಘರ್ಷಣೆ. ಸುಧಾರಕ ನಾನಕ್ ಮುಂದೆ ಇದ್ದ ಸಮಸ್ಯೆಗಳು ಪ್ರಮುಖವಾಗಿ ಮೂರು.

೧. ಸಾವಿರಾರು ದೈವಗಳ ಪೂಜೆಯ ನಿಮಿತ್ತ, ಜಾತಿಯ ಕಾರಣ – ಛಿದ್ರ ಛಿದ್ರವಾಗಿರುವ ಹಿಂದು ಸಮಾಜವನ್ನು ಒಟ್ಟುಗೂಡಿಸುವುದು.

೨. ಮುಸ್ಲಿಂ ಧರ್ಮ ಗುರುಗಳ ಧಿಕ್ಕಾರಕ್ಕೆ, ಹಾಸ್ಯಕ್ಕೆ ನಿಂದನೆಗೆ ಗುರಿಯಾಗಿರುವ ಹಿಂದು ಮತವನ್ನು ರಕ್ಷಿಸುವುದು.

೩. ಹಿಂದು – ಮುಸ್ಲಿಂರ ನಡುವೆ ಸ್ನೇಹ – ಸೌಹಾರ್ದಗಳನ್ನು ಸಾಧಿಸಿ ಸಮಾಜದ ವಿಕಾಸಕ್ಕೆ ಕಾರಣವಾಗುವುದು.

ಈ ಮೂರೂ ಸಮಸ್ಯೆಗಳನ್ನು ತಮ್ಮ ಏಕಸೂತ್ರದಿಂದ ಪರಿಹರಿಸಲು ಯತ್ನಿಸಿದರು.

ನೂರಾರು ದೇವತಾ ವಿಗ್ರಹಗಳ ಹೆಸರಿನಲ್ಲಿ ನಡೆಸುತ್ತಿದ್ದ ಉತ್ಸವ, ಜಾತ್ರೆಗಳನ್ನು, ಅವುಗಳಿಂದ ಉಂಟಾಗುತ್ತಿದ್ದ ಘರ್ಷಣೆಗಳನ್ನು ಬಲವಾಗಿ ಖಂಡಿಸಿ – ಜಗತ್ ಸೃಷ್ಟಿಕರ್ತನೂ, ರಕ್ಷಕ ಶಕ್ತಿಯೂ, ಸರ್ವಶಕ್ತನೂ ಆದ ಪರಮಾತ್ಮನೊಬ್ಬನೇ ಎಂಬುದನ್ನು ಶಕ್ತಿವತ್ತಾಗಿ ಪ್ರತಿಪಾದಿಸಿ, ಮುಸ್ಲಿಮರಿಗೆ ಹತ್ತಿರವಾದರು.

ನಾನಕರ ಸರ್ವಶಕ್ತಿ ಪರಮಾತ್ಮನ ಕಲ್ಪನೆ ಹೊಸದಾದುದಲ್ಲ. ವೇದಾಂತದ ಭಾಗವಾದ ಉಪನಿಷತ್ತುಗಳು ಬಹು ಹಿಂದೆಯೇ ವಿಗ್ರಹ ಆರಾಧನೆಯನ್ನು ಬಹು ದೇವತಾ ಉಪಾಸನೆಯನ್ನೂ, ಯಜ್ಞ–ಯಾಗಾದಿ ಕರ್ಮಗಳನ್ನು ನಿರಾಕರಿಸಿದ್ದವು. ಅದೂ ಅಲ್ಲದೆ ಎಂಟನೆ ಶತಮಾನದಲ್ಲಿ ಬೌದ್ಧ ಧರ್ಮವನ್ನು ಪ್ರಬಲವಾಗಿ ವಿರೋಧಿಸಿ ಹಿಂದು ಧರ್ಮದ ಪುನರುತ್ಥಾನಕ್ಕೆ ಕಾರಣರಾದ ಶಂಕರಾಚಾರ್ಯರು, ವಿಗ್ರಹ ಆರಾಧನೆಯನ್ನಾಗಲಿ, ಜಾತಿ ಪದ್ಧತಿಯನ್ನಾಗಲಿ ಪುರಸ್ಕರಿಸಿರಲಿಲ್ಲ.

ಅವರೂ ಸಹ ಸರ್ವಶಕ್ತ–ಸರ್ವವ್ಯಾಪ್ತ ಒಂದೇ ಶಕ್ತಿಯನ್ನು ಪ್ರತಿಪಾದಿಸಿದರು.

ಬ್ರಹ್ಮಸತ್ಯ ಜಗನ್ಮಿಥ್ಯ : ಜೀವೋ ಬ್ರಹ್ಮೈವನಾ ಪರ ಅಂದರೆ ಬ್ರಹ್ಮನೇ ಸತ್ಯ. ಜಗತ್ತು ಮಿಥ್ಯ. ಆತ್ಮನೇ ಅತ್ಯಂತ ಶ್ರೇಷ್ಠ. ಆತ್ಮ ಶ್ರೇಷ್ಠತೆಯ ಮುಂದೆ

ಯಾವುದೂ ಶ್ರೇಷ್ಠವಾದುದಲ್ಲ ಎಂದು ಪ್ರತಿಪಾದಿಸಿದ್ದರು.

ಗುರುನಾನಕರ ವಿಚಾರ ಆಚಾರ್ಯ ಶಂಕರರ ವಿಚಾರಕ್ಕೆ ಹತ್ತಿರವಾಗಿದ್ದುದರಿಂದ ಸನಾತನ ಹಿಂದುಗಳಿಗೂ ನಾನಕ್ ಪ್ರಿಯವಾದರು. ನಾನಕ್‌ರ ಈ ವಿಚಾರಧಾರೆ, ಹಿಂದು-ಮುಸ್ಲಿಂ ಇಬ್ಬರ ಗೌರವವನ್ನು ಸಮಾನವಾಗಿ ತಮ್ಮತ್ತ ಸೆಳೆದುಕೊಳ್ಳಲು ಮೂಲ ಕಾರಣವಾಯಿತು. ಉತ್ತರ ಭಾರತದಲ್ಲಿ ಸೂಫಿ ಸಂತರ ಪ್ರಭಾವ ಪ್ರಬಲವಾದಂತೆ ಅದಕ್ಕೆ ಸಮಾನಾಂತರವಾಗಿ ಹಿಂದುಗಳಲ್ಲಿ ಭಕ್ತಿ ಪಂಥ ಪ್ರಬಲವಾಗಿ, ತನ್ನ ಪ್ರಭಾವವನ್ನು ಜನ ಸಾಮಾನ್ಯರಲ್ಲಿ ಬಹು ಪ್ರಭಾವಿಯಾಗಿ ಹರಡಲು ಪ್ರಾರಂಭಿಸಿತು. ಹನ್ನೊಂದನೆ ಶತಮಾನದಲ್ಲಿ ದಕ್ಷಿಣ ಭಾರತದಲ್ಲಿ ಶಕ್ತಿಯಾಗಿ ವಿಕಾಸಗೊಂಡ ಶ್ರೀರಾಮಾನುಜರು, ಉತ್ತರ ಭಾರತದಲ್ಲಿ ಪ್ರವಾಸ ಕೈಗೊಂಡು ಅಚ್ಚಳಿಯದ ಪ್ರಭಾವವನ್ನು ಬೀರಿದರು. ರಾಮಾನುಜರ ಪ್ರಭಾವಕ್ಕೆ ಒಳಗಾದ ರಮಾನಂದ ಉತ್ತರ ಭಾರತದ ಭಕ್ತಿ ಪಂಥದ ಕೇಂದ್ರವಾದರು.

ರಮಾನಂದರು ಹೀನ ಜಾತಿಯಹಿಂದುಗಳನ್ನು, ಮುಸಲ್ಮಾನರನ್ನು ತನ್ನ ಶಿಷ್ಯರನ್ನಾಗಿ ಸ್ವೀಕರಿಸಿ, ಅಂದಿನ ಕಾಲಕ್ಕೆ ಅತ್ಯಂತ ದೊಡ್ಡ ಕ್ರಾಂತಿಗೆ ಕಾರಣರಾದರು.

ಶ್ರೀ ರಮಾನಂದರ ಶಿಷ್ಯರಾಗಿ ಕಬೀರ್, ರವಿದಾಸ್ ಮುಂತಾದವರು ತಮ್ಮ ಪ್ರಾಮಾಣಿಕ ಸಾಧನೆಯಿಂದ ಜನತೆಯ ಹೃದಯದಲ್ಲಿ ಉನ್ನತ ಸ್ಥಾನವನ್ನು ಪಡೆದಿದ್ದರು.

ಶ್ರೀ ಗುರು ನಾನಕ್‌ರು ಸಾಮಾಜಿಕ ರಂಗದಲ್ಲಿ ಕಾಣಿಸಿಕೊಳ್ಳುವ ಮೊದಲೇ ರಮಾನಂದ, ಕಬೀರ-ರವಿದಾಸರು ಸಾಮಾಜಿಕ ಪ್ರಜ್ಞೆಯಲ್ಲಿ ಮಾರ್ಪಾಟು ತರಲು ಯತ್ನಿಸಿದ್ದರು.

ಗುರುನಾನಕರು ಪಂಜಾಬ್ ಪ್ರಾಂತ್ಯವನ್ನು ತಮ್ಮ ಕಾರ್ಯ ಕ್ಷೇತ್ರವನ್ನಾಗಿ ಆರಿಸಿಕೊಂಡ ಸಂದರ್ಭದಲ್ಲಿಯೇ, ಬಂಗಾಳದಲ್ಲಿ ಶ್ರೀ ಚೈತನ್ಯ ಮಹಾಪ್ರಭು, ಮಹಾರಾಷ್ಟ್ರದಲ್ಲಿ ಸಂತ ಜ್ಞಾನೇಶ್ವರ, ನಾಮದೇವ, ತುಕಾರಾಮರು. ರಾಜಾಸ್ಥಾನದಲ್ಲಿ ಭಕ್ತೆ ಮೀರಾಬಾಯಿ, ಸಿಂದ್‌ನಲ್ಲಿ ಸಾಧನಾ. ಕರ್ನಾಟಕದಲ್ಲಿ ಪುರಂದರ, ಕನಕರು – ಭಕ್ತಿ ಪಂಥದ ಬೆಳವಣಿಗೆಯಲ್ಲಿ ಅತ್ಯಂತ ನಿಷ್ಠೆಯಿಂದ ತಮ್ಮನ್ನು ತೊಡಗಿಸಿಕೊಂಡಿದ್ದ ಮಹಾನುಭಾವರು.

ಭಕ್ತಿಪಂಥ ಸಾಂಪ್ರದಾಯಿಕ ಬ್ರಾಹ್ಮಣ ಮತಕ್ಕೆ ವಿರೋಧಿಯಲ್ಲದಿದ್ದರೂ, ಸಂಪೂರ್ಣ ಬೇರೆಯಾದುದು.

ಭಗವದ್ಗೀತೆಯಲ್ಲಿ ಭಗವಂತನನ್ನು ಒಲಿಸಿಕೊಳ್ಳಲು ಮೂರು ಮಾರ್ಗಗಳನ್ನು ಪ್ರಸ್ತಾಪಿಸಲಾಗಿದೆ.

ಜ್ಞಾನ ಮಾರ್ಗ – ಜ್ಞಾನ ಯೋಗ

ಕರ್ಮ ಮಾರ್ಗ – ಕರ್ಮ ಯೋಗ

ಭಕ್ತಿ ಮಾರ್ಗ – ಭಕ್ತಿ ಯೋಗ

ಭಕ್ತಿಮಾರ್ಗ ವೇದೋಪನಿಷತ್ತುಗಳನ್ನು ಅಧ್ಯಯನ ಮಾಡುವುದಕ್ಕಾಗಲಿ, ಯಜ್ಞ–ಯಾಗಾದಿ ಕರ್ಮಗಳಲ್ಲಿ ತೊಡಗುವುದಕ್ಕಾಗಲಿ, ಆಸಕ್ತಿ ತೋರುವುದಿಲ್ಲ. ಏಕನಿಷ್ಠೆಯಿಂದ ಭಗವಂತನ ನಾಮವನ್ನು ಜಪಿಸುವುದರ ಮೂಲಕ ಭಗವಂತನ ನಾಮ ಸಂಕೀರ್ತನೆಯಲ್ಲಿ ತೊಡಗುವುದರ ಮೂಲಕ ಭಗವದ್ ಸಾಕ್ಷಾತ್ಕಾರಕ್ಕೆ ಯತ್ನಿಸುವ ಮಾರ್ಗ ಭಕ್ತಿ ಮಾರ್ಗ.

ಭಕ್ತಿ ಪಂಥದಲ್ಲಿ ಜಾತಿಗೆ ಬೆಲೆಯಿಲ್ಲ. ನೀತಿಗೆ ಬೆಲೆ. ವ್ಯಕ್ತಿ ತನ್ನ ಕಾಮ, ಕ್ರೋಧ – ಮೋಹ–ಮದ ಮುಂತಾದ ಅರಿಷಡ್ವರ್ಗಗಳನ್ನು ಗೆಲ್ಲುವುದೇ ಮೊದಲ ಹಂತದ ಸಾಧನೆ. ವ್ಯಕ್ತಿ ತನ್ನನ್ನು ತಾನು ಭಗವದ್ ಸಾಕ್ಷಾತ್ಕಾರಕ್ಕೆ ಅಣಿಗೊಳಿಸುವ ತಪವೇ ಇದು. ತನ್ನನ್ನು ತಾನು ಭಗವದ್ ಶಕ್ತಿಗೆ ಸಂಪೂರ್ಣವಾಗಿ ಒಪ್ಪಿಸಿಕೊಳ್ಳುವುದೇ–ನಿಷ್ಠೆ – ತನ್ನ ಎಚ್ಚರಿಕೆಯ ಕಾಲವನ್ನೆಲ್ಲಾ ಭಗವತ್ ನಾಮ ಸಂಕೀರ್ತನೆ ಅಥವಾ ಜಪದಲ್ಲಿ ತೊಡಗಿಸಿಕೊಳ್ಳುವುದೇ ಆರಾಧನೆ. ಈ ಮಾರ್ಗವೇ ಭಕ್ತಿಯೋಗ. ಈ ಮಾರ್ಗದಲ್ಲಿ ಹೆಣ್ಣು–ಗಂಡು–ಶೂದ್ರ–ಬ್ರಾಹ್ಮಣ–ಶ್ರೀಮಂತ–ಬಡವ ಎಂಬ ಯಾವ ಭೇದವೂ ಇಲ್ಲದೆ – ಸಕಲರಿಗೂ ಭಗವದ್ ಕೃಪೆಯಲ್ಲಿ ಭಾಗವಹಿಸುವ ಅವಕಾಶ ದೊರೆಯಿತು. ಈ ಕಾರಣದಿಂದಲೇ ಸಾಮಾನ್ಯರೂ ಈ ಪಂಥದೆಡೆಗೆ ಆಕರ್ಷಿತರಾದರು. ಸಮಾಜದ ಕೆಳಸ್ತರದವರಿಗೂ ಒಂದು ಆತ್ಮಗೌರವ. ಮೇಲು ಜಾತಿಯವರೊಡನೆ ಸಮಾನತೆ ದೊರೆತ ಸಂದರ್ಭ ಇದು. ಮೊಟ್ಟ ಮೊದಲ ಬಾರಿಗೆ ಸ್ತ್ರೀಯರಿಗೆ, ಸಮಾಜದ ಕೆಳಸ್ತರದವರಿಗೆ ಒಂದು ಮಾನವೀಯ ಅವಕಾಶ ದೊರೆಯಿತು.

ಸೂಫಿ ಪಂಥದವರು ಸಮಾಜದ ಕೆಳಸ್ತರದವರನ್ನು ಆಕರ್ಷಿಸಿ ಮತಾಂತರಗೊಳಿಸಲು ಪ್ರಯತ್ನಿಸುತ್ತಿದ್ದ ಸನ್ನಿವೇಶದಲ್ಲಿಯೇ ಭಕ್ತಿ ಪಂಥ ಜನಸಾಮಾನ್ಯರಲ್ಲಿ ತಮ್ಮ ಧರ್ಮ, ದೈವಗಳ ಬಗ್ಗೆ ಜಾಗೃತಿ ಮೂಡಿಸುವುದರ ಮೂಲಕ ಮತಾಂತರದ ಕ್ರಿಯೆಯನ್ನು ಸದ್ದು–ಗದ್ದಲವಿಲ್ಲದೆ ಅಹಿಂಸಾತ್ಮಕವಾಗಿಯೇ ಶಕ್ತಿಪೂರ್ಣವಾಗಿ ಎದುರಿಸಿತು.

ಮೇಲು ವರ್ಗದ ಪುರೋಹಿತಶಾಹಿ ತಮ್ಮ ಧಾರ್ಮಿಕ ಪ್ರಕ್ರಿಯೆಗಳನ್ನೆಲ್ಲಾ ಸಂಸ್ಕೃತ ಭಾಷೆಯಲ್ಲಿಯೇ ನಡೆಸುತ್ತಿದ್ದ ಕಾರಣ, ಜನ ಸಾಮಾನ್ಯನಿಗೆ ಆ

ಭಾಷೆ ಅರ್ಥವಾಗದೆ ಧರ್ಮವೆನ್ನುವುದು ಅರ್ಥವಾಗದ, ನಿಗೂಢತೆಯನ್ನು ಹೊಂದಿತ್ತು.

ಭಕ್ತಿ ಪಂಥದವರು ಮೊದಲ ಬಾರಿಗೆ ಆಯಾ ಪ್ರಾಂತೀಯ ಭಾಷೆಗಳಲ್ಲಿಯೇ ಸಂಕೀರ್ತನೆಗಳನ್ನು ನಡೆಸುವ, ಕೀರ್ತನೆಗಳನ್ನು ರಚಿಸುವುದರ ಮೂಲಕ, ಅತ್ಯಂತ ಸಾಮಾನ್ಯರೂ ತಮ್ಮ ಆಡು ಭಾಷೆಯಲ್ಲಿ ಭಗವದ್ ಆರಾಧನೆಯಲ್ಲಿ ತೊಡಗಲು ಸಾಧ್ಯವಾಯಿತು.

ಗುರುನಾನಕ್ ಜನ್ಮ ತಾಳಿದ ಭೂ ಪ್ರದೇಶದಲ್ಲಿ ಜನತೆ ಸ್ಪಷ್ಟವಾಗಿ ಹಿಂದು ಮತ್ತು ಮುಸ್ಲಿಂ ಎಂದು ವಿಭಜನೆಗೊಂಡಿತ್ತು.

ಹಿಂದುಗಳಲ್ಲಿ ದೈವಭಕ್ತಿ, ಧರ್ಮಶ್ರದ್ಧೆ ಬಹಳ ಶಿಥಿಲಾವಸ್ಥೆಯಲ್ಲಿತ್ತು.

ಗುರುನಾನಕರೇ ತಮ್ಮೊಂದು ರಚನೆಯಲ್ಲಿ ಅಂದಿನ ಸ್ಥಿತಿಯನ್ನು ನಿರೂಪಿಸಿದ್ದಾರೆ.

“ಈ ಕಾಲವೆನ್ನುವುದು ಹರಿತವಾದ ಚೂರಿಯಾಗಿದೆ. ದೊರೆಗಳೆಂಬುವರು ಕಟುಕರಾಗಿದ್ದಾರೆ. ಸಂಪತ್ತು ಮತ್ತು ಸೌಂದರ್ಯ ಅವರ ವಶದಲ್ಲಿದೆ. ದೈಹಿಕ ಸುಖವೇ ಜೀವನ ವಿಧಾನವಾಗಿದೆ. ಸಭ್ಯತೆ ಮತ್ತು ನ್ಯಾಯಗಳು ಮರೆಯಾಗಿ ಹೋಗಿವೆ. ಸುಳ್ಳು ಎಲ್ಲೆಲ್ಲೂ ವಿಜೃಂಭಿಸುತ್ತಿದೆ. ಪಿಶಾಚಿಗಳು ಮದುವೆಯ ಪ್ರತಿಜ್ಞೆಯನ್ನು ಬೋಧಿಸುತ್ತಿವೆ. ಕೊಲೆಯ ಗುಣಗಾನ ಮಾಡುತ್ತಿವೆ. ಕಾವಿ ಇರಬೇಕಾದ ಜಾಗದಲ್ಲಿ ರಕ್ತ ಹರಿಯುತ್ತಿದೆ. ಮೊಗಲರ ರೂಪದಲ್ಲಿ ಮೃತ್ಯು ದೇಶವನ್ನು ಆಕ್ರಮಿಸಿಕೊಳ್ಳುತ್ತಿದೆ. ಎಲ್ಲೆಲ್ಲೂ ಕೊಲೆ, ಸುಲಿಗೆಗಳ ನೋವಿಗೆ ಸಿಕ್ಕಿ ಆಕ್ರಂದನ ಧ್ವನಿ ಕೇಳುತ್ತಿದೆ. ಓ ದೇವರೇ, ಈ ಜನತೆಯ ನೋವು ನಿನ್ನ ಅನುಭವಕ್ಕೆ ಬರುತ್ತಿಲ್ಲವೆ ?” ಎಂಬುದಾಗಿ ಅಂದಿನ ಧಾರುಣ ಸ್ಥಿತಿಯನ್ನು ದಾಖಲಿಸಿದ್ದಾರೆ. ಹೀಗೆ ಗುರು ನಾನಕರ ಕಾಲ ಸಂಕ್ಷೋಭೆಯ ಕಾಲವಾಗಿತ್ತು. ಜನತೆ ಶಾಂತಿ–ಸ್ನೇಹಗಳಿಲ್ಲದೆ ಪರಿತಪಿಸುತ್ತಿತ್ತು.

ಹಿಂದುಗಳು ತಮ್ಮ ಕಂದಾಚಾರ, ಮೂಢನಂಬಿಕೆ, ಪುರೋಹಿತಶಾಹಿಗಳ ಶೋಷಣೆಗೆ ಒಳಗಾಗಿ, ಮುಸ್ಲಿಂರ ಧಾಳಿ, ವಿಡಂಬನೆಗಳನ್ನು ಎದುರಿಸಲಾಗದೆ ತತ್ತರಿಸಿಹೋಗುತ್ತಿದ್ದರು.

ಇಂತಹ ಸಂದರ್ಭದಲ್ಲಿ ಶ್ರೀ ಗುರು ನಾನಕರು ಬೋಧಿಸಿದ ಬೋಧನೆ, ಅನುಸರಿಸಿದ ಮಾರ್ಗಗಳು ಅತ್ಯಂತ ಶ್ಲಾಘನೀಯವಾದುವು.

ಅವರ ವಿಚಾರಗಳು ಭ್ರಾಂತಿಯಿಂದ ತೊಳಲಾಡುತ್ತಿದ್ದ ಜನತೆಗೆ ಮಾರ್ಗದರ್ಶಕ ಸೂತ್ರಗಳಾಗಿ ಪರಿಣಮಿಸಿದವು.

ಅಂದು ಗುರು ನಾನಕರು ಎದುರಿಸಿದ ಸಮಸ್ಯೆಗಳ ಬಗ್ಗೆ ದಾಖಲೆಗಳು ದೊರೆಯುವುದಿಲ್ಲ. ಆದರೆ ಗ್ರಂಥ ಸಾಹೇಬ್‌ನಲ್ಲಿ ಸಂಕಲಗೊಂಡಿರುವ ಒಂಬೈನೂರ ಎಪ್ಪತ್ತನಾಲ್ಕು ರಚನೆಗಳ ಮೂಲಕ ನಾನಕ್‌ರ ವಿಚಾರ ಧಾರೆಯನ್ನು ಇಂದು ನಾವು ಅರಿಯಬಹುದಾಗಿದೆ. ನಾನಕರ ಪ್ರಸಿದ್ಧವೂ ಮುಖ್ಯವೂ ಆದ ಗ್ರಂಥ ಜಪ್‌ಜೀಯನ್ನೂ ಸೇರಿಸಿ ಪರಿಶೀಲಿಸಿದಾಗ ನಾನಕರ ವಿಚಾರಧಾರೆಯನ್ನು ಏಳು ಗುಂಪುಗಳಾಗಿ ವಿಂಗಡಿಸಬಹುದಾಗಿದೆ.

೧. ದೇವರು ಮತ್ತು ಗುರು
೨. ಶೀಲ ಮತ್ತು ಸತ್ಕಾರ್ಯ
೩. ಜಾತಿಯನ್ನು ಮೀರಿದ್ದು ಧರ್ಮ
೪. ಸ್ತ್ರೀಗೆ ಸಲ್ಲಬೇಕಾದ ಗೌರವ
೫. ಧಾರ್ಮಿಕ ಡಾಂಭಿಕತೆಯ ಬಗ್ಗೆ
೬. ಸಾಂಸಾರಿಕ ವಸ್ತುಗಳ ಅಸ್ಥಿರತೆ
೭. ನಾನಕರ ದೇಶಭಕ್ತಿ.

ದೇವರು ಮತ್ತು ಗುರು

ಗುರುನಾನಕ್ ಜನತೆಗೆ ತಿಳಿಯಹೇಳಿದ ಪರಮಾತ್ಮನ ಸ್ವರೂಪದ ಬಗ್ಗೆ ವಿವರಣೆ ಅಗತ್ಯ.

ಪರಮಾತ್ಮನನ್ನು ನಿರ್ಗುಣ ಅಥವಾ ಉಪಾಧಿ ರಹಿತನೆಂದೂ, ಸಗುಣ ಅಥವಾ ಉಪಾಧಿ ಸಹಿತನೆಂದೂ ಎರಡು ಬಗೆಯಾಗಿ ವರ್ಣಿಸಲಾಗಿದೆ.

ಮೊಟ್ಟ ಮೊದಲು ಯಾವುದೇ ಸೃಷ್ಟಿಯೂ ಇರಲಿಲ್ಲ. ಪರಮಾತ್ಮ ಉಪಾಧಿರಹಿತನಾಗಿ ತನ್ನೊಳಗೇ ವಾಸಿಸಿದ್ದ. ತನ್ನನ್ನು ಸೃಷ್ಟಿಯಲ್ಲಿ ತೋರಿಸಿಕೊಳ್ಳಬೇಕೆಂದು ಬಗೆದಾಗ, ಸಂಬಂಧಗಳ ಸಾಮ್ರಾಜ್ಯದೊಳಗೆ ಹೆಜ್ಜೆ ಇಟ್ಟ. ಪರಮಾತ್ಮ ತನಗೆ ತಾನೇ ಸೃಷ್ಟಿಯಾದವನಾದ್ದರಿಂದ ಅವನೊಡನೆ ಬೇರಾರು ಇದ್ದಿರಲಿಲ್ಲ. ಅವನು ತನಗೆ ತಾನೇ ಸಮಾಲೋಚಿಸಿಕೊಂಡು, ಏನನ್ನು ಸೃಷ್ಟಿಸಲು ಬಯಸಿದನೋ ಆಗ ಸೃಷ್ಟಿ ಮೊದಲಾಯಿತು ಎಂಬುದನ್ನು

"ಭಗವಂತ ತನ್ನಿಂದ ತಾನೇ ಮೂಡಿದಾಗ
ಪಾಪವಾಗಲಿ ಪುಣ್ಯವಾಗಲಿ
ವೇದ ಅಥವಾ ಯಾವುದೇ ಧರ್ಮಗ್ರಂಥವಾಗಲಿ
ಜಾತಿಯಾಗಲಿ ಲಿಂಗ ಭೇದವಾಗಲಿ
ಇದ್ದಿರಲಿಲ್ಲ" (ಮಾರೋಸೋಹ್ಲೆ)

"ಜಗತ್ತಿನ ಎಲ್ಲದರ ತಂದೆಯಾದ
ಪರಮಾತ್ಮನಿಗೆ ಜನನ–ಅವತಾರಗಳಿಲ್ಲ.
ಮಾಯೆ–ಶಬ್ದ–ಬ್ರಹ್ಮ ಇತ್ಯಾದಿ
ಸೃಷ್ಟಿಶೀಲ ಮಾಧ್ಯಮಗಳಿಗೆ
ಅವನೇ ಸಂಕೇತ.
ಅವನೇ ಸತ್ಯ, ಅವನೇ ಸೌಂದರ್ಯ.
ಸದಾ ಒಳಿತಿನ ಹಾರೈಕೆಯೇ ಅವನು" (ಜಪ್.ಜೀ)
ತಮ್ಮ ಎರಡು ವಚನಗಳಲ್ಲಿ ವಿವರಿಸಿದ್ದಾರೆ.

ಪರಮಾತ್ಮ ಸಗುಣನಾದಾಗ ಅಥವಾ ಪ್ರಕಾಶಕ್ಕೆ ಬಂದಾಗ, ಅವಿಧಾನವೆಂದು ಕರೆಯಲ್ಪಟ್ಟವನಾಗಿ, ಪರಿಣಮಿಸಿದ ತನ್ನನ್ನು ಯಾರೂ ಸ್ಪಷ್ಟವಾಗಿ ಗ್ರಹಿಸಲು ಸಾಧ್ಯವಾಗದೆಂದು, ಅವನು ಪ್ರಕೃತಿಯನ್ನು ಸೃಷ್ಟಿಸಿ, ಅದರಲ್ಲಿ ಸ್ಥಾನ ಪಡೆದ. ಪರಮಾತ್ಮ ಎಲ್ಲೆಲ್ಲಿಯೂ, ಎಲ್ಲಾ ದೆಸೆಗಳಲ್ಲೂ ವ್ಯಾಪಿಸಿರುತ್ತಾನೆ. ಅವನಿಲ್ಲದ ಜಾಗವೇ ಇಲ್ಲ.

ನಾನಕ್ ತನ್ನ ಆಸಾ–ದೀ–ವಾರ್‌ನ ಪ್ರಾರಂಭಿಕ ಪದ್ಯಗಳಲ್ಲಿ ಸಿಖ್ಖರಿಗೆ ಇರುವ ನಂಬಿಕೆಯ ಮೂಲಭೂತ ಸಿದ್ಧಾಂತಗಳನ್ನು ಮುಂದಿಟ್ಟಿದ್ದಾರೆ.

"ಪರಮಾತ್ಮ ಹಿಂದು ಅಥವಾ ಮುಸ್ಲಿಂ ಹೀಗೆ ಯಾವುದೇ ಒಂದು ಜನಾಂಗಕ್ಕೆ ಸೇರಿದವನಲ್ಲ. ಜ್ಞಾನದಿಂದಲಾಗಲಿ, ಕಠೋರ ನಿಯಮಗಳನ್ನು ಅನುಸರಿಸುವುದರಿಂದಾಗಲಿ, ಪುರಸ್ಕಾರ ಅರ್ಹವಾದ ಶ್ರೇಷ್ಠ ಕಾರ್ಯಗಳಿಂದಲಾಗಲಿ, ಪರಮಾತ್ಮನ ಸಾಕ್ಷಾತ್ಕಾರ ಸಾಧ್ಯವಿಲ್ಲ. ಪ್ರೀತಿಯಿಂದ, ಶ್ರದ್ಧೆಯಿಂದ ಅವನ ಅನುಗ್ರಹಕ್ಕಾಗಿಯೇ ನಡೆಸುವ ಕಾರ್ಯದಿಂದ ಮಾತ್ರ ಅವನ ಸಾಕ್ಷಾತ್ಕಾರ ಸಾಧ್ಯ. ಪರಮಾತ್ಮನ ಸಂಕೀರ್ತನೆ, ನಾಮಸ್ಮರಣೆಯೇ ಅವನ ಆರಾಧನೆಯ ಏಕೈಕ ಮಾರ್ಗ.

ಸಾಕ್ಷಾತ್ಕಾರಕ್ಕೆ ಹಲವು ಮಾರ್ಗಗಳಿಲ್ಲ. ಅದಕ್ಕಿರುವುದು ಒಂದೇ ಮಾರ್ಗ. ಅದೇ ಭಕ್ತಿಮಾರ್ಗ.

ಮೊದಲೇ ಇದ್ದಂತಹ ಪದಾರ್ಥಗಳಿಗೆಲ್ಲಾ ಹೊಸ ಹೊಸ ರೂಪ ನೀಡಿ, ವಿಶ್ವದಲ್ಲಿ ಅವುಗಳನ್ನು ಇರಿಸುವ ಒಬ್ಬ ಸಮರ್ಥ ಯಂತ್ರಶಿಲ್ಪಿ ಮಾತ್ರವಲ್ಲ ಪರಮಾತ್ಮ.

ಅವನು ಪದಾರ್ಥವನ್ನು (ಭೌತ ದ್ರವ್ಯ) ತನ್ನಿಂದ ಹೊರಗಿರಿಸಿದ ಮಾತ್ರನಲ್ಲ, ಅದನ್ನೂ ಒಳಗೊಂಡಿದ್ದಾನೆ. ಆದರೂ ಅದಕ್ಕೆ ಅತೀತನಾಗಿದ್ದಾನೆ.

ವಿಶ್ವವು ಒಂದು ಭ್ರಮೆಯಲ್ಲ. ಅತ್ಯಂತ ವಾಸ್ತವವಾದ ಪರಮಾತ್ಮನಲ್ಲಿ

ತನ್ನ ಮೂಲವನ್ನು ಹೊಂದಿದ ವಿಶ್ವ ಯತಾರ್ಥವೇ ಆಗಿರುತ್ತದೆ. ಆದರೆ ವಿಶ್ವಶಾಶ್ವತವಾದ ವಾಸ್ತವತೆಯಾಗಿ ಸದಾ ಕಾಲ ಉಳಿಯುವುದಿಲ್ಲ.

ಈ ಅಭಿಪ್ರಾಯ ಶ್ರೀ ಮಧ್ವಾಚಾರ್ಯರ ವಿಚಾರದಿಂದ ಪ್ರೇರಿತವಾಗಿದೆಯೋ ಎನ್ನುವಷ್ಟು ಮಧ್ವ ಸಿದ್ಧಾಂತಕ್ಕೆ ಹತ್ತಿರವಾಗಿದೆ. ಶಂಕರಾಚಾರ್ಯರ ಬ್ರಹ್ಮಸತ್ಯ ಜಗತ್ ಮಿಥ್ಯ ಎಂಬ ಅಭಿಪ್ರಾಯವನ್ನು ನಾನಕ್ ಸ್ವೀಕರಿಸಲಿಲ್ಲ.

ಪರಮಾತ್ಮನಿಂದಲೇ ಸೃಷ್ಟಿಸಲ್ಪಟ್ಟಿರುವ ಈ ಜಗತ್ತು ಮಿಥ್ಯೆಯಾಗಿರಲು ಸಾಧ್ಯವಿಲ್ಲ.

ಸರ್ವಾಂತರ್ಯಾಮಿಯಾಗಿರುವ ಭಗವಂತ ವ್ಯಾಪಿಸಿರುವ ಚರಾಚರಗಳೆಲ್ಲವೂ ಭಗವಂತನಷ್ಟೇ ಸತ್ಯವಾದುದು ಎಂಬ ಮಧ್ವಾಚಾರ್ಯರ ಅಭಿಪ್ರಾಯ ಮತ್ತು ನಾನಕರ ಅಭಿಪ್ರಾಯಗಳು ಪರಸ್ಪರ ಪೂರಕವಾಗಿ ಹೊಂದುತ್ತವೆ. ಪರಮಾತ್ಮನ ಸಂಕಲ್ಪ ಶಕ್ತಿಯು ಪ್ರಕೃತ್ಯಾತೀತವಾದದ್ದು. ಆ ಸಂಕಲ್ಪ ಶಕ್ತಿ ವಿಶ್ವವ್ಯಾಪಿಯಾದದ್ದು. ಅದು ಪ್ರಕೃತಿಯಲ್ಲಿ ಕಾರ್ಯ ನಿರ್ವಹಿಸುತ್ತದೆ. ಆದರೆ ನಿರಂಕುಶ ಬಲದಂತೆ ವರ್ತಿಸುವುದಿಲ್ಲ.

ಬುದ್ಧಿ ಶಕ್ತಿಯೊಡನೆ ಮಿಳಿತವಾದ ಭಗವದ್ ಶಕ್ತಿ ಮನುಷ್ಯನ ಸಂಕಲ್ಪ ಶಕ್ತಿಯಾಗಿ ಜಗತ್ತಿನ ಕಾರ್ಯಕ್ಕೆ ಮೂಲವಾಗುತ್ತದೆ.

"ಪರಮಾತ್ಮ ಒಬ್ಬನೇ. ಮನುಷ್ಯ ತನ್ನ ಚಂಚಲವಾದ ಬುದ್ಧಿಯನ್ನು ನಿಯಂತ್ರಿಸಿ ಶ್ರದ್ಧೆಯಿಂದ ಪ್ರಯತ್ನಿಸಿದಾಗ, ಅವನು ಎತ್ತ ತಿರುಗಿದರೂ ಅತ್ತ ಅವನ ನೇತ್ರಗಳಿಗೆ ಭಗವಂತನ ದರ್ಶನವಾಗುತ್ತದೆ" ಎನ್ನುವ ಗುರು ನಾನಕನ ಮಾತು ಕುರಾನಿನ ಭಕ್ತಿಯಿಂದ ನೀ ಎತ್ತ ತಿರುಗಿದರೂ ಅಲ್ಲಿ ಅಲ್ಲಾನ ದರ್ಶನವಾಗುತ್ತದೆ ಎನ್ನುವ ಮಾತಿಗೆ ಸಂವಾದಿಯಾದುದು.

ಪರಮಾತ್ಮನನ್ನೇ ಬ್ರಹ್ಮ, ವಿಷ್ಣು, ಶಿವ, ರಾಮ, ಕೃಷ್ಣ ಎಂದು ಕರೆಯಲಾಗಿದೆ ಎನ್ನುವ ಅಭಿಪ್ರಾಯ ಕುರಾನಿನ ಅಲ್ಲಾ, ರಬ್, ರಹೀಂ, ಮಾಲಿಕ್ ಎಂದು ಅಲ್ಲಾನ ಸಂಬೋಧನೆಗಳು ಎಂಬ ಅಭಿಪ್ರಾಯಕ್ಕೆ ಸಂವಾದಿಯಾದುದು. ಒಂದೇ ಮಾತಿನಲ್ಲಿ ಹೇಳುವುದಾದರೆ ಪರಮಾತ್ಮನ ಅಖಂಡತೆ ಹಾಗೂ ಅವನ ವೈಯಕ್ತಿಕ ಸ್ವಭಾವದಂತಹ ಯಾವುದೇ ಅಂಶವನ್ನೂ ನಿರಾಕರಿಸಿದಯೇ; ಪರಮಾತ್ಮ ಜಗದಂತರ್ಯಾಮಿ ಅಥವಾ ವಿಶ್ವವ್ಯಾಪಿ ಎಂಬ ಆರ್ಯನ್ನರ ಕಲ್ಪನೆಯನ್ನು ಪರಮಾತ್ಮ ವಿಶ್ವಾತೀತ ಅಥವಾ ಪ್ರಕೃತ್ಯಾತೀತ ಎಂಬ ಸೆಮೆಟಿಕ್ ಕಲ್ಪನೆಯೊಂದಿಗೆ – ನಾನಕ್ ಸಂಯೋಜಿಸಿದ್ದಾರೆ.

ನಾನಕರ ಈ ಎಲ್ಲಾ ಆಲೋಚನೆಗಳು ನಮ್ಮ ವೇದಾಂತದ ಭಾಗವಾದ ಉಪನಿಷತ್ತುಗಳ ಪ್ರಭಾವದಿಂದಲೇ ಪುಷ್ಟಿ ಪಡೆದಿವೆ ಎಂಬುದನ್ನು ಸಿಖ್ ತತ್ವ ಶಾಸ್ತ್ರದ ಯಾವ ವಿದ್ಯಾರ್ಥಿಯಾದರೂ ಸುಲಭವಾಗಿ ಗ್ರಹಿಸಬಹುದು.

ನಾನಕರು ತಮ್ಮ ನಿರ್ಗುಣ ಪರಮಾತ್ಮನನ್ನು ಓಂಕಾರ ರೂಪಿ ಎಂದು ಕರೆದಿದ್ದಾರೆ. ಓಂಕಾರ ತಾಂತ್ರಿಕ ಶಬ್ದ. ಕಾಂಡಕ್ಕೆ ಎಲೆಗಳು ಅಂಟಿಕೊಂಡಿರುವಂತೆ ಓಂಕಾರಕ್ಕೆ ಎಲ್ಲವೂ ಅಂಟಿಕೊಂಡಿದೆ. ಓಂ ಎನ್ನುವುದೇ ಬ್ರಹ್ಮನನ್ನು ಸೃಷ್ಟಿಸಿತು. ಓಂ ಎನ್ನುವುದೇ ವೇದವನ್ನು ಸೃಷ್ಟಿಸಿತು. ಅದೇ ಮೂರು ಲೋಕಗಳ ಸಾರ. ಒಬ್ಬನೇ ಒಬ್ಬ ದೇವರು. ಅವನ ನಾಮ ಓಂಕಾರ.

ಏತದ್ಧ್ಯೇವಾಕ್ಷರಂ ಬ್ರಹ್ಮ ಏತದ್ಧ್ಯೇವಾಕ್ಷರಂ ಪರಮ್
ಏತದ್ಧೇವಾಕ್ಷರಂ ಜ್ಞಾತ್ವಾಯೋಯದಿಚ್ಛತಿ ತಸ್ಯತತ್ ॥

ಓಂಕಾರ ಅಕ್ಷರವೇ ಬ್ರಹ್ಮ. ಈ ಅಕ್ಷರವೇ ಪರ. ಈ ಅಕ್ಷರವನ್ನೇ ತಿಳಿದುಕೊಂಡು ಯಾವನು ಯಾವುದನ್ನು ಬಯಸುತ್ತಾನೆಯೋ ಅವನಿಗೆ ಅದೇ ಆಗುವುದು.

(ಕಠೋಪನಿಷತ್ತು – ಎರಡನೆವಲ್ಲಿ ಶ್ಲೋಕ – ೧೬)

ಯದರ್ಚಿಮದ್ಯದಣುಭ್ಯೋಽಣು ಚ
ಯಸ್ಮಿಂಲ್ಲೋಕಾ ನಿಹಿತಾ ಲೋಕಿನಶ್ಚ
ತದೇತದಕ್ಷರಂ ಬ್ರಹ್ಮ ಸ ಪ್ರಾಣಸ್ತದು ವಾಙ್ಮನ;
ತದೇ ತತ್ಸತ್ಯಂ ತದಮೃತಂ ತದ್ವೇದ್ಧವ್ಯಂ ಸೋಮ್ಯವಿದ್ಧಿ ॥

ಯಾವುದು ದೀಪ್ತಿಯುಳ್ಳದ್ದೋ ಯಾವುದು ಅಣುಗಳಿಗಿಂತಲೂ ಸೂಕ್ಷ್ಮವಾಗಿರುವುದೋ, ಯಾವುದರಲ್ಲಿ ಲೋಕಗಳು, ಲೋಕದಲ್ಲಿರುವವರು ಸಮರ್ಪಿತರಾಗಿರುವುರೋ ಆ ಇದು ಅಕ್ಷರ ಬ್ರಹ್ಮವಾದ ಓಂಕಾರ. ಅದೇ ಪ್ರಾಣ, ಅದೇ ವಾಙ್ಮನಸುಗಳು, ಆ ಇದು ಸತ್ಯ. ಅದೇ ಅಮೃತ.

ಪ್ರಣವೋ ಧನು; ಶರೋ ಹ್ಯಾತ್ಮಾಬ್ರಹ್ಮ ತಲ್ಲಕ್ಷ್ಯ ಮುಚ್ಯತೇ
ಓಂಕಾರವು ಧನುಸ್ಸು. ಆತ್ಮನೇ ಬಾಣ. ಬ್ರಹ್ಮವು ಅದರ ಲಕ್ಷ್ಯ.

(ಮುಂಡಕೋಪನಿಷತ್ – ಎರಡನೆ ಖಂಡ. ಶ್ಲೋಕ ೨ ಮತ್ತು ೪)

ಓಮಿತ್ಯೇತದಕ್ಷರಮಿದಂ ಸರ್ವಂ. ತಸ್ಯೋಪವ್ಯಾಖ್ಯಾನಂ
ಭೂತಂ ಭವದ್ಭವಿಷ್ಯದಿತಿ ಸರ್ವಮೋಂಕಾರ ಏವ ।
ಯಚ್ಚಾನ್ಯತ್ ತ್ರಿಕಾಲಾತೀತಂ ತದಪ್ಯೋಂಕಾರ ಏವ ॥

ಇದೆಲ್ಲವೂ ಓಂ ಎಂಬ ಅಕ್ಷರವು. ಅದರ ಉಪಾಖ್ಯಾನವು ಹಿಂದೆ ಆಗಿ ಹೋದದ್ದು. ಈಗ ಇರುವುದು, ಮುಂದಿನದು ಇದೆಲ್ಲವೂ ಓಂಕಾರವೇ. ಇದು ತ್ರಿಕಾಲಾತೀತವಾದುದು. ಮತ್ತು ಇನ್ನೂ ಯಾವುದಿದೆಯೋ ಅದೂ ಓಂಕಾರವೇ.

(ಮಾಂಡೂಕ್ಯೋಪನಿಷತ್ – ಆಗಮ ಪ್ರಕರಣ–ಶ್ಲೋಕ–೧)

ಅಂದರೆ ಎಲ್ಲಾ ಉಪನಿಷತ್ತುಗಳು ಪ್ರತಿಪಾದಿಸುವ ಪರಬ್ರಹ್ಮನ ಸ್ವರೂಪ ಒಂದೇ. ಅದೇ ಓಂ. ಇದು ಪರಬ್ರಹ್ಮನನ್ನು ವಿವರಿಸುವುದಕ್ಕೆ ಉಪಯೋಗಿಸುವ ಶಬ್ದ ಚಿಹ್ನೆ.

ಅ.ಉ.ಮಾ. ಎಂಬ ಮೂರು ಅಕ್ಷರಗಳಿಂದಾದುದು. ಇದು ಅವ್ಯಕ್ತ ಬ್ರಹ್ಮಕ್ಕೆ ಚಿಹ್ನೆಯಾಗಿರುವಂತೆಯೇ ವ್ಯಕ್ತ ಬ್ರಹ್ಮಕ್ಕೂ ಚಿಹ್ನೆಯಾಗಿದೆ.

ವ್ಯಕ್ತದಿಂದ ಅವ್ಯಕ್ತಕ್ಕೆ ಹೋಗುವುದಕ್ಕೆ ಒಂದು ಸೇತುವೆಯೂ ಆಗಿದೆ.

ಇದೇ ವೇದಗಳಲ್ಲೆಲ್ಲಾ ಪರಮಶ್ರೇಷ್ಠವಾದ ಪ್ರಣವ. ಇದರಲ್ಲಿ ದೇವ ದೇವತೆಗಳ ಸತ್ಯವೂ, ಎಲ್ಲಾ ತತ್ವಗಳೂ, ಎಲ್ಲಾ ಆಧ್ಯಾತ್ಮಿಕ ಅನುಭವಗಳೂ ಇವೆ.

ಈ ಅಕ್ಷರವೇ ಬ್ರಹ್ಮ. ಈ ಅಕ್ಷರವೇ ಪರ.

ಈ ಅಕ್ಷರವನ್ನು ತಿಳಿದುಕೊಂಡು ಯಾವನು ಯಾವುದನ್ನು ಬಯಸುತ್ತಾನೆಯೋ ಅವನಿಗೆ ಅದೇ ಆಗುವುದು, ಎಂಬ ಉಪನಿಷತ್ ಸಾರವನ್ನು ಶ್ರೀ ನಾನಕ್ ಅವರು ತಮ್ಮದೇ ಆದ ಶೈಲಿಯಲ್ಲಿ ಹಾಗೂ ಜನಮನ ಮುಟ್ಟುವ ಆಡು ಭಾಷೆಯಲ್ಲಿ ಪ್ರತಿಪಾದಿಸಿದ್ದಾರೆ.

ಶ್ರೀ ನಾನಕರು ದೇವರನ್ನು ಸತ್, ಕರ್ತಾರ ಎನ್ನುವ ಹೆಸರುಗಳಿಂದಲೂ ಕರೆಯುತ್ತಾರೆ.

ಗುರುನಾನಕರು ವೇದ ಪ್ರತಿಪಾದಿಸುವ ಸೃಷ್ಟಿಕ್ರಮವನ್ನು ಒಪ್ಪಿಕೊಂಡಿದ್ದಾರೆ.

"ಗಾಳಿ ಇಲ್ಲದ, ನೀರಿಲ್ಲದ, ಶಬ್ದವಿಲ್ಲದ
ಜೀವವಿಲ್ಲದ, ಪ್ರಾರಂಭವಾಗಲೀ
ಕಡೆಯಾಗಲೀ ಇಲ್ಲದ
ಬೆಳವಣಿಗೆಯಾಗಲಿ ನಾಶವಾಗಲಿ ಇಲ್ಲದ
ಸೃಷ್ಟಿ ಪೂರ್ವ ಸ್ಥಿತಿಯಲ್ಲಿದ್ದವನು
ಒಬ್ಬನೇ. ಅವನೇ ಎಲ್ಲಾ ಬ್ರಹ್ಮಾಂಡಗಳ
ಸೃಷ್ಟಿಕರ್ತ, ಆ ಪರಮಾತ್ಮ
ಈ ಜಗತ್ತನ್ನು ಸೃಷ್ಟಿಸಿ

ಇದರಲ್ಲಿ ದ್ವಂದ್ವವನ್ನು
ಮಾಯೆಯನ್ನೂ ಸಮರಸಗೊಳಿಸಿದ್ದಾನೆ"

ಎಂದು ತಮ್ಮ ಆಶಾ ದೀ ವಾರ್‌ನಲ್ಲಿ ಸ್ಪಷ್ಟಪಡಿಸಿದ್ದಾರೆ. "ಮನುಷ್ಯರು ಭಗವದ್ ಶಕ್ತಿಯನ್ನು ಅರ್ಥಮಾಡಿಕೊಳ್ಳಲು ಯತ್ನಿಸದೆ, ತಮ್ಮ ಸಾವನ್ನು ಕುರಿತು ಚಿಂತಿಸದೆ, ನಾಲ್ಕು ದಿನಗಳ ಈ ಬದುಕನ್ನು ದೈಹಿಕ ಸುಖಕ್ಕಾಗಿ ಬಳಸುತ್ತೇವೆ. ಭಗವಂತನ ಕಡೆ ದೃಷ್ಟಿ ಹರಿಸದೆ ಸತ್ಯದಿಂದ ದೂರವಾಗುತ್ತಾ, ಸುಳ್ಳು, ಮೋಸಗಳನ್ನು ಜಾಣತನವೆಂದು ಭಾವಿಸುತ್ತಾ, ಅಸತ್ಯದ ಬದುಕನ್ನು ಬದುಕಿ, ಭಗವಂತನ ಕರುಣೆಯಿಂದ ದೂರವಾಗುತ್ತೇವೆ" ಎಂದು ಹೇಳುತ್ತಾ ನಾನಕ್ ಹಿಂದು ಧರ್ಮ ವಿವರಿಸುವ ಸಂಸಾರ ಚಕ್ರವನ್ನು ಒಪ್ಪಿಕೊಳ್ಳುತ್ತಾರೆ.

''ಪುನರಪಿ ಜನನಂ ಪುನರಪಿ ಮರಣಂ'' ಎಂಬ ಚಕ್ರದಲ್ಲಿ ಪ್ರತಿಯೊಂದು ಜೀವಿಯೂ ಪರಿಭ್ರಮಿಸುತ್ತಾ, ಈ ಸಂಸಾರವನ್ನೇ ಸರ್ವಸ್ವವೆಂದು ತಿಳಿಯುತ್ತಾ ವ್ಯರ್ಥ ಬದುಕನ್ನು ಬಾಳುತ್ತಾನೆ ಎಂಬುದನ್ನು

"ನೀ ಎಲ್ಲಿಂದ ಬಂದೆ ?
ನೀ ಹೇಗೆ ಹುಟ್ಟಿದೆ ?
ಸತ್ತನಂತರ ಎಲ್ಲಿಗೆ ಹೋಗುವೆ ?
ಕೆಲವರು ಮಾತ್ರ ಸತತ
ಹುಟ್ಟು-ಸಾವಿನ ಚಕ್ರದಲಿ
ಸಿಕ್ಕಿ ಸುತ್ತುತ್ತಲೇ ಇರುತ್ತಾರೆ
ಕೆಲವರು ಮಾತ್ರವೇ
ಸಾವನ್ನು ಗೆದ್ದು ಧೀರರಾಗುತ್ತಾರೆ.
ಯಾರ ಹೃದಯದಲಿ
ಭಗವಂತ ಸದಾ ಎಚ್ಚರದಲ್ಲಿದ್ದಾನೋ
ಯಾರ ನಾಲಿಗೆ ಸದಾ
ಭಗವಂತನನ್ನು ಜಪಿಸುತ್ತಿರುತ್ತದೋ
ಯಾರು ನಿರಂತರವಾಗಿ
ಭಗವಂತನ ಆರಾಧನೆಯಲಿ ಮಗ್ನನೋ
ಅವನು ಭಗವಂತನಿಂದ
ಏನನೂ ಬಯಸುವುದಿಲ್ಲ.
ಹುಟ್ಟು-ಸಾವುಗಳನು ಶಾಂತರೀತಿಯಲ್ಲೇ
ಸ್ವೀಕರಿಸುತ್ತಾನೆ.

ಸಮುದ್ರದ ಮೇಲೆ ಅಲೆಗಳು ಎದ್ದು
ಮತ್ತೆ ಸಮುದ್ರದಲ್ಲಿಯೇ ಲೀನವಾಗುವಂತೆ.
ಮೆದುಳಿನಿಂದ ಆಲೋಚನೆಗಳು ಹುಟ್ಟಿ
ಮತ್ತೆ ಅದರಲ್ಲಿಯೇ ಲೀನವಾಗುತ್ತವೆ.
ರಾತ್ರಿ ಮರಗಳ ಮೇಲೆ ಒಂದಾಗಿ
ಮುದುಡಿ ಕುಳಿತಿದ್ದ ಪಕ್ಷಿಗಳು
ಸೂರ್ಯನ ಮೊದಲ ಕಿರಣ ಕಂಡ
ತಕ್ಷಣ ಬಿಡುಗಡೆಯ ಸಂತಸದಲಿ
ಆಕಾಶದತ್ತ ಹಾರುವಂತೆ
ಭಗವಂತನ ಕರುಣೆಯ ಬೆಳಕು
ನಮ್ಮತ್ತ ಹರಿದಾಗ ನಮ್ಮ
ಆತ್ಮಬಿಡುಗಡೆಯ ಸಂತಸವ
ಅನುಭವಿಸುತ್ತದೆ"

ಎಂಬ ದೀರ್ಘ ರಚನೆಯಲ್ಲಿ ನಾನಕರ ದೇವಕಲ್ಪನೆ ಅನುಮಾನಕ್ಕೆಡೆ ಇಲ್ಲದಂತೆ ಅಭಿವ್ಯಕ್ತಗೊಂಡಿದೆ.

ಸಿಖ್ ಗುರುಗಳ ಅಭಿಪ್ರಾಯದಂತೆ ಮೋಕ್ಷವನ್ನಾಗಲಿ, ಸ್ವರ್ಗವನ್ನಾಗಲಿ ಸಂಪಾದಿಸುವುದಷ್ಟೇ ಜೀವನದ ಧ್ಯೇಯವಲ್ಲ.

"ಪರಮಾತ್ಮನ ಕಾಣುವುದೇ
ಮಾನವನ ಹಂಬಲವಾಗೇ
ಮೋಕ್ಷ-ಸ್ವರ್ಗಗಳ ಗೊಡವೆ
ಅವಗೆ ಏಕೆ ?" – (ನಾನಕರ ಆಸಾ)

ಎಂಬ ನಾನಕರ ನುಡಿ, ಮಾನವನ ಪರಮ ಗುರಿ ಪರಮಾತ್ಮನ ಸಾಕ್ಷಾತ್ಕಾರವಾಗಬೇಕೇ ಹೊರತು, ಬೇರೆ ಯಾವುದಕ್ಕೂ ಅವನು ಹಂಬಲಿಸುವುದು ತರವಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ.

ತಾವು ಸತ್ತನಂತರ ಸ್ವರ್ಗ ಸುಖವನ್ನು ಪಡೆಯಬೇಕು ಎನ್ನುವುದೇ ಸಾಮಾನ್ಯ ಜನರ ಬಯಕೆ. ಸ್ವರ್ಗ ಸುಖದ ಹಂಬಲದಲ್ಲಿ ಇಹಲೋಕದ ಎಲ್ಲಾ ಕಷ್ಟ-ಕಾರ್ಪಣ್ಯಗಳನ್ನೂ, ದುಃಖ-ದುಮ್ಮಾನಗಳನ್ನೂ ಮೂಕರಾಗಿ ಅನುಭವಿಸುತ್ತಾ ತಮ್ಮ ಬದುಕನ್ನು ಮುಗಿಸುತ್ತಾರೆ.

ಭಗವದ್ ಉಪಾಸನೆ ನಿರಂತರವಾಗಿ ವ್ಯಕ್ತಿಯ ಹೃದಯದಲ್ಲಿ ನಡೆಯುವ ಕ್ರಿಯೆ. ಅದಕ್ಕೆ ಬಹಿರಂಗ ಪ್ರದರ್ಶನ ಅನಾವಶ್ಯಕ. ತಾನು ಭಕ್ತ ಎಂಬ

ತೋರಿಕೆಯ ಅಟ್ಟಹಾಸ ಸಲ್ಲದು ಎಂಬುದನ್ನು

"ನಿವೇದಿಸಿಕೊಳಲೇಕೆ
ಪರಮಾತ್ಮನ ಮಂತ್ರ
ಆಲೋಚನೆಯಲಿ ತಾ
ಮಗ್ನನೆಂದು ಮತ್ತೆ
ಮತ್ತೆ ಕೇಳಿಕೊಳಲೇಕೆ ?
ನೀ ಎಮಗೆ ಪ್ರೀತಿಯ
ಧಾರೆಯೆರೆಯೆಂದು.
ಸೂರ್ಯ ಮೂಡುವ ಹೊತ್ತಿನಲಿ
ಸ್ವಚ್ಛಮನಸಿನಲಿ ಮಾಡು
ಅವನ ಪುಣ್ಯನಾಮಸ್ಮರಣೆ.
ಉತ್ತಮ ಪುನರ್ಜನ್ಮ ದೊರೆತೀತು
ನಿನ್ನ ಸತ್ಕಾರ್ಯಗಳಿಂದ.
ಮುಕ್ತಿ ಮಾತ್ರ
ದೈವಾನುಗ್ರಹದಿಂದಲೇ" (ಜಪ್ ಜೀ)

ಎಂಬ ನಾನಕರ ನುಡಿ, ಮುಕ್ತಿಯನ್ನು ಸ್ವಂತ ಪ್ರಯತ್ನ ಮಾತ್ರದಿಂದಲೇ ಗಳಿಸಲು ಸಾಧ್ಯವಿಲ್ಲ. ಅದು ಭಗವಂತನ ಅನುಗ್ರಹದಿಂದ ಮಾತ್ರವೇ ದೊರೆಯುವಂತಹುದು ಎಂಬುದನ್ನು ಖಚಿತಗೊಳಿಸುತ್ತದೆ.

ಭಗವಂತ ನಮಗೆ ಸದಾ ಒಳಿತನ್ನು ಮಾಡುವ ಶಕ್ತಿ. ಈ ಲೋಕದಲ್ಲಿ ಯಾವ ಅನುಮಾನವೂ ಇಲ್ಲದೆ, ಎಂಥಾ ಅಪಾಯದಲ್ಲೂ ನಾವು ನಂಬಬಹುದಾದ ಶಕ್ತಿಯೊಂದಿದ್ದರೆ ಅದು ಭಗವದ್ ಶಕ್ತಿ ಮಾತ್ರ.

ಸಹ ಮಾನವರು ನಮ್ಮಂತೆಯೇ ದೋಷ ಪೂರ್ಣರೂ, ಸ್ವಾರ್ಥಿಗಳೂ, ಶಕ್ತಿ ಹೀನರೂ. ಅಂತಹ ಜನರನ್ನು ನಂಬುವುದರಿಂದ ಅಪಾಯವನ್ನು ಸ್ವಾಗತಿಸಿದಂತೆಯೇ ಎಂಬುದನ್ನು

"ನಾಲಗೆ ನಿರಂತರ ಜಪಿಸುತ್ತಿರಲಿ
ಭಗವತ್ ನಾಮವ
ಮನ ಅಚಲ ಶ್ರದ್ಧೆಯಲಿ ಇರಲಿ
ಭಗವಂತನಲಿ.
ಭಗವಂತನ ಪ್ರೀತಿ
ನಿಜವಾಗಿ ನಿಶ್ಚಲ

ಎಮ್ಮತ್ತ ಇದ್ದೇ ಇರುತ್ತದೆ ಸದಾ" – (ಶ್ರೀರಾಗ್)

ಭಗವಂತನ ನಾಮಸ್ಮರಣೆಯ ಮಹತ್ವವನ್ನು ಸಿಖ್ ಧರ್ಮದ ಎಲ್ಲಾ ಗುರುಗಳೂ ಮತ್ತೆ ಮತ್ತೆ ಒತ್ತಿ ಹೇಳಿದ್ದಾರೆ.

ಗುರು ವಾಕ್ಯ ನಮಗೆ ಸ್ವಾತಂತ್ರ್ಯವನ್ನು ತಂದುಕೊಡುತ್ತದೆ. ಭಗವದ್ ಸಾಕ್ಷಾತ್ಕಾರಕ್ಕೆ ಗುರುವೇ ಮಹಾನ್ ದ್ವಾರ.

ಗುರು

ಸಿಖ್ ಮತದಲ್ಲಿ ಧರ್ಮ ಮಾರ್ಗವೆಂಬುದು ಅಭಿಪ್ರಾಯಗಳ ಅಥವಾ ಸಿದ್ಧಾಂತಗಳ ಗುಂಪಲ್ಲ. ಒಂದು ನಿರ್ದಿಷ್ಟ ಮಾದರಿಗೆ ಅನುಗುಣವಾಗಿ ಬದುಕಬೇಕಾದ ಜೀವನ ವಿಧಾನ. ಶಿಷ್ಯನ ಬದುಕಿನ ದಾರಿಯಲ್ಲಿ ಗುರುವಿನ ವ್ಯಕ್ತಿತ್ವ ಸದಾ ಪರಿಣಾಮಕಾರಿಯಾಗಿರುತ್ತದೆ.

ಶಿಷ್ಯನ ಸಮಗ್ರ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುತ್ತಾ ದೈವಿಕ ಅಂಶಗಳಿಗೆ ಅನುಗುಣವಾಗಿ ಅವನ ಬದುಕನ್ನು ರೂಪಿಸುವ ಶಕ್ತಿಯೇ ಗುರು.

ಇಂತಹ ಶಕ್ತಿಯ ಪ್ರಭಾವ ಇಲ್ಲದಿದ್ದ ಪಕ್ಷದಲ್ಲಿ ವ್ಯಕ್ತಿಯ ನೈತಿಕ ಬಲಗಳಿಗೆ ಯಾವ ಮಾರ್ಗದರ್ಶನವೂ ದೊರೆಯುವುದಿಲ್ಲ.

"ಲೋಕದಲ್ಲಿ ಜ್ಞಾನದ ಸಾವಿರಾರು ಶಾಖೆಗಳು ಇದ್ದರೂ ಸಮಾಜದಲ್ಲಿ ಗಾಢಾಂಧಕಾರವೇ ಇದೆ" ಎಂಬುದಾಗಿ ನಾನಕ್ ತಮ್ಮ ಆಸಾ ದಿವಾರ್‌ನಲ್ಲಿ ಹೇಳುವ ಮಾತು ಗಮನೀಯ.

"ಮಾನವರನ್ನು ಮಾನವರೊಂದಿಗೆ
ಮಾನವರನ್ನು ಪರಮಾತ್ಮನೊಂದಿಗೆ
ಸಂಬಂಧಿಸುವ ಯಾವುದೇ ಬಲ ಸಮಾಜದಲ್ಲಿಲ್ಲ
ಇಂತಹ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ
ಕೇವಲ ತನಗಾಗಿ ಬದುಕುತ್ತಾ
ಇತರರಿಂದ ಬೇರೆಯಾಗಿ ಇರಲು ಇಚ್ಛಿಸುತ್ತಾನೆ.
ಬಯಲಿನಲ್ಲಿ ಒಂಟಿಯಾಗಿ ಉಳಿದ
ಹೊಸ ಎಳ್ಳಿನ ಗಿಡಗಳಂತೆ ಬದುಕುತ್ತಾರೆ"
(ಆಸಾ–ದಿ–ವಾರ್)

ಮಾನವರು ಕಲ್ಪಿಸಿಕೊಂಡಿರುವ
ಜಾತಿ ಹಾಗೂ ಸ್ಥಾನ–ಮಾನಗಳ
ನಡುವಣ ಅಂತರವನು
ದೂರ ಮಾಡುವವನು ಗುರು.

ಅವನು ಅವರೆಲ್ಲರನ್ನೂ
ಒಟ್ಟುಗೂಡಿಸಿ, ಪರಮಾತ್ಮನನ್ನು
ಸೇರುವಂತೆ ಮಾಡುತ್ತಾನೆ

(ಆಸ್–ದಿ–ವಾರ್)

ಸಿಖ್ ಗುರುಗಳು ಪರಿಪೂರ್ಣರಾಗಿದ್ದರು. ಸಿಖ್ ಧರ್ಮ ಗ್ರಂಥದಷ್ಟೇ ಅವರು ಪವಿತ್ರರು ಎಂದು ಭಾವಿಸಲಾಗಿತ್ತು.

"ಪ್ರತಿಯೊಬ್ಬ ವ್ಯಕ್ತಿಯೂ
ತಪ್ಪು ಮಾಡುತ್ತಾನೆ
ತಪ್ಪು ಮಾಡದೆ ಇರುವವರೆಂದರೆ
ಗುರು ಹಾಗೂ ಪರಮಾತ್ಮ ಇವರಿಬ್ಬರೇ"

(ನಾನಕ್ – ಶ್ರೀರಾಗ್)

ಮಾನವರನ್ನು ರಕ್ಷಿಸುವ ವಿಚಾರದಲ್ಲಿ ಪರಿಣಾಮಕಾರಿಯಾದ ಪಾತ್ರವಹಿಸುವ ಗುರು, ಮಾನವರಿಗೆ ಅನುಕರಣ ಮಾಡಲು ಸಾಧ್ಯವಾಗದಷ್ಟು ಎತ್ತರಕ್ಕೆ ತನ್ನ ವ್ಯಕ್ತಿತ್ವವನ್ನು ಬೆಳೆಸಿ ಕೊಳ್ಳಬಾರದು. ಸಾಮಾನ್ಯ ಮಾನವರ ಆಲೋಚನೆಗೆ ಎಟುಕದಷ್ಟು ಎತ್ತರಕ್ಕೆ ವ್ಯಕ್ತಿತ್ವವನ್ನು ಉದಾತ್ತೀಕರಿಸಿ ಕೊಂಡ ಪಕ್ಷದಲ್ಲಿ ಆ ಗುರು ಅಲೌಕಿಕ ವ್ಯಕ್ತಿಯಾಗಿ ಬಿಡುತ್ತಾನೆ.

ಸಾಮಾನ್ಯ ಮಾನವರ ಸ್ವಭಾವದಲ್ಲಿ ಕಾರ್ಯಶೀಲವಾಗುವಂತಹ ಸ್ವಭಾವವನ್ನೇ ಗುರುವು ಹೊಂದಿರುತ್ತಾನೆ. ಹಾಗಿದ್ದೂ ಪರಮಾತ್ಮನ ಸಂಕಲ್ಪ ಶಕ್ತಿಗೆ ನಿಸ್ಸಂದೇಹವಾಗಿ ತನ್ನನ್ನು ಒಪ್ಪಿಸಿಕೊಳ್ಳುವುದರ ಮೂಲಕ, ದೈವಾನುಗ್ರಹಕ್ಕೆ ಪಾತ್ರನಾಗಿ ಪರಿಪೂರ್ಣತೆಯನ್ನು ಸಾಧಿಸುತ್ತಾನೆ. ಸಿಖ್ ಗುರುಗಳು ಪಾಪದ ವಿರುದ್ಧ ಹೋರಾಡಿ ಗೆದ್ದಿದ್ದಾರೆ. ದೀರ್ಘ ಕಾಲದವರೆಗೆ ಅಂದರೆ ದೈವಾನುಗ್ರಹಕ್ಕೆ ಪಾತ್ರರಾಗುವ ತನಕ ತಪ್ಪು ಮಾಡುತ್ತಲೇ ಜೀವನ ಸಾಗಿಸಿದರೂ ಜ್ಞಾನ ಹಾಗೂ ಪ್ರೇಮಗಳಿಗೆ ಸಂಬಂಧಿಸಿದಂತೆ, ನಿರಂತರ ಶಿಸ್ತಿನ ಜೀವನವನ್ನು ನಡೆಸುವುದರ ಮೂಲಕ, ತಮ್ಮ ಗುರುಗಳೊಂದಿಗೆ ಪಡೆದ ಅನುಭವಗಳಿಂದ ಅವರು ಪರಿಪೂರ್ಣರಾಗಿದ್ದಾರೆ. ಇಂತಹ ಸ್ಥಿತಿ ತಲ್ಪಿದಾಗ ಅವರಲ್ಲಿನ ದೋಷಗಳು ಅದೃಶ್ಯವಾದುವು.

ದೋಷಮುಕ್ತತೆಯಿಂದ ಅವರು ಪೂಜ್ಯರೂ, ಪರಿಪೂರ್ಣರೂ ಆದರು. ಅವರನ್ನು ಪ್ರಲೋಭನಗೊಳಿಸಲೆಂದೇ ಪಾಪದ ಉದಯವಾಯಿತು. ಆದರೆ ಅವರೆಂದೂ ದಾರಿ ಬಿಟ್ಟು ಹೋಗಲಿಲ್ಲ. ಪಾಪಗಳನ್ನು ಗೆಲ್ಲಲು ಅವರು ಸಮರ್ಥರಾಗಿದ್ದರು.

ಆದುದರಿಂದಲೇ ತಮ್ಮ ಪ್ರಭಾವಲಯಕ್ಕೆ ಬಂದವರನ್ನು ದೇವಪುರುಷರನ್ನಾಗಿ ಪರಿವರ್ತಿಸಲು ಅವರು ಸಮರ್ಥರಾದರು.

ದೇವರಿಗೂ ಗುರುಗಳಿಗೂ ಬೃಹತ್ ಅಂತರವಿದೆ. ಗುರುಗಳನ್ನು ದೇವರೆಂದು ಕರೆದರೆ ಅದೊಂದು ಮಹಾ ದೋಷ.

"ನನ್ನನ್ನು ದೇವರೆಂದು ಹೇಳುವ ಜನ
ನರಕಕ್ಕೆ ಹೋಗುತ್ತಾರೆ.
ನಾನೊಬ್ಬ ದೇವರ ಸೇವಕ.
ಈ ಜಗತ್ತಿನ ಲೀಲೆಯನ್ನು
ನೋಡಲು ಬಂದಿದ್ದೇನೆ.
ದೇವರು ನಡೆಸಿದಂತೆ
ನಡೆಯುವ ದಾಸ ನಾನು.
ಇದರಲ್ಲಿ ಎಳ್ಳಷ್ಟು ಸಂಶಯವಿಲ್ಲ."

ಎಂದು ಗುರು ಗೋವಿಂದ ಸಿಂಗ್ ಸ್ಪಷ್ಟವಾಗಿಯೇ ತಮ್ಮ ಶಿಷ್ಯರನ್ನು ಎಚ್ಚರಿಸಿದ್ದಾರೆ.

ಸಿಖ್ ಗುರುಗಳಿಗೆ ಅವತಾರಗಳಲ್ಲಿ ನಂಬಿಕೆಯಿಲ್ಲ. ದೇವರು ಸ್ವತಃ ಭೂಮಿಗಿಳಿದು ಬರುವುದಿಲ್ಲ. ಆದರೆ ಕಾಲಕಾಲಕ್ಕೆ ನಿರಾಸೆ, ನಿಸ್ಸಹಾಯಕತೆಗಳಿಂದ ಮಾನವರನ್ನು ಉದ್ದರಿಸಲು ತನ್ನ ಸೇವಕರನ್ನು ಕಳುಹಿಸುತ್ತಾನೆ.

ಈ ದೃಷ್ಟಿಯಿಂದ ಸಿಖ್ ಮತ ಹಿಂದು ಧರ್ಮಕ್ಕಿಂತ ಬೇರೆಯಾಗಿ ಕಾಣುತ್ತದೆ. ಭಗವಂತನೇ ಕಾಲಕಾಲಕ್ಕೆ ಧರ್ಮವನ್ನು ಉದ್ಧರಿಸಲು ಅವತರಿಸಿ ಬರುತ್ತಾನೆ ಎಂದು ಹಿಂದುಗಳು ನಂಬುತ್ತಾರೆ.

"ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್
ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ"

ಯಾವಾಗ ಧರ್ಮದ ಅವನತಿಯಾಗುತ್ತದೋ, ಅಧರ್ಮದ ಉನ್ನತಿಯಾಗುತ್ತದೋ ಆಗ ನಾನು ಅವತರಿಸುತ್ತೇನೆ. ಸಾಧುಗಳ ರಕ್ಷಣೆಗಾಗಿಯೂ, ದುಷ್ಟರ ವಿನಾಶಕ್ಕಾಗಿಯೂ ಮತ್ತು ಧರ್ಮದ ಸಂಸ್ಥಾಪನೆಗಾಗಿಯೂ ಪ್ರತಿ ಯುಗದಲ್ಲೂ ಅವತರಿಸುತ್ತೇನೆ. (ಭಗವದ್ಗೀತೆ – ಅಧ್ಯಾಯ ೪, ಶ್ಲೋಕ ೭ ಮತ್ತು ೮).

ನಾನಕ್ ಅವತಾರ ತತ್ವವನ್ನು ಒಪ್ಪುವುದಿಲ್ಲ. ಯಾವನು ಸತ್ಯ ಪುರುಷನನ್ನು ಕಂಡಿದ್ದಾನೋ ಅವನೇ ನಿಜವಾದ ಗುರು. ಅವನ ಸಹವಾಸದಲ್ಲಿದ್ದು ಪ್ರಭುವಿನ ನಾಮಸಂಕೀರ್ತನೆಯನ್ನು ಮಾಡುತ್ತಿದ್ದರೆ ಶಿಷ್ಯ ಉದ್ಧಾರವಾಗುತ್ತಾನೆ.

"ಯಾರ ದರ್ಶನದಿಂದ ಕಾಮ ಅಡಗುತ್ತವೋ,
ಮನಸ್ಸು-ಮೈಗಳು ತಂಪಾಗುತ್ತದೋ,
ಅಂತಹ ಸದ್ಗುರುವಿಗೆ ಉಘೇ,
ನಿರ್ಮತ್ಸರನಾಗಿ ಎಲ್ಲರನ್ನೂ
ಸಮಾನ ದೃಷ್ಟಿಯಿಂದ ಕಾಣುತ್ತಾ
ನಿಂದೆ-ಸ್ತುತಿಗಳಿಗೆ
ಸಮಭಾವದಿಂದ
ಪ್ರತಿಕ್ರಿಯಿಸುವ ಗುರುವಿಗೆ ಉಘೇ.
ಯಾರು ನಿರಾಕಾರನೋ, ಅನಂತನೋ
ಅವನೊಂದಿಗೆ ಒಂದುಗೂಡಿದ್ದಾನೋ
ಯಾರು ಸದಾ ಪರಬ್ರಹ್ಮ
ಚಿಂತನೆಯಲ್ಲೇ ನೆಟ್ಟ ಮನಸ್ಸು
ಉಳ್ಳವನೋ, ಯಾರು
ಮಾನವರನ್ನು ಸತ್ಯಾಚರಣೆಯಲ್ಲಿ
ನೆಲೆಗೊಳಿಸುತ್ತಾನೋ
ಅಂತಹ ಗುರುವಿಗೆ ಉಘೇ"

(ನಾನಕ್)

"ಶ್ರೀ ಗುರು ವಚನವೇ ಆಂತರ್ಯದ ಸಂಗೀತ.
ಶ್ರೀ ಗುರು ವಚನವೇ ಸರ್ವಶ್ರೇಷ್ಠ ಗ್ರಂಥ.
ಶ್ರೀ ಗುರು ವಚನವೇ ಸರ್ವವ್ಯಾಪ್ತ ಶಕ್ತಿ.
ಶ್ರೀ ಗುರುವೇ ಶಿವ. ಅವನೇ ಬ್ರಹ್ಮ
ಅವನೇ ವಿಷ್ಣು.
ಶ್ರೀ ಗುರುವೇ ಮಾತೃ ದೇವತೆ"

(ನಾನಕ್)

ಎಂಬುದಾಗಿ ನಾನಕ್ ಗುರು ಸ್ಥಾನವನ್ನು ಭಗವಂತನ ಸ್ಥಾನಕ್ಕೆ ಎರಡನೆಯದಾಗಿ, ಆದರೆ ಸಕಲ ಮಾನವ ಕೋಟಿಯಲ್ಲಿ ಮೊದಲನೆಯದಾಗಿ ಭಾವಿಸಿದ್ದಾರೆ.

ಸಿಖ್ ಗುರುಗಳು ಮತ್ತೊಂದು ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ. ಗುರುವಿನ ಶರೀರ ಗುರುವಲ್ಲ. ಯಾವುದು ಅವನ ಅಂತರಾತ್ಮದ ವಾಣಿಯಾಗಿ ನುಡಿ ಶರೀರದಲ್ಲಿ ಹೊರಗೆ ಕಾಣುತ್ತದೋ – ಅಂತಹ ಗುರುವಚನವೇ ನಿಜವಾದ ಗುರು.

"ಮಾತಿನಲ್ಲಿ ಅಮೃತ ಇದೆ.
ಮಾತಿನಲ್ಲಿ ಜ್ಯೋತಿ ಇದೆ
ಗುರುವಿನ ಮಾತಿನಂತೆ
ಶಿಷ್ಯ ನಡೆದರೆ, ಗುರು
ಆತನನ್ನು ಸಂಸಾರ ಸಾಗರ
ದಿಂದ ಪಾರು ಮಾಡುತ್ತಾನೆ"

(ಗುರು ನಾನಕ್)

ಆದುದರಿಂದ "ಗುರುವಿನ ಶರೀರಕ್ಕೆ ನಮಸ್ಕರಿಸುವುದರಿಂದ – ಗುರುವಿನ ಸಂದರ್ಶನದಿಂದ ಶಿಷ್ಯನಿಗೆ ಯಾವು ಪುಣ್ಯವೂ ಲಭಿಸುವುದಿಲ್ಲ."

ಗುರುನಾನಕ್ ತಮ್ಮ ಧಾರ್ಮಿಕ ವಲಯವನ್ನು ಪವಿತ್ರವಾದ ವಚನ ಮತ್ತು ಸಂಘಟಿತ ಸ್ನೇಹ ಎಂಬ ವಿಚಾರಗಳ ತಳಹದಿಯ ಮೇಲೆ ವಿಸ್ತರಿಸಿದ್ದಾರೆ.

ಗುರು ವಚನ ದೈವವಾಣಿಗೆ ಸಮವಾಗಿ ಜನ ಸಾಮಾನ್ಯರಲ್ಲಿ ನೈತಿಕ ನಿಷ್ಠೆಯನ್ನು ಬಲಪಡಿಸುವ; ಅವರನ್ನು ಸನ್ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸುವ ಶಕ್ತಿಯಾಗಿ, ಅಂಧಶ್ರದ್ಧೆಯಿಂದ ಪಾರು ಮಾಡಿ ಹೊಸ ಉತ್ಸಾಹಕ್ಕೆ ದಾರಿ ಮಾಡಿಕೊಟ್ಟಿತು.

ಸಂಘಟಿತ ಸ್ನೇಹ – ಎಂಬ ವಿಚಾರ ಅತ್ಯಮೂಲ್ಯವಾದ ಸಾಮಾಜಿಕ ಪರಿವರ್ತನೆಗೆ ದಾರಿ ಮಾಡಿದ ವಿಚಾರ.

ನಾನಾ ದೈವಗಳ ಹೆಸರುಗಳಲ್ಲಿ, ನಾನಾ ಪಂಗಡಗಳಾಗಿ ಒಡೆದು ಹೋಗಿ – ಛಿದ್ರ ಛಿದ್ರವಾಗಿದ್ದ ಹಿಂದು ಸಮಾಜವನ್ನು ಒಂದುಗೂಡಿಸುವ ಪ್ರಬಲ ಪ್ರಯೋಗ ಈ ಸಂಘಟಿತ ಸ್ನೇಹ. ಸಂಘಟಿತ ಮೈತ್ರಿಯ ಇನ್ನೊಂದು ಹೆಸರೇ ಸಂಗತ್. ಇದರ ಅರ್ಥ ಪವಿತ್ರವಾದ ಸ್ನೇಹ. ಈ ಪವಿತ್ರ ಸ್ನೇಹದ ಭಾವನೆ ಮಸಂದ್ ಎಂಬ ಹೆಸರಿನ ಸ್ಥಳೀಯ ಸಮಿತಿಗಳ ಸ್ಥಾಪನೆಗೆ ಕಾರಣವಾಯಿತು. ಪ್ರತಿಯೊಂದು ಮಸಂದ್‌ಗೂ ಒಬ್ಬ ಅಧಿಕೃತ

ಮುಖಂಡನಿರುತ್ತಿದ್ದ. ಪ್ರತಿಯೊಬ್ಬ ಸಿಖ್ಖನು ಇಂತಹ ಒಂದಲ್ಲ ಒಂದು ಮಸಂದ್‌ನ ಸದಸ್ಯನಾಗಲೇಬೇಕಾಗಿತ್ತು.

ಈ ಎಲ್ಲಾ ಸದಸ್ಯರನ್ನೂ ಒಂದುಗೂಡಿಸುವ ಕೇಂದ್ರ ವ್ಯಕ್ತಿತ್ವ ಗುರುವಿನದಾಗಿತ್ತು. ಗುರು ಹಾಗೂ ಶಿಷ್ಯರ ನಡುವಿನ ಪ್ರೇಮವು ಜಗತ್ತಿನಲ್ಲಿಯೇ ಅತ್ಯಂತ ಗಾಢ ಪ್ರೇಮಿಗಳ ನಡುವೆ ಇರಬಹುದಾದ ಪ್ರೇಮಕ್ಕಿಂತಲೂ ಗಾಢವೂ, ಪವಿತ್ರವೂ ಆಗಿತ್ತು. ಈ ಪ್ರೇಮ, ತ್ಯಾಗ – ಬಲಿದಾನಗಳನ್ನು ಪ್ರೇರೇಪಿಸುವ ಮಹಾನ್ ಪ್ರೇಮ.

ಒಂದು ಕಡೆ ಸಿಖ್ ಶಿಷ್ಯರ ಮತ್ತು ಗುರುಗಳ ನಡುವೆ, ಇನ್ನೊಂಡು ಕಡೆ ಸಿಖ್ ಶಿಷ್ಯರ ಮತ್ತು ಗುರು ವಚನದ ನಡುವೆ ಸಂದಿಲ್ಲದ ಐಕ್ಯವನ್ನು ಸಾಧಿಸುವುದರ ಮೂಲಕ, ಗುರುವಿಗೆ ಸಲ್ಲುವ ಗೌರವಾರ್ಪಣೆಯನ್ನು ವೈಯಕ್ತಿಕ ಮಟ್ಟದಿಂದ ಮೇಲೆತ್ತಲಾಯಿತು.

ಗುರು ತಮಗೆ ಧರ್ಮ ಗ್ರಂಥಕ್ಕಿಂತ ಕೆಳಗಿನ ಸ್ಥಾನವನ್ನು ಆಯ್ದುಕೊಂಡರು. ವಚನದ ಧ್ಯಾನ ಮತ್ತು ಗಾನಗಳೇ ಗೌರವ ಸಮರ್ಪಣೆಯ ಏಕೈಕ ಮಾರ್ಗವಾಯಿತು.

ಮಸಂದ್‌ಗಳು ಅತ್ಯಧಿಕ ಪಾವಿತ್ರ್ಯವನ್ನು ಸಂಪಾದಿಸಿದವು. ಈ ಸಮಿತಿಗಳಲ್ಲಿ ಗುರುವಿನ ಚೈತನ್ಯ ಸದಾ ಚಲಿಸುತ್ತಿರುತ್ತದೆ ಎಂಬುದು ಅಚಲವಾದ ನಂಬಿಕೆ.

ಪಂಥ್ ಎಂಬ ಹೆಸರಿನ ಒಂದು ಸಮಗ್ರ ಸಂಘ, ಗುರುವಿನ ಅಂಗ ಭಾಗವೆಂದು ಪರಿಗಣಿತವಾಗುವ ತನಕ ಮಸಂದ್‌ಗಳು ಹೆಚ್ಚು ಅಧಿಕಾರವನ್ನು ಹೊಂದಿದ್ದವು.

ಸಿಖ್ ಗುರು ಮತ್ತು ಶಿಷ್ಯರ ನಡುವಿನ ಸಂಬಂಧ ವರ್ಣನೆಗೆ ಮೀರಿದ್ದು.

ಶಿಷ್ಯ ತನ್ನೊಳಗೆ ಗುರುವಿನ ವ್ಯಕ್ತಿತ್ವವನ್ನು ತುಂಬಿಸಿ ಕೊಳ್ಳುತ್ತಾನೆ. ಇದರಿಂದ ನಾಶವಿಲ್ಲದ ಒಂದು ಮಹಾಶಕ್ತಿ ಮೂಲದೊಂದಿಗೆ ತಾನು ಸೇರಿರುವಂತೆ ಭಾವಿಸುತ್ತಾನೆ.

ಹೀಗೆ ಶ್ರದ್ಧಾವಂತನಾದ ಸಾಮಾನ್ಯ ಸಿಖ್ ಒಬ್ಬನೇ ಒಂದೂ ಕಾಲು ಲಕ್ಷ (ಸವಾಲಾಕ್) ಜನರಿಗೆ ಸರಿಸಮನಾಗುತ್ತಾನೆ. ಪ್ರತಿಯೊಂದು ವಿಧಾನದಲ್ಲಿಯೂ ಅವನ ಸ್ವಭಾವ ಬಲ ಪಡೆಯುತ್ತದೆ. ಅವನ ಸುತ್ತಾ ಇರುವ ನೂರಾರು ಮಂದಿ ಕೆಳಗೆ ಬಿದ್ದರೂ, ಅವನು ಮಾತ್ರ ದೇವ ಸೇನಾನಿಯಂತೆ ದುರ್ಗದಲ್ಲಿ ನೆಲೆಯೂರಿ ನಿಲ್ಲುತ್ತಾನೆ. ತನ್ನ ಗುರುವಿನ ಧ್ವಜ ನೆಲ ಮುಟ್ಟದೆ ಸದಾ ಹಾರಾಡುತ್ತಿರುವಂತೆ ಅವನು ನೋಡಿಕೊಳ್ಳುತ್ತಾನೆ.

ಗುರುವಿನೊಂದಿಗೆ ತಾನು ಐಕ್ಯವಾಗಿದ್ದೇನೆ ಎಂಬ ಈ ಭಾವನೆಯೇ ತುರ್ತು ಪರಿಸ್ಥಿತಿಗಳಲ್ಲಿ ಸಾಮಾನ್ಯ ಸಿಖ್‌ನನ್ನು ಅವನ ಪರಿಮಿತಿಗಳಿಗೆ ಮೀರುವಷ್ಟು ಶಕ್ತಿ ಶಾಲಿಯನ್ನಾಗಿಸುತ್ತದೆ. ಅತ್ಯಂತ ಶೋಚನೀಯವಾಗಿ ಹರಿದು ಹಂಚಿ ಹೋಗಿದ್ದ ಸಾಮಾನ್ಯರಲ್ಲಿ ಸಾಮಾನ್ಯರನ್ನು ಗುರು ನಾನಕ್ ಅತ್ಯಂತ ಶಿಸ್ತಿನ ಹೋರಾಟದ ಪಡೆಯನ್ನಾಗಿ ರೂಪಾಂತರಿಸಿದರು. ಮುಂದಿನ ಗುರುಗಳು ನಾನಕ್‌ರ ಮಾರ್ಗದಲ್ಲಿಯೇ ನಡೆದು ಮುಸ್ಲಿಂ ಧಾಳಿಯನ್ನು ಎದುರಿಸಿ ನಿಲ್ಲಬಲ್ಲ ಸಮರ್ಥ ಪಡೆಯನ್ನು ರೂಪಿಸಿದರು.

ಕರ್ಮನಿಯಮಕ್ಕೆ ಆತ್ಮ ಅವಶ್ಯಕವಾಗಿದೆ. ಸದ್ಗುರು ದೊರೆತ ಹೊರತು ಅದಕ್ಕೆ ಬಿಡುಗಡೆ ಇಲ್ಲ. ಗುರುವಿನ ಮನದಲ್ಲಿ ನೆಲೆಸಲು ಅಪೇಕ್ಷಿಸುವ ಶಿಷ್ಯ, ತನ್ನನ್ನು ಸಂಪೂರ್ಣವಾಗಿ ಗುರುವಿನ ಇಚ್ಛೆಗೆ ಅರ್ಪಿಸಿಕೊಳ್ಳಬೇಕು.

"ಅಹಂಕಾರವನ್ನು ತ್ಯಜಿಸಿ
ಮನದಲಿ ಶ್ರೀಹರಿಯ ಧ್ಯಾನಿಸುತ್ತಾ
ಫಲಾಪೇಕ್ಷೆಯಿಲ್ಲದೆ ಯಾವಾತ
ಕರ್ಮವೆಸಗುತ್ತಾನೋ
ಆತನಿಗೆ ಪ್ರಭು ದೊರೆಯುತ್ತಾನೆ"

(ನಾನಕ್)

ಎಂದು ಶಿಷ್ಯನ ಜೀವನವನ್ನು ಗುರು ರೂಪಿಸುತ್ತಾನೆ. ಇದಕ್ಕಾಗಿ ಶಿಷ್ಯ ಲೋಕವನ್ನಾಗಲಿ, ಸಂಸಾರವನ್ನಾಗಲಿ ತ್ಯಜಿಸಬೇಕಾಗಿಲ್ಲ.

ಪ್ರತಿಯೊಬ್ಬ ಸಿಖ್ಖನು ಯಾವುದಾದರೊಂದು ವೃತ್ತಿಯನ್ನು ಅವಲಂಬಿಸಿ, ನಿತ್ಯ ಜೀವನದ ಅವಶ್ಯಕತೆಯನ್ನು ಪೂರೈಸಿಕೊಳ್ಳಬೇಕು.

ತಾನು ಸಂಪಾದಿಸಿದ್ದನ್ನು ಇತರರೊಡನೆ ಹಂಚಿಕೊಳ್ಳಬೇಕು. ಸ್ವಾರ್ಥಿಗೆ ಧರ್ಮದಲ್ಲಿ ಸ್ಥಳವಿಲ್ಲ.

"ಯಾವನು ತಾನು ದುಡಿದು ಸಂಪಾದಿಸಿದ್ದನ್ನು ತಾನು ಉಂಡು, ಮಿಕ್ಕವರಿಗೆ ಹಂಚಿ ಕೊಡುತ್ತಾನೋ, ಅಂತಹವನಿಗೆ ಸನ್ಮಾರ್ಗದ ಅರಿವಿದೆ" ಎನ್ನುತ್ತಾರೆ ನಾನಕ್.

"ತ್ಯಾಗದಲ್ಲಿ ಅಹಂಕಾರ ಇರಬಾರದು. ಒಂದು ಕೋಟಿ ಸತ್ಕರ್ಮಗಳನ್ನು ಮಾಡಿದರೂ, ಅವುಗಳನ್ನು ಅಹಂಕಾರದಿಂದ ಮಾಡಿದ್ದಾದರೆ, ಆ ಮನುಷ್ಯನಿಗೆ ಅವುಗಳನ್ನು ಗೈದ ದಣಿವು ಮಾತ್ರ ಲಭಿಸುತ್ತದೆ" ಎಂದು ನಾನಕ್ ಎಚ್ಚರಿಸಿದ್ದಾರೆ.

ಯಾವಾಗಲೂ ಸದ್‌ಬೋಧೆಯುಳ್ಳ ಮನಸ್ಸು ಇತರರಿಗೆ ಹಿತವೆಸಗುವುದರಲ್ಲಿ ಉತ್ಸಾಹ ಪಡೆಯುತ್ತದೆ ಎಂದು ತಿಳಿಯ ಹೇಳಿದ ಶ್ರೀ

ಗುರುವಿನ ಮಹತ್ವ ಸಿಖ್ ಧರ್ಮದಲ್ಲಿ ಸ್ವಲ್ಪವೂ ಕುಂದದೆ ಇಂದಿಗೂ ಅದ್ವಿತೀಯ ಸ್ಥಾನದಲ್ಲಿಯೇ ಉಳಿದು ಬಂದಿದೆ.

ಶ್ರೀ ಗುರು ನಾನಕ್ ಅವರಿಂದ ಮೊದಲ್ಗೊಂಡು ಶ್ರೀ ಗುರು ಗೋವಿಂದ್ ಸಿಂಗ್‌ವರೆಗೆ ಹತ್ತೂ ಜನ ಗುರುಗಳು ಪರಸ್ಪರ ವಿರೋಧವಿಲ್ಲದ, ಪರಸ್ಪರ ಪೂರಕವಾದ ವಿಚಾರಗಳನ್ನು ಪ್ರತಿಪಾದಿಸುತ್ತಾ ಬಂದುದರಿಂದ – ಮಹಮದೀಯರ ಉಪಟಳವನ್ನು ತಮ್ಮ ಧೀರತೆ, ತ್ಯಾಗ, ಬಲಿದಾನಗಳಿಂದ ಸಮರ್ಥವಾಗಿ ಪ್ರತಿಭಟಿಸಿ ನಿಲ್ಲಲು ಒಂದು ಮಹಾ ಸಮುದಾಯವನ್ನು ಅಣಿಗೊಳಿಸಿದ ಕೀರ್ತಿ ಈ ಗುರು ವೃಂದಕ್ಕೆ ಸಲ್ಲುತ್ತದೆ.

ಶೀಲ ಮತ್ತು ಸತ್ಕಾರ್ಯ

ಗುರುನಾನಕರ ವಿಚಾರಧಾರೆ ವ್ಯಕ್ತಿಯ ವಿಕಾಸ ಮತ್ತು ಸಮಾಜದ ಉನ್ನತಿಗಳೆರಡನ್ನೂ ಸಮವಾಗಿ ಕಂಡು ಒಂದು ಮತ್ತೊಂದರ ಪೂರಕ ಅಂಶವೆಂಬುದನ್ನು ಜಗತ್ತಿಗೆ ತೋರಿತು.

ವ್ಯಕ್ತಿಯಾಗಲಿ, ಸಮಾಜವಾಗಲಿ ಶಿಸ್ತಿಗೆ ಒಳಪಡದಿದ್ದರೆ, ಆಂತರ್ಯದ ಶಕ್ತಿ ಪೋಲಾಗುತ್ತದೆ ಎಂಬುದನ್ನು ಅರಿತಿದ್ದ ನಾನಕ್, ತಮ್ಮ ಕೃತಿಗಳಲ್ಲಿ ಮಾತ್ರವಲ್ಲ – ನಿಜ ಜೀವನದಲ್ಲೂ ನಡೆದು ತೋರಿದರು.

"ಪರಮಾತ್ಮನ ಸಂಕೀರ್ತನೆಯ ನೆಪದಿ
ಜೀವನ ಆಲಸಿಯಾದ ಯೋಗಿಯ
ಜೀವನ ನಮ್ಮದಾಗದು.
ಐಹಿಕ ಸಂಬಂಧಗಳ ನಡುವೆಯೇ
ಕ್ರಿಯಾಶೀಲ ಸೇವೆಯ ಜೀವನ
ನಮ್ಮದಾಗಬೇಕು.
ಸತ್ಕಾರ್ಯಗಳ ಹೊರತಾಗಿ
ಯಾವುದೇ ಆರಾಧನೆ
ಇರುವುದು ಅಸಾಧ್ಯ"

(ಜಪ್ ಜೀ)

"ಲೋಕದಲ್ಲಿ ನಿನ್ನನ್ನು
ಸೇವೆಗೆ ಸಮರ್ಪಿಸಿಕೊ
ಭಗವಂತನ ಆಸ್ಥಾನದಲಿ
ಗೌರವದ ಸ್ಥಾನ ನಿನ್ನದಾಗುತ್ತದೆ"

(ಶ್ರೀರಾಗ್)

"ಅಧಾರ್ಮಿಕ ವ್ಯಕ್ತಿಗಳು
ಒಂದೇ ಪಾತ್ರೆಯಲ್ಲಿ ಭುಂಜಿಸುವಂತೆ
ಕಳ್ಳರು, ಅಕ್ರಮ ಪ್ರಣಯಿಗಳು
ವೇಶ್ಯೆಯರು ಯಾವಾಗಲೂ
ಜೊತೆ ಜೊತೆಯಾಗಿರುತ್ತಾರೆ.
ಅವರಿಗೆ ಪ್ರಭುವಿನ ಸ್ತುತಿ ತಿಳಿಯದು.
ಅವರೊಳಗೆ ಕೆಡಕು ಮನೆ ಮಾಡಿದೆ.
ಕತ್ತೆಗೆ ಚಂದನ ಲೇಪಿಸಿದರೂ
ಅದು ಧೂಳಿನಲ್ಲಿ ಹೊರಳಾಡುತ್ತದೆ"
(ನಾನಕ್)

"ಬ್ರಹ್ಮಜ್ಞಾನಿಯಾಗಿರುವವನೇ ಬ್ರಾಹ್ಮಣನು.
ಜಪ, ತಪ, ಸಂಯಮ ಮತ್ತು ಇತರ ಕಾರ್ಯಗಳ
ಬ್ರಹ್ಮಜ್ಞಾನಕ್ಕಾಗಿಯೇ ಅವನು ಮಾಡುವನು.
ಶೀಲ–ಸಂತೋಷವೇ ಅವನ ಧರ್ಮ,
ಸಮಸ್ತ ಬಂಧನಗಳನ್ನು
ಹರಿದೊಗೆದು ಮುಕ್ತನಾಗುವನು.
ಇಂಥ ಬ್ರಾಹ್ಮಣನು ಪೂಜ್ಯನು"

"ಶಾರೀರಿಕ ಕ್ರಿಯೆ ಮನವೆಂಬ ಕಾಗದದ ಮೇಲೆ ಅನುಮತಿ ಪತ್ರವನ್ನು ಬರೆಯುವುದು. ಹಣೆಯ ಮೇಲೆ ಬರೆದ ಲೇಖನವನ್ನು ಮೂರ್ಖನು ಓದಲಾರನು. ಈ ಲೇಖನಗಳನ್ನು ಪ್ರಭುವಿನ ಚರಣದ ಬಳಿ ಬರೆಯಲಾಗುವುದು.. ಖೊಟ್ಟಿ ಮೊಹರು ನಿರುಪಯೋಗಿಯಾದುದು. ಕಾಜಿ ಸುಳ್ಳು ಹೇಳಿ ಮಲ ತಿನ್ನುವುದು. ಬ್ರಾಹ್ಮಣನು ಜೀವ ಹತ್ಯೆ ಮಾಡಿ ಅನಂತರ ಸ್ನಾನ ಮಾಡುವನು. ಯೋಗಿ ಅಂಧನಾಗಿ ಯುಕ್ತಿಯನ್ನು ಅರಿಯನು. ಈ ಮೂವರೂ ನಾಶ ಮಾಡುವ ಬಂಧನಗಳ ಕಡೆ ಸಾಗುತ್ತಿರುವರು."

"ಯೋಗದ ರಹಸ್ಯವನ್ನು ಅರಿತವನೇ ಯೋಗಿ. ಗುರುವಿನ ಕೃಪೆಯಿಂದ ಅವನು ಕೇವಲ ಒಬ್ಬನನ್ನೇ ಅರಿಯುವನು."

"ಜಗತ್ತಿನಿಂದಾಚೆಗೆ ತನ್ನ ಬುದ್ಧಿಯನ್ನು ದಾಟಿಸಿದವನೆ ಕಾಜಿ. ಗುರು ಪ್ರಸಾದದಿಂದ ಜೀವಿತವಿದ್ದೂ ಅಹಂಕಾರವನ್ನು ನಾಶ ಮಾಡುವನು."

"ಬ್ರಹ್ಮನ ಬಗ್ಗೆ ಚಿಂತನ ಮಾಡುವವನೆ ಬ್ರಾಹ್ಮಣನು. ಅವನು ಸ್ವತಃ ತನ್ನ ಉದ್ಧಾರ ಮಾಡಿಕೊಂಡು ಸಕಲರ ಉದ್ಧಾರ ಮಾಡುವನು."

"ತನ್ನ ಮನಸ್ಸನ್ನು ತೊಳೆದುಕೊಂಡವನೇ ತತ್ವಜ್ಞಾನಿ. ಮಲವನ್ನು ದೂರ ಮಾಡುವವನೆ ಮುಸಲ್ಮಾನನು."

"ಓದಿದುದನ್ನು ಅರಿಯಬಲ್ಲವನೇ ಓದಿದವನೆಂದು ತಿಳಿಯಲಾಗುವುದು. ಅವನ ಹಣೆಯ ಮೇಲೆ ಪ್ರಭುವಿನ ಚರಣಗಳ ಮುದ್ರೆ ಅಂಕಿತವಾಗಿರುವುದು."

"ಶುದ್ಧ ಆಚರಣೆ ಇದ್ದಲ್ಲಿ ಪೂರ್ಣ ಬುದ್ದಿ ಇರುವುದು.
ಶುದ್ಧಾಚರಣೆ ಇಲ್ಲದಿದ್ದರೆ ಬುದ್ಧಿ ಅಪೂರ್ಣ."
ಜ್ಞಾನಿ ಹೇಗಿರಬೇಕೆಂಬುದನ್ನು ಕುರಿತು ನಾನಕನು
ಹೇಳುತ್ತಾನೆ. "ತನ್ನನ್ನು ತಾನು ಅರಿತವನೇ ಪ್ರಭುವನ್ನು
ಅರಿಯುವನು."
"ಗುರು ಪ್ರಸಾದದಿಂದ ಸದಾ ಒಳ್ಳೆಯದನ್ನು ಮಾಡು
ವವನು ಜ್ಞಾನಿ. ಅವನು ಪ್ರಭುವಿನ ಚರಣಗಳಿಗೆ ಸ್ವೀಕೃತನು."

ಈ ಎಲ್ಲಾ ಮಾತುಗಳಲ್ಲಿ ಎರಡು ಮುಖ್ಯವಾದ ವಿಚಾರಗಳನ್ನು ನಾನಕ್ ಪ್ರಸ್ತಾಪಿಸುತ್ತಿದ್ದಾರೆ. ಐಹಿಕ ಸಂಬಂಧ ಎನ್ನುವ ಮಾತು ದೊಡ್ಡದು. ಸಂಸಾರವನ್ನು ತೊರೆದು ಕಾಡನ್ನು ಸೇರುವುದಾಗಲಿ, ಸಮಾಜವನ್ನು ತೊರೆದು ಒಂಟಿಯಾಗಿ ಇರುವುದಾಗಲಿ ನಾನಕರ ಗುರಿಯಾಗಿರಲಿಲ್ಲ. ವ್ಯಕ್ತಿ, ತಾನು ಹುಟ್ಟಿದ ಕುಟುಂಬ, ಬೆಳೆದ ಸಮಾಜ, ವಾಸಿಸುವ ದೇಶಕ್ಕೆ ಯಾವತ್ತೂ ಋಣಿಯಾಗಿರುತ್ತಾನೆ. ಈ ಮೂರಕ್ಕೂ ಅವನು ಸಲ್ಲಿಸಬೇಕಾದ ಕರ್ತವ್ಯಗಳಿರುತ್ತವೆ.

ಇವುಗಳನ್ನು ಅಲಕ್ಷಿಸಿ ದೂರ ಹೋಗುವ ವ್ಯಕ್ತಿ, ಸಮಸ್ಯೆಗಳನ್ನು ಎದುರಿಸಲಾಗದೆ ತಪ್ಪಿಸಿಕೊಳ್ಳಲು ಯತ್ನಿಸುವ ಪಲಾಯನವಾದಿಯಾಗುತ್ತಾನೆ.

ಎರಡನೆಯ ವಿಚಾರ – ವ್ಯಕ್ತಿ ಕುಟುಂಬದಲ್ಲಿ ಪ್ರಯೋಜನಕ್ಕೆ ಬಾರದ ಜಡ ವ್ಯಕ್ತಿಯಾಗಿ ಉಳಿದರೆ, ಅವನು ಕುಟುಂಬಕ್ಕೂ, ಸಮಾಜಕ್ಕೂ ಭಾರವಾಗುತ್ತಾನೆ. ಸಮಸ್ಯೆಯಾಗುತ್ತಾನೆ. ನಾನಕರು ಯಾವತ್ತೂ ಜಡತೆಯ ವಿರೋಧಿ.

ವ್ಯಕ್ತಿ ಕ್ರಿಯಾಶೀಲನಾಗಬೇಕು. ಆಗ ಅವನಿಗೂ ಲಾಭ, ಅವನ ಕುಟುಂಬಕ್ಕೂ ಲಾಭ. ಆದರೆ ಕ್ರಿಯಾಶೀಲನಾದ ವ್ಯಕ್ತಿ ಸ್ವಾರ್ಥಿಯಾಗುವುದು ಸುಲಭ. ವ್ಯಕ್ತಿ ಸ್ವಾರ್ಥಿಯಾದರೆ ಸಮಾಜಕ್ಕೆ ಅವನಿಂದ ಯಾವುದೇ ಪ್ರಯೋಜನವಿಲ್ಲ. ಆದುದರಿಂದಲೇ ನಾನಕರು ಕ್ರಿಯಾಶೀಲ ಸೇವೆಯ ಜೀವನ ನಮ್ಮದಾಗಬೇಕು ಎನ್ನುತ್ತಾರೆ.

ಸಿಖ್‌ಧರ್ಮದ ಮುಖ್ಯನಿಯಮವೇ ಇದು. ವ್ಯಕ್ತಿ ತಾನು ಗಳಿಸಿದ್ದನ್ನು ತಾನೂ ಉಪಯೋಗಿಸಿಕೊಂಡು, ಸುತ್ತಲ ಸಮಾಜದವರೊಡನೆ ಅದನ್ನು ಹಂಚಿಕೊಳ್ಳಬೇಕು ಎನ್ನುವುದು ಸಿಖ್ ಧರ್ಮದ ಪ್ರಮುಖ ನಿಯಮ.

ಹಂಚಿಕೊಳ್ಳುವುದು ಎನ್ನುವ ಕ್ರಿಯೆ ವ್ಯಕ್ತಿಯ ಮನಸ್ಸನ್ನು ವಿಶಾಲಗೊಳಿಸುತ್ತದೆ. ಸಮಾಜದಲ್ಲಿನ ದುರದೃಷ್ಟಶಾಲಿಗಳಿಗೆ ಆಶ್ರಯ ನೀಡುತ್ತದೆ. ಒಟ್ಟು ಸಮಾಜದ ಒಳಿತಿನಲ್ಲಿ ವ್ಯಕ್ತಿಯ ತ್ಯಾಗ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ತ್ಯಾಗ ವ್ಯಕ್ತಿಯ ಶೀಲವಾಗಿ ಪರಿಣಮಿಸಿದಾಗ ಅದು ಆರಾಧನೆ ಎಂದೆನಿಸಿಕೊಳ್ಳುತ್ತದೆ. ಈ ಮಾತುಗಳನ್ನು ಕೇವಲ ಬೋಧಿಸಿದರೆ ಸಾಲದು. ಈ ಬೋಧನೆಗಳನ್ನು ಗ್ರಂಥದಲ್ಲಿ ಬರೆದಿಟ್ಟರೆ ಸಾಲದು. ಜ್ಞಾನ ಮತ್ತು ಅನುಭವಗಳಿಗೆ ಸಂಬಂಧಿಸಿದಂತೆ ನಿರಂತರವಾಗಿ ತರಬೇತಿ ನೀಡುವ ಶಿಕ್ಷಣವೊಂದನ್ನು ಅವರು ಜನತೆಗೆ ನೀಡಲು ಯೋಚಿಸಿದರು. ಏಕೆಂದರೆ ಮಾನವನಿಗೆ ಪ್ರಲೋಭನೆಗಳು ಎದುರಾದಾಗ ಯಾರ ಉಪದೇಶವನ್ನೂ ಆತ ಪಡೆಯಲು ಸಾಧ್ಯವಾಗುವುದಿಲ್ಲ.

ಪ್ರಲೋಭನೆಯನ್ನು ಶಕ್ತಿಪೂರ್ಣವಾಗಿ ಎದುರಿಸಬೇಕಾದರೆ, ಯಾವ ನಿಮಯಗಳನ್ನು ನಾವು ಬಾಲ್ಯದಿಂದಲೂ ಧರ್ಮದ ಹೆಸರಿನಲ್ಲಿ, ಶೀಲದ ಹೆಸರಿನಲ್ಲಿ ನಿರಂತರವಾಗಿ ರೂಢಿಗೆ ತಂದುಕೊಂಡು, ಶೀಲವನ್ನು ಸ್ವಭಾವವನ್ನಾಗಿ ಮಾಡಿಕೊಂಡಿರುತ್ತೇವೋ, ಆಗ ಮಾತ್ರ ಎಂತಹ ಕ್ಲಿಷ್ಟ ಪರಿಸ್ಥಿತಿಗಳಲ್ಲೂ ಪ್ರಲೋಭನೆಗೆ ಒಳಗಾಗದ ಹಾಗೆ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಸಾಧ್ಯವಾಗುತ್ತದೆ. ಆದುದರಿಂದಲೇ ಶೀಲ ಶಿಕ್ಷಣದ ಬಗ್ಗೆ ನಾನಕ್ ಪ್ರಾಮುಖ್ಯತೆ ನೀಡಿದ್ದಾರೆ.

ಗುರುವಿನ ಮುಖ್ಯ ಕೆಲಸ ಅಂದರೆ ದೇವರು ಮತ್ತು ಮನುಷ್ಯನಿಗೆ ಇರುವ ಅಂತರವನ್ನು ಹೋಗಲಾಡಿಸಿ ಸೇತುವೆಯನ್ನು ನಿರ್ಮಿಸುವುದು.

> "ತಾವರೆಯೊಂದು ಜಲದಲಿ ಇರಲು
> ಜಲವನ್ನಾಗಲಿ ಕೆಸರನ್ನಾಗಲಿ
> ಅಂಟಿಸಿಕೊಳ್ಳದೆ ಅರಳುವ ಹಾಗೆ
> ಜಗತ್ತಿನಲ್ಲಿರುವ ಮಾನವ
> ಜಗತ್ತಿನಲ್ಲಿದ್ದರೂ ಪ್ರಲೋಭನೆಗೆ
> ಅಂಟಿಕೊಳ್ಳದೆ ಸದಾ ದೈವದ
> ಜಪದಲಿ ತನ್ನನು ತಾನು
> ರಕ್ಷಿಸಿಕೊಳುವುದು

ಬದುಕಿನ ದಾರಿಯ ಬದುಕುವ ಉಪಾಯ."

"ಒಲವು ಹೊಲವಾಗಲಿ, ಶೌಚ ನೀರಾಗಲಿ, ಸತ್ಯ-ತೃಪ್ತಿಗಳು ಎತ್ತುಗಳಾಗಲಿ, ವಿನಯ ನೇಗಿಲಾಗಲಿ. ಆತ್ಮ ಪ್ರಜ್ಞೆ ಉಳುಗಾರನಾಗಲಿ, ದೈವ ಧ್ಯಾನ ಎರೆಮಣ್ಣಾಗಲಿ, ಶಿವೈಕ್ಯ ಋತುವಾಗಲಿ, ಭಗವನ್ನಾಮ ಬೀಜವಾಗಲಿ, ದೈವಾನುಗ್ರಹ ಫಸಲಾಗಲಿ. ಅದರ ಮುಂದೆ ಇಡೀ ಲೋಕ ಮಾಯೆಯಂತೆ ಕಾಣುತ್ತದೆ. ಎಲೈ ನಾನಕ್, ಪರಮಾತ್ಮ ಕೃಪೆಯಿಂದ ಅಂಥ ಕರ್ಮವಂತ ಭಗವಂತನಿಂದ ಆಗಲುವುದಿಲ್ಲ."

"ಜಗತ್ತಿನ ಹುಲ್ಲುಗಾವಲಿನಲ್ಲಿ ಮನುಷ್ಯ ಕೆಲವೇ ದಿವಸ
ಹಾದು ಹೋಗುತ್ತಾನೆ.
ಅಂಧಕಾರ ಆವೃತನಾಗಿ ಕ್ರೀಡಿಸುತ್ತಾನೆ.
ದೊಂಬನಂತೆ ತನ್ನ ಪಾತ್ರವನ್ನು ನಟಿಸುತ್ತಾನೆ.
ಸ್ವಪ್ನದಲ್ಲೆಂಬಂತೆ ಕನವರಿಸುತ್ತಾನೆ."

ಸಂಸಾರದಲ್ಲಿದ್ದರೂ ಹರಿಯ ಧ್ಯಾನದಿಂದ ಪರಿಶುದ್ಧನಾಗಿ ಉಳಿಯಬಹುದಾದ ಮಾರ್ಗವನ್ನು ಉಪದೇಶಿಸಿದ ನಾನಕ್

"ಸತ್ಯವೆನ್ನುವುದು ಎಲ್ಲಕಿಂ ಮಿಗಿಲು
ಸತ್ಯಕಿಂ ಸತ್ಯದ ನಡತೆ ಬಲು ಹಿರಿದು"

ಎಂಬ ಮಾತಿನಲ್ಲಿ ನಡತೆಯ ಬಗ್ಗೆ ಒತ್ತನ್ನು ಕೊಟ್ಟಿದ್ದಾರೆ.

ಮನುಷ್ಯನ ಸ್ವಭಾವದೊಂದಿಗೇ ಮಿಳಿತವಾಗಿರುವ ಕಾಮ, ಕ್ರೋಧ, ಮದ, ಮೋಹಗಳು ಅವನನ್ನು ನೀತಿಯ ಮಾರ್ಗದಿಂದ ತಪ್ಪಿಸಲು ಸದಾ ಕಾತರದಿಂದ ಪ್ರಯತ್ನಿಸುತ್ತಲೇ ಇರುತ್ತವೆ.

ಇಂತಹ ಪ್ರಚೋದನೆಗೆ ಒಳಗಾಗದೆ ಉಳಿಯಬೇಕಾದರೆ ಸಾಧು ಸಂತರ ಸತ್ಸಂಗ ನಮಗೆ ದೊರಕುತ್ತಲೇ ಇರಬೇಕು.

"ಸಾಧುಸಂತರ ಸತ್ಸಂಗದಲಿ
ಹರಿವುದು ಹರಿಯ ಗಾನ ನಿರಂತರ
ಗಾನ ಸಲಿಲದಲಿ ಮುಳುಗೇಳುವ
ಚೇತನಕೆ ಬೇಕಿಲ್ಲ ಬೇರೆ ಯಾತ್ರೆ.
ಹರಿಸಂಕೀರ್ತನೆಯೇ ನಿಜವಾದ
ತೀರ್ಥ ಯಾತ್ರೆ."

ನಾವು ಎಷ್ಟೆಷ್ಟು ಮಡದಿ ಮಕ್ಕಳ ಬಗ್ಗೆ, ಸಂಪತ್ತಿನ ಬಗ್ಗೆ ಮೋಹಗೊಳ್ಳುತ್ತೇವೋ ಅಷ್ಟಷ್ಟು ಆಸೆಯ ಭೂತ ದೊಡ್ಡದಾಗಿ ನಮ್ಮನ್ನು

ಪರಮಾತ್ಮನಿಂದ ದೂರ ಸೆಳೆದು ಬಿಡುತ್ತದೆ.

ಎಲ್ಲಿಯವರೆಗೆ ನಾವು ಆಸೆಯ ಗುಲಾಮರಾಗಿರುತ್ತೇವೋ ಅಲ್ಲಿಯವರೆಗೆ ಭಯ ಪೀಡಿತರಾಗಿರುತ್ತೇವೆ. ಭಯ ಮತ್ತು ಆಸೆ ನಮ್ಮನ್ನು ಪ್ರಪಂಚದ ಗುಲಾಮರನ್ನಾಗಿಸಿ ಬಿಡುತ್ತವೆ.

ಆಸೆಯನ್ನು ಗೆದ್ದವನು ಲೋಕವನ್ನೇ ಗೆದ್ದಂತೆ. ಅವನಿಗೆ ಯಾರಿಂದಲೂ ಏನೂ ಆಗಬೇಕಾಗಿಲ್ಲ. ಅದೇ ನಿಜವಾದ ವಿರಾಗಿಯ ಲಕ್ಷಣ. ವಿರಾಗಿಯ ಮನಸ್ಸಿನಲ್ಲಿ ಭಗವಂತನ ಸನ್ನಿಧಾನ ಸದಾ ಜ್ವಾಜಲ್ಯಮಾನವಾಗಿ ಇರುತ್ತದೆ.

ಜಾತಿಯನ್ನು ಮೀರಿದ್ದು ಧರ್ಮ

ಹಿಂದು ಧರ್ಮದ ಬಹುದೊಡ್ಡ ಕಳಂಕ ಮನುಷ್ಯರನ್ನು ಅಸ್ಪೃಶ್ಯರನ್ನಾಗಿಸಿ, ಕಡೆಗಣಿಸಿದ್ದು.

ಸಮಾಜದ ಸರ್ವಾಂಗೀಣ ಪ್ರಗತಿಗಾಗಿ ಸ್ವಭಾವಕ್ಕೆ ಅನುಸಾರವಾಗಿ ಮಾಡುವ ಕೆಲಸದ ಆಧಾರದ ಮೇಲೆ ಅಂದರೆ ಗುಣ ಮತ್ತು ಕರ್ಮದ ತಳಹದಿಯ ಮೇಲೆ ವಿಂಗಡಣೆಗೊಂಡ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ವರ್ಗ ವಿಭಾಗ ಯಾವುದೇ ಕೀಳಿನ, ಹೆಚ್ಚು-ಕಡಮೆಯ ಭಾವನೆಗೆ ಆಸ್ಪದವಿಲ್ಲದ ವರ್ಣ ವಿಭಾಗವಾಗಿತ್ತು.

ಜ್ಞಾನ ಮತ್ತು ಅಧಿಕಾರಗಳ ಬಲವನ್ನು ಗಳಿಸಿದ ಜನಾಂಗಗಳು ತಮ್ಮನ್ನು ತಾವು ಶ್ರೇಷ್ಠರನ್ನಾಗಿಸಿಕೊಂಡು, ಉಳಿದವರನ್ನು ಕನಿಷ್ಠರನ್ನಾಗಿಸಿ, ಸಮಾಜದಲ್ಲಿ ಅನ್ಯೆಜವಾದ ವಿಭಜನೆಗೆ, ಶೋಷಣೆಗೆ ಕಾರಣರಾದರು.

ಇದು ಎಷ್ಟರಮಟ್ಟಿಗೆ ಅವನತಿಯ ದಾರಿಯನ್ನು ಹಿಡಿಯಿತು ಅಂದರೆ ಒಂದೊಂದು ಜಾತಿಯೂ ನೂರಾರು ಒಳ ಪಂಗಡಗಳಾಗಿ-ಪರಸ್ಪರರ ನಡುವೆ ಹೆಣ್ಣು ಕೊಟ್ಟು ತರುವ ಊಟ. ಉಪಚಾರಗಳಲ್ಲಿ ಭಾಗಿಗಳಾಗುವ ಮಾನವ ಸಹಜ ಸಂಪ್ರದಾಯಗಳು ಸ್ಥಗಿತಗೊಂಡು, ಒಂದೊಂದು ಪಂಗಡವೂ ಒಂದೊಂದು ದ್ವೀಪಗಳಾದವು.

ಇದರಿಂದ ಹಿಂದು ಸಮಾಜವೇ ಛಿದ್ರಛಿದ್ರವಾಗಿ ಪೊಳ್ಳಾಯಿತು. ಅನ್ಯ ಧರ್ಮೀಯರ ಆಕ್ರಮಣವನ್ನು ಎದುರಿಸಿ ನಿಲ್ಲುವಲ್ಲಿ ತ್ರಾಣ ಸಾಲದೆ ಕುಸಿಯಿತು. ಶಿಥಿಲಗೊಂಡ ಸಮಾಜ ನಾಶದ ಅಂಚನ್ನು ಮುಟ್ಟಿತು.

ಹಿಂದು ಸಮಾಜದಲ್ಲಿ ಎಲ್ಲರಿಂದಲೂ ಕಡೆಗಣಿಸಲ್ಪಟ್ಟಿದ್ದ, ಅಂತ್ಯಜರೆಂದು ತಿರಸ್ಕರಿಸಲ್ಪಟ್ಟಿದ್ದ, ಸಮಾಜದ ಬಹುದೊಡ್ಡ ಭಾಗ ಪ್ರಾಣಿಗಳಿಗಿಂತಲೂ ಕಡೆಯಾದ ಬಾಳನ್ನು ಬದುಕುವಂತಹ ಶೋಚನೀಯ ಪರಿಸ್ಥಿತಿ ಉದ್ಭವಿಸಿತು.

ಭಾರತಕ್ಕೆ ಅಕ್ರಮಣಕಾರರಾಗಿ ಬಂದ ಪರ ಧರ್ಮೀಯರು ಅಂತ್ಯಜರನ್ನು ತಮ್ಮೆಡೆಗೆ ಆಕರ್ಷಿಸುವುದು ಅತಿ ಸುಲಭವಾಯಿತು.

ಹಿಂದು ಸಮಾಜದಲ್ಲಿ ತಮಗೆ ಸಿಗದೆ ಇದ್ದ ಸ್ಥಾನ–ಮಾನ, ಐಶ್ವರ್ಯಗಳು ತಾವು ಮತಾಂತರಗೊಂಡ ಧರ್ಮದಲ್ಲಿ ದೊರಕುವ ಆಕರ್ಷಣೆ ಜನರನ್ನು ಮತಾಂತರದತ್ತ ಪ್ರೇರೇಪಿಸಿತು.

ಭಕ್ತಿ ಪಂಥದ ರೂವಾರಿಗಳಾದ ಶ್ರೀರಾಮಾನುಜ, ರಮಾನಂದ ಮುಂತಾದವರು ಹಿಂದು ಸಮಾಜಕ್ಕೆ ಒದಗಿದ್ದ ಈ ಅಪಾಯವನ್ನು ತಟ್ಟನೆ ಮನಗಂಡದ್ದಲ್ಲದೆ; ಭಗವಂತನ ದೃಷ್ಟಿಯಲ್ಲಿ ಎಲ್ಲಾ ಜೀವಿಗಳೂ ಸಮಾನರಾಗಿರುವಾಗ, ಅಂತ್ಯಜರೆಂದು ಕರೆದು ಮಾನವರಲ್ಲಿಯೇ ಒಂದು ಭಾಗವನ್ನು ಹೀನಾಯವಾಗಿ ನಡೆಸಿಕೊಳ್ಳುವುದು, ಮಾನವ, ತನ್ನ ಸಹ ಮಾನವನಿಗೆ ಮಾಡುತ್ತಿರುವ ಅತಿ ದೊಡ್ಡ ಅವಮಾನ ಮತ್ತು ಅನ್ಯಾಯ ಎಂಬುದನ್ನು ಅರ್ಥ ಮಾಡಿಕೊಂಡು, ತಾವು ಪ್ರಾರಂಭಿಸಿದ ಭಕ್ತಿ ಪಂಥಕ್ಕೆ ಎಲ್ಲಾ ಜಾತಿಯವರನ್ನು ಮುಕ್ತವಾಗಿ ಸ್ವಾಗತಿಸಿದರು.

ಇದರಿಂದ ಕಬೀರ್, ರವಿದಾಸ್ ಮುಂತಾದ ಬೇರೆ ಬೇರೆ ಜಾತಿಯವರು ಭಕ್ತಿ ಪಂಥದ ಪ್ರಮುಖ ಶಕ್ತಿಗಳಾಗಿ ವಿಕಾಸ ಪಡೆಯಲು ಸಾಧ್ಯವಾಯಿತು. ಶ್ರೀ ಗುರು ನಾನಕ್ ಜಾತ್ಯಾತೀತ ಸಮಾಜ ರಚನೆಗೆ ಪ್ರಾಮುಖ್ಯತೆಯನ್ನು ನೀಡಿ, ಹೀನ ಜಾತಿಯವರೆಂದು ಅವಮಾನಿತರಾಗಿದ್ದ ಜನರಲ್ಲಿ ಆತ್ಮಸ್ಥೈರ್ಯ ತುಂಬಲು, ಅವರು ತಮ್ಮ ವ್ಯಕ್ತಿತ್ವದ ಘನತೆಯಿಂದ ಸಮಾಜದಲ್ಲಿ ಯೋಗ್ಯ–ಸ್ಥಾನ ಮಾನಗಳನ್ನು ಪಡೆಯಲು ಆ ಮೂಲಕ ಸಮಾಜದ ನಿಷ್ಠಾವಂತ, ಶಕ್ತಿಪೂರ್ಣ ಘಟಕವಾಗಿ ವಿಕಾಸವನ್ನು ಸಾಧಿಸಲು ಅವಶ್ಯಕವಾದ ವಾತಾವರಣವನ್ನು ನಿರ್ಮಾಣ ಮಾಡಿದರು.

"ಕೆಳ ಜಾತಿಯವರಲ್ಲಿಯೂ
ಅತ್ಯಂತ ಕೆಳಗುಳಿದವರಿದ್ದಾರೆ
ನಾನಕ್, ನಾನು ಅವರಲ್ಲಿಗೆ ಹೋಗುವೆ.
ದೊಡ್ಡವರೊಂದಿಗೆ ನನಗೇನು ಕೆಲಸ.
ಕೆಳಗುಳಿದವರ ಬಗ್ಗೆಯೇ
ಭಗವಂತನ ಕೃಪಾದೃಷ್ಟಿ.
ಜಾತಿಯ ಆಚರಣೆ ಹೆಮ್ಮೆಗಳಿಗೆ
ಅರ್ಥವೇ ಇಲ್ಲ"

ಎಂದು ಸ್ಪಷ್ಟವಾಗಿ ಜಾತೀಯತೆಯನ್ನು ವಿರೋಧಿಸಿದ್ದಾರೆ.

"ಜಾತಿವಾದದಲ್ಲಿ ಹುರುಳಿಲ್ಲ. ಅದರ ವಶದಲ್ಲಿ ಏನೂ ಇಲ್ಲ.
ಸತ್ಯದ್ದೇ ಪರೀಕ್ಷೆಯಾಗುವುದು.
ವಿಷಪಾನ ಮಾಡಿದವನು ಸಾಯಲೇಬೇಕು."

ಎಂದು ತೀಕ್ಷ್ಣವಾಗಿಯೇ ಎಚ್ಚರಿಸಿದ್ದಾರೆ.

ತನ್ನನ್ನು ನೋಡಲು ಬರುವ ಪ್ರತಿಯೊಬ್ಬರೂ ಸಾಮೂಹಿಕ ಊಟದಲ್ಲಿ ಭಾಗಿಯಾಗಲೇ ಬೇಕು (ಗುರು–ಕಾ–ಲಂಗರ್) ಎಂದು ನಿಯಮಿಸಿ, ಅಂತ್ಯಜ, ಬ್ರಾಹ್ಮಣ, ಕ್ಷತ್ರಿಯ, ಶೂದ್ರ, ಮುಸಲ್ಮಾನ ಪ್ರತಿಯೊಬ್ಬರೂ ತಮ್ಮ ತಮ್ಮ ಜಾತಿಯ ಪ್ರತಿಷ್ಠೆಯನ್ನು ಹಿಂದಕ್ಕೆ ತಳ್ಳಿ ಸಾಮೂಹಿಕ ಭೋಜನದಲ್ಲಿ ಪಾಲ್ಗೊಳ್ಳುವಂತೆ ಕಡ್ಡಾಯಗೊಳಿಸಿ ಅಂದಿನ ಕಾಲಕ್ಕೆ ದೊಡ್ಡ ಕ್ರಾಂತಿಯನ್ನೇ ಮಾಡಿದರು ನಾನಕ್.

ಬ್ರಾಹ್ಮಣರು ತಾವು ಶುದ್ಧ. ಉಳಿದವರು ಅಶುದ್ಧ ಎಂದು ಹೇಳುತ್ತಾ–ಮಡಿ – ಮೈಲಿಗೆಗಳನ್ನು ಆಚರಿಸುತ್ತಿದ್ದ ರೀತಿಯನ್ನು ನಾನಕ್ ವಿರೋಧಿಸಿದರು.

"ಪ್ರಕೃತಿಯಲ್ಲಿ ಯಾವುದು ಶುದ್ಧ ಯಾವುದು ಅಶುದ್ಧ.
ಬೀಸುವ ಗಾಳಿಯಲ್ಲಿ ಹರಿಯುವ ನದಿಯಲ್ಲಿ
ಕಣ್ಣಿಗೆ ಕಾಣದ ಲಕ್ಷಾಂತರ ಜೀವಿಗಳಿವೆ
ಶುದ್ಧ ಎನ್ನುವ ಸ್ಥಳದಲ್ಲೂ ಅಶುದ್ಧತೆಯ ಅಂಟಿರುತ್ತದೆ.
ಅಡಿಗೆ ಮನೆ ಮಾತ್ರ ಶುದ್ಧವಾಗಿರಲು ಹೇಗೆ ಸಾಧ್ಯ"

ಎಂದು ಶುದ್ಧಾ ಶುದ್ಧತೆಗಳ ಬಗ್ಗೆ ಟೀಕಿಸಿ, ಸಮುದಾಯ ಭೋಜನದಲ್ಲಿ, ಸಾಮೂಹಿಕ ಅಡಿಗೆಯಲ್ಲಿ ಸರ್ವರೂ ಭಾಗಿಗಳಾಗುವಂತೆ ವಾತಾವರಣವನ್ನು ಮಾರ್ಪಡಿಸಿದರು ನಾನಕ್. ಹಿಂದು – ಮುಸಲ್ಮಾನರಲ್ಲಿ ಯಾರು ಶ್ರೇಷ್ಠರು? ? ಎರಡೂ ಪಂಗಡದವರು ತಮ್ಮ ಶ್ರೇಷ್ಠತೆಯನ್ನು ಸಾಧಿಸಲು ಪ್ರಯತ್ನಿಸುತ್ತಿದ್ದ ರೀತಿ, ಅದರಿಂದ ಉದ್ಭವಿಸುವ ಸಾಮಾಜಿಕ ಸಂಘರ್ಷಗಳನ್ನು ಪ್ರತ್ಯಕ್ಷ ಕಂಡಿದ್ದ ಹಿನ್ನೆಲೆಯಲ್ಲಿ ನಿಜವಾದ ಮುಸಲ್ಮಾನನ ಲಕ್ಷಣಗಳನ್ನು

"ದಯೆಯ ಮಸೀದಿ ಕಟ್ಟುವವನು
ನಿಷ್ಠೆಯ ಜಮಖಾನೆ ಹಾಸುವವನು
ಸನ್ಮಾರ್ಗದ ಗಳಿಕೆಯೇ ಕುರಾನ್ ಎಂದು ಬಗೆಯುವವನು
ಪಾಪಕ್ಕೆ ನಾಚುವುದೇ ಸುಂತಿ ಎಂದು ತಿಳಿಯುವವನು
ಶೀಲವೇ ಉಪವಾಸ ಎಂದು ಅರಿತವನು
ಮುಸಲ್ಮಾನ, ನೀನಿಂಥ ಮುಸಲ್ಮಾನನಾಗು."
"ಸತ್ಯ–ಧರ್ಮವೇ ಕಾಬಾ. ಸತ್ಯವೇ ನಿನ್ನ ಪೀರನ ಕಲಮಾ.

ಸದಾಚರಣೆಯೇ ನಮಾಜು. ಶಾಂತ ಸ್ವಭಾವವೇ ತಸಬೀಹಪಿ
(ಜಪಮಾಲೆ)
ಮೌಲಾ (ಪ್ರಭು)ನೇ ನಿನ್ನ ಮರ್ಯಾದೆ ಕಾಯುವವನು"

ಎಂಬ ಮಾತುಗಳಲ್ಲಿ ಸ್ಪಷ್ಟಪಡಿಸುತ್ತಾರೆ.

"ಇನ್ನೊಬ್ಬರ ಅಧಿಕಾರವನ್ನು ಕಸಿದುಕೊಳ್ಳುವುದು
ಮುಸಲ್ಮಾನರು ಹಂದಿ ತಿಂದಂತೆ.
ಹಿಂದುಗಳು ಗೋವು ತಿಂದಂತೆ."

"ಐದು ನಮಾಜುಗಳು ಐದು ಹೊತ್ತು
ಐದೇ ಅವುಗಳ ಹೆಸರು.
ಮೊದಲನೆಯದು ಸತ್ಯ.
ಎರಡನೆಯದು ಹಲಾಲ
ಮೂರನೆಯದು ದಾನ
ನಾಲ್ಕನೆಯದು ಪವಿತ್ರ ಆಚರಣೆ
ಐದನೆಯದು ದೇವರ ಗುಣಗಾನ.
ಸತ್ಕರ್ಮದ ಕಲಮಾ ಓದಿರಿ
ಹೀಗೆ ಮುಸಲ್ಮಾನರೆನಿಸಿಕೊಳ್ಳಿರಿ."

"ಮುಸಲ್ಮಾನನೆನಿಸಿಕೊಳ್ಳುವುದು ಕಠಿಣವಾದುದು.
ಮೊದಲನೆಯದಾಗಿ ಅವನು ತನ್ನ ವಲಿಗಳು ಹೇಳಿದ
ದೀನ (ಧರ್ಮ)ವನ್ನು ಪ್ರೀತಿಸಬೇಕು.
ಅಹಂಕಾರದ ತುಕ್ಕನ್ನು ಕಳೆಯಬೇಕು.
ತನ್ನ ಸಂಪತ್ತನ್ನೆಲ್ಲ ಹಂಚಿ ಬಿಡಬೇಕು.
ದೀನದ ದಾರಿಯಲ್ಲಿ ಅಖಂಡ ವಿಶ್ವಾಸವಿರಿಸಬೇಕು.

ಜನನ–ಮರಣದ ಅಂತರವನ್ನು ಅಳಿಸಬೇಕು. ಪ್ರಭುವಿನ ಪ್ರಸನ್ನತೆಯನ್ನು ಶಿರಸ್ಸಿನಲ್ಲಿ ಧಾರಣ ಮಾಡಬೇಕು. ಹೀಗೆ ಮಾಡಿದಾಗ ಅವನು ಸರ್ವಜೀವ ಜಾತಿಗಳ ಮೇಲೆ ದಯೆ ತೋರುವವನು. ಹೀಗಿದ್ದರೆ ಅವನು ಮುಸಲ್ಮಾನನೆಂದೆನಿಸಿಕೊಳ್ಳುವನು."

"ಬ್ರಹ್ಮ ಜ್ಞಾನಿಯಾಗಿರುವವನೇ ಬ್ರಾಹ್ಮಣನು.
ಜಪ, ತಪ, ಸಂಯಮ ಮತ್ತು ಇತರ ಕಾರ್ಯಗಳನ್ನು
ಬ್ರಹ್ಮ ಜ್ಞಾನಕ್ಕಾಗಿಯೇ ಅವನು ಮಾಡುವನು.

ಶೀಲ–ಸಂತೋಷವೇ ಅವನ ಧರ್ಮ.
ಸಮಸ್ತ ಬಂಧನಗಳನ್ನು ಹರಿದೊಗೆದು ಮುಕ್ತನಾಗುವನು.
ಇಂಥ ಬ್ರಾಹ್ಮಣನು ಪೂಜ್ಯನು"

"ಕರ್ಮಶೂರನಾಗಿರುವವನೇ ಕ್ಷತ್ರಿಯನು
ಅವನು ಪುಣ್ಯ–ದಾನಗಳ ಸಾಕಾರ ಮೂರ್ತಿ
ಸುಪಾತ್ರನನ್ನು ಗುರ್ತಿಸಿ ಅವನಿಗೆ ದಾನ ಮಾಡುವ ಕ್ಷತ್ರಿಯನು
ಪ್ರಭು ಚರಣಗಳಲ್ಲಿ ಸ್ವೀಕೃತನು ಶ್ಲಾಘ್ಯನು.
ಅತ್ಯಾಸೆ, ಲೋಭ ಹಾಗೂ ಅಸತ್ಯಗಳನು ಗಳಿಸುವವನು
ತನ್ನ ಕರ್ಮಗಳಿಗೆ ಅನುಗುಣವಾಗಿ ಫಲವನ್ನು ಉಣ್ಣುವನು"

ನಿಜವಾದ ಮುಸಲ್ಮಾನ, ಬ್ರಾಹ್ಮಣ, ಕ್ಷತ್ರಿಯರೆಲ್ಲರಿಗೂ ಸಮಾನವಾದುದೇ ಪ್ರೀತಿ–ದಯೆ–ತ್ಯಾಗ ಈ ಸದ್ಗುಣಗಳಿಲ್ಲದ ಯಾವ ಜಾತಿಯಿಂದ ಏನು? ಪ್ರಯೋಜನ? ಈ ಸದ್ಗುಣಗಳಿಲ್ಲದ ವ್ಯಕ್ತಿ ಯಾವ ಜಾತಿಯವನಾದರೆ ಏನು ಅವನಿಂದ ಸಮಾಜಕ್ಕೆ ಯಾವ ಲಾಭ? ಎಂದು ಪ್ರಶ್ನಿಸುವುದರ ಮೂಲಕ, ಮಾನವ, ಮಾನವನಾಗಿ ಈ ಭೂಮಿಯ ಮೇಲೆ ಸಂತೋಷದಿಂದ ಬಾಳುವೆ ಮಾಡಬೇಕಾದರೆ ಜಾತಿ ಮುಖ್ಯವಲ್ಲ. ನೀತಿ ಮುಖ್ಯವೆಂಬುದನ್ನು ಮೇಲಿನ ವಚನಗಳಲ್ಲಿ ಖಚಿತ ಗೊಳಿಸಿದ್ದಾರೆ.

ಸರ್ವಜಾತಿಗಳೂ ಸಮಾನವೇ. ಏಕೆಂದರೆ ಸರ್ವಮಾನವರೂ ಸಮಾನರೇ. ಎಲ್ಲವೂ, ಎಲ್ಲರೂ ಆ ಪರಮಾತ್ಮನ ಸೃಷ್ಟಿಯೇ ಆಗಿರುವಾಗ ಮೇಲು–ಕೀಳುಗಳಿಗೆ, ಶುದ್ಧಾ–ಅಶುದ್ಧಗಳಿಗೆ ಸ್ಥಳವೆಲ್ಲಿ ಎನ್ನುತ್ತಾರೆ ನಾನಕ್.

"ಜಾತಿಯ ಅಭಿಮಾನವು ವ್ಯರ್ಥ.
ಜಾತಿಯ ಹೆಸರು ನಿರರ್ಥಕ.
ಎಲ್ಲ ಪ್ರಾಣಿಗಳೂ ಒಂದೇ ಛಾಯೆಯ
ಕೆಳಗೆ ಇರುವಾಗ
ಕೆಲವರು ಮಾತ್ರ ಉತ್ತಮರೆಂದು
ಹೇಳಿಕೊಳ್ಳುವರು.
ಶ್ರೀ ಚರಣದಲ್ಲಿ ಆದರ ಪಡೆದಾಗಲೇ
ಅವರ ಉತ್ತಮತನ ತಿಳಿಯುವುದು.
"ಹೃದಯದ ಕೊಳೆಯೇ ದುರಾಸೆ.
ನಾಲಿಗೆಯ ಕೊಳೆಯೇ ಅಸತ್ಯ.

ಇನ್ನೊಬ್ಬರ ಧನ, ಮತ್ತೊಬ್ಬರ ಪತ್ನಿಯ
ಬಯಸುವುದೇ ಕಣ್ಣಿನ ಕೊಳೆ.
ಚಾಡಿಯ ಮಾತನು ಕೇಳುವುದೇ
ಕಿವಿಗಳ ಕೊಳೆ.
ಮೊದಲು ಈ ಕೊಳೆಗಳಿಂದ
ಬಿಡುಗಡೆ ಹೊಂದಿ ನಂತರ
ಶುದ್ಧಾ-ಶುದ್ಧತೆಯ ಬಗ್ಗೆ
ತರ್ಕಕೆ ಬನ್ನಿ"

ಎನ್ನುವುದು ನಾನಕರ ಸವಾಲು.

ದೇಹದಲ್ಲಿ ಮಲಿನತೆ ಪ್ರತಿಕ್ಷಣವೂ ಉತ್ಪತ್ತಿಯಾಗುತ್ತಲೇ ಇರುತ್ತದೆ. ಅದನ್ನು ಶುದ್ಧಗೊಳಿಸಿಕೊಂಡು ನಾವು ಆರೋಗ್ಯದಿಂದ ಇರಲು ಹೇಗೆ ಪ್ರಯತ್ನಿಸುತ್ತೇವೆಯೋ, ಹಾಗೆಯೇ ಸಮಾಜದಲ್ಲಿನ ಮಲಿನತೆಯನ್ನೂ ಕಾಲ-ಕಾಲಕ್ಕೆ ತೊಳೆದು, ಸಮಾಜದ ಶುದ್ಧತೆಯ ಕಡೆಗೆ ಗಮನ ಹರಿಸುವುದು ಧರ್ಮಗುರುಗಳ ಪ್ರಥಮ ಕರ್ತವ್ಯ ಎಂಬುದನ್ನು ನಾನಕ್ ಕಾರ್ಯತಃ ಮಾಡಿ ತೋರಿಸಿದ್ದಾರೆ.

ಮಾನವ ಜನಾಂಗವೆಲ್ಲಾ ಒಂದೇ. ಯಾವ ಮತಕ್ಕೆ, ಯಾವ ಜಾತಿಗೆ ಸೇರಿದ್ದಾನೆ ಎಂಬ ಕಾರಣಕ್ಕಾಗಿ ಮನುಷ್ಯ ಗೌರವಾನ್ವಿತನಾಗುವುದಿಲ್ಲ.

ಭಗವಂತನ ಸೃಷ್ಟಿಯೇ ಆದ ಇತರ ಮಾನವರ ಆತ್ಮದೊಡನೆ ಸಂವೇದನೆ ಪಡೆದ ಒಬ್ಬ ಸಹ ಮಾನವನೆಂಬ ಕಾರಣಕ್ಕಾಗಿ ವ್ಯಕ್ತಿಗೆ ಗೌರವ ಸಲ್ಲತಕ್ಕದ್ದು ಎಂದು ಗುರುನಾನಕ್ ಆದಿಯಾಗಿ ಎಲ್ಲಾ ಸಿಖ್ ಗುರುಗಳು ಕಾಯಾ-ವಾಚಾ-ಮನಸಾ ಪ್ರತಿಪಾದಿಸಿ-ನಡೆದು ತೋರಿ-ಜಾತೀಯತೆಯ ಪಂಕದಲ್ಲಿ ಮುಳುಗಿ-ಗತಿಸಿ ಹೋಗುತ್ತಿದ್ದ ಸಮಾಜವನ್ನು ಅದರಿಂದ ಪಾರು ಮಾಡಲು ಯತ್ನಿಸಿದ್ದಾರೆ.

ಸ್ತ್ರೀಗೆ ಸಲ್ಲಬೇಕಾದ ಗೌರವ

ಜಾತೀಯತೆಯ ಪ್ರತಿಪಾದನೆಯಿಂದ-ಅಂತ್ಯಜರನ್ನು ಸಮಾಜದ ಹೀನ ವರ್ಗವನ್ನಾಗಿ ಪರಿವರ್ತಿಸಿದಂತೆಯೇ; ಪುರುಷ ಪ್ರಧಾನ ಸಮಾಜ ಸ್ತ್ರೀಯರನ್ನು ತನ್ನ ಮೃಗೀಯ ಬಲದಿಂದ ತನ್ನ ಅಧೀನ ಮಾಡಿಕೊಳ್ಳುವುದರ ಜೊತೆಗೆ, ತನ್ನಂತೆಯೇ ಮೆದುಳಿನ ಶಕ್ತಿಯನ್ನು ಪಡೆದ ಆಕೆಗೆ ವಿದ್ಯಾಭ್ಯಾಸ ಸೌಲಭ್ಯವನ್ನು ಕಡೆಗಣಿಸಿ, ಆಕೆಯ ಬೌದ್ಧಿಕ ಬೆಳವಣಿಗೆಯನ್ನು ಸ್ಥಗಿತಗೊಳಿಸಿ, ಆಕೆಯ

ವಿಕಾಸವನ್ನು ಕುಂಠಿತಗೊಳಿಸಿತು. ಸ್ತ್ರೀಗೆ ಯಾವ ರೀತಿಯ ಸ್ವಾತಂತ್ರ್ಯವನ್ನು ಕೊಡಬಾರದು ಎಂಬುದೇ ಪುರುಷ ಸಮಾಜದ ಆಕಾಂಕ್ಷೆ.

ಸ್ತ್ರೀಗೆ ಸ್ವಾತಂತ್ರ ದೊರೆತರೆ ಆಕೆ ಪುರುಷನಿಗಿಂತಲೂ ಪ್ರಬಲ ಸ್ಥಾನಗಳನ್ನು ಗಳಿಸಿಕೊಂಡು ಪುರುಷನನ್ನು ಕಡೆಗಣಿಸಬಹುದೆಂಬ ಆಂತರಿಕ ಭಯವೇ ಇಂತಹ ಕೃತ್ಯಗಳಿಗೆ ಮೂಲ ಪ್ರೇರಣೆ. ಸ್ತ್ರೀ ಹುಡುಗಿಯಾಗಿರುವಾಗ ತಂದೆಯ ಅಧೀನದಲ್ಲೂ, ಯೌವ್ವನದಲ್ಲಿ ಪತಿಯ ಅಧೀನದಲ್ಲೂ, ವೃದ್ಧಾಪ್ಯದಲ್ಲಿ ಮಕ್ಕಳ ಅಧೀನದಲ್ಲೂ ಇರಬೇಕೆಂದು ಕಡ್ಡಾಯಗೊಳಿಸುವುದರ ಜೊತೆಗೆ ಸ್ತ್ರೀ ಸ್ವಾತಂತ್ರ್ಯಕ್ಕೆ ಅರ್ಹಳಲ್ಲ ಎಂದು ಧರ್ಮ ಶಾಸ್ತ್ರಗಳು ಘೋಷಿಸಿದವು.

ಈ ರೀತಿ ಸ್ತ್ರೀಯರನ್ನು ಕಡೆಗಣಿಸಿದ್ದು ಹಿಂದು ಧರ್ಮ ಮಾತ್ರವಲ್ಲ. ಇಸ್ಲಾಂ, ಕ್ರಿಶ್ಚಿಯನ್ ಧರ್ಮಗಳೂ ಸ್ತ್ರೀಗೆ ಸಲ್ಲಬೇಕಾದ ಸ್ಥಾನ–ಮಾನಗಳನ್ನು ಧಾರ್ಮಿಕ ಹಿನ್ನೆಲೆಯಲ್ಲಿಯೇ ನಿರಾಕರಿಸಿವೆ.

ವಿಧವೆಯ ದರ್ಶನ ಅಮಂಗಳಕರ. ಮನೆಯಲ್ಲಿ ಅಥವಾ ಸಮಾಜದಲ್ಲಿ ನಡೆಯುವ ಯಾವುದೇ ಮಂಗಳ ಕಾರ್ಯದಲ್ಲೂ ಆಕೆ ಭಾಗವಹಿಸಲು ಅನರ್ಹಳು ಎಂದು ನಿಯಮಿಸುವುದರ ಜೊತೆಗೆ ಗಂಡ ಸತ್ತ ನಂತರ ಬಲವಂತದಿಂದ ಆಕೆಯನ್ನು ಪತಿಯ ಶವದೊಂದಿಗೆ – ಚಿತೆಗೆ ಅರ್ಪಿಸುತ್ತಿದ್ದ ಸತಿ ಪದ್ಧತಿಯನ್ನು ಹಿಂದು ಧರ್ಮ ಪ್ರೋತ್ಸಾಹಿಸಿದೆ. ಯುದ್ಧಗಳಲ್ಲಿ ರಾಜರುಗಳು ಸೋತಾಗ ಅವರ ಅಂತಃಪುರದ ಸ್ತ್ರೀಯರೆಲ್ಲಾ ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದ ಜೋಹರ್ ಪದ್ಧತಿಯನ್ನು ಬೆಂಬಲಿಸಿದೆ.

ಇಷ್ಟು ಹೀನ ಸ್ಥಿತಿಯಲ್ಲಿದ್ದ ಸ್ತ್ರೀಯರನ್ನು ಗುರು ನಾನಕರು ಪುರುಷನಷ್ಟೇ ಸಮಾನ ಸ್ಥಾನಕ್ಕೆ ಎತ್ತಲು ಪ್ರಯತ್ನಿಸಿದ್ದಾರೆ. ಬಾದಷಹ ಅಕ್ಬರ್ ಸತಿ ಪದ್ಧತಿಯ ವಿರುದ್ಧ ಧ್ವನಿ ಎತ್ತುವ ಮೊದಲೇ ಗುರು ನಾನಕರು ಸತಿ ಪದ್ಧತಿಯಂತಹ ಸಾಮಾಜಿಕ ಅನಿಷ್ಟದ ಬಗ್ಗೆ ತಮ್ಮ ತೀವ್ರವಾದ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದರು.

"ಹೆಣ್ಣಿನಿಂದ ಹುಟ್ಟು, ಹೆಣ್ಣಿನ ಹೊಟ್ಟೆಯಲ್ಲೇ ಪಾಲನೆ, ಹೆಣ್ಣಿನೊಡನೆ ನೆಂಟಸ್ತನ ಮಾಡಿದೆವು. ಮದುವೆಯಾದೆವು. ಹೆಣ್ಣಿನಿಂದ ಜಗತ್ತಿನೊಡನೆ ಮೈತ್ರಿ, ಹೆಣ್ಣಿನಿಂದಲೇ ಮುಂದುವರಿಯುವುದು ವಂಶ. ಒಂದು ಹೆಣ್ಣು ಸತ್ತರೆ ಇನ್ನೊಂದು ಹೆಣ್ಣನ್ನು ಹುಡುಕುವೆವು. ಹೆಣ್ಣಿನಿಂದಲೇ ಮಾನ ಸನ್ಮಾನ ದೊರೆಯುವುದು. ಹೆಣ್ಣಿಗೆ ಅಪಶಬ್ದ ಏಕೆ ನುಡಿಯುವಿರಿ? ಹೆಣ್ಣಿನಿಂದಲೇ ರಾಜರದೂ ಹುಟ್ಟು. ಹೆಣ್ಣಿನಿಂದ ಹೆಣ್ಣಿನ ಹುಟ್ಟು. ಹೆಣ್ಣಿಲ್ಲದೆ ಯಾರೂ ಇಲ್ಲ. ಹೆಣ್ಣನ್ನು ಹೊರತುಪಡಿಸಿದರೆ ಕೇವಲ ಅವನೊಬ್ಬನೇ (ಭಗವಂತ) ಸತ್ಯ.

ಈ ಮಾತುಗಳು ಸ್ತ್ರೀಯನ್ನು ಸಾಮಾಜಿಕವಾಗಿ ಪುರುಷನಂತೆಯೇ ಪರಿಗಣಿಸಬೇಕು ಎಂಬುದನ್ನು ಒತ್ತಿ ಹೇಳುತ್ತವೆ. ಒಂದು ಸಮಾಜ ಸರ್ವತೋಮುಖವಾಗಿ ವಿಕಾಸ ಹೊಂದಬೇಕಾದರೆ, ಆ ಸಮಾಜದಲ್ಲಿನ ಎಲ್ಲಾ ಸ್ತ್ರೀ ಪುರುಷರೂ ವಿದ್ಯಾವಂತರೂ, ವಿವೇಕಿಗಳೂ, ಕರ್ತೃತ್ವಶಾಲಿಗಳೂ ಆಗಬೇಕು.

ಸ್ತ್ರೀಗೆ ವಿದ್ಯಾಭ್ಯಾಸ ಸೌಲಭ್ಯವನ್ನು ಒದಗಿಸದೆ, ಸ್ವಾತಂತ್ರ್ಯ ನೀಡದೆ, ಪುರುಷ ಸ್ವಾರ್ಥದಿಂದ, ಸ್ವಸಂತೋಷಕ್ಕಾಗಿ ಮಾತ್ರ ಸ್ತ್ರೀಯರನ್ನು ಗುಲಾಮಳಂತೆ ನಡೆಸಿಕೊಂಡರೆ ಆ ಸಮಾಜ ಏಳಿಗೆಯನ್ನು ಸಾಧಿಸಲಾರದು ಎಂಬುದನ್ನು ನಾನಕರು ಮನಗಂಡಿದ್ದರು. ವಿಧವೆಯನ್ನು ಅಮಂಗಳೆಯೆಂದು ಪರಿಗಣಿಸುವ; ಧಾರ್ಮಿಕ ಸಮಾರಂಭಗಳಿಗೆ ಅವಳನ್ನು ದೂರವಿಡುವ ಪ್ರಯತ್ನಗಳನ್ನು ಖಂಡಿಸುತ್ತಾ.

"ಪುರುಷರಂತೆಯೇ ಸ್ತ್ರೀಯರಿಗೂ
ದೈವಾನುಗ್ರಹದಲ್ಲಿ ಪಾಲಿದೆ.
ಧಾರ್ಮಿಕ ಸಮಾರಂಭಗಳಲ್ಲಿ
ಸ್ತ್ರೀಯರು ಪುರುಷರಿಗೆ
ಸರಿಸಮವಾದ ಹೊಣೆಗಳನ್ನು
ಹೊಂದಿದ್ದಾರೆ"

ಎಂಬುದಾಗಿ ನಾನಕರು ಸ್ತ್ರೀಯರ ಪಾತ್ರದ ಔಚಿತ್ಯವನ್ನು ಎತ್ತಿಹಿಡಿದಿದ್ದಾರೆ. ಗುರುಗೋವಿಂದ ಸಿಂಗ್‌ರು ಸ್ತ್ರೀಯನ್ನು ಪುರುಷನ ಪ್ರಜ್ಞೆ ಎಂದು ಕರೆದು, ಸ್ತ್ರೀಗೆ ನ್ಯಾಯವಾಗಿ ಸಲ್ಲಬೇಕಾದ ಅತ್ಯುಚ್ಚ ಮರ್ಯಾದೆಯನ್ನು ಸಲ್ಲಿಸಿದ್ದಾರೆ.

ಧಾರ್ಮಿಕ ಡಾಂಭಿಕತೆಯ ಬಗ್ಗೆ

ಭಾರತದ ಸಾಮಾನ್ಯ ಜನತೆ ಆಧ್ಯಾತ್ಮ ಪ್ರಪಂಚದ ಸನ್ಯಾಸಿಗಳಿಗೆ, ಯೋಗಿಗಳಿಗೆ ಅತ್ಯುಚ್ಚ ಗೌರವವನ್ನು ಸಲ್ಲಿಸುತ್ತಾ ಬಂದಿದೆ.

ಸಾಮಾನ್ಯವಾಗಿ ಸನ್ಯಾಸಿಗಳು ಮತ್ತು ಯೋಗಿಗಳು ಉಳಿದ ಸಾಮಾನ್ಯ ಜನರಂತೆ ಯಾವುದೇ ಸಾಮಾಜಿಕ ಕಾರ್ಯಗಳಲ್ಲಿ ಭಾಗವಹಿಸುವುದಿಲ್ಲ. ಇವರುಗಳಿಗೆ ಕುಟುಂಬದ ಹೊಣೆಗಾರಿಕೆಯೂ ಇಲ್ಲ. ಭೈರಾಗಿ, ಸನ್ಯಾಸಿ, ಅವಧೂತ, ಯೋಗಿ, ಇತ್ಯಾದಿ ಹೆಸರುಗಳಿಂದ ಕರೆಸಿಕೊಳ್ಳುವ ಈ ಜನ ಸದಾ ಪರಮಾತ್ಮನ ಧ್ಯಾನದಲ್ಲಿ ಮಗ್ನರಾಗಿ, ಸಮಾಜಕ್ಕೆ ಸ್ವಾರ್ಥರಹಿತ

ಸೇವೆಯನ್ನು ಸಲ್ಲಿಸಬೇಕು ಎಂಬುದು ಗುರು ನಾನಕರ ಮತ. ಸಮಾಜಕ್ಕೆ ಒಳಿತನ್ನು ಮಾಡದ ಯಾವುದೇ ಕಾರ್ಯವೂ ಪ್ರಯೋಜನವಿಲ್ಲದ್ದು.

"ಹಿಂದು ಧರ್ಮವನ್ನು ಪ್ರವೇಶ ಮಾಡುವವನಿಗೆ ಮಂತ್ರ ಪಠಿಸಿ ಜನಿವಾರ ಹಾಕುವರು. ಜನಿವಾರ ಧರಿಸಿ ದುಷ್ಕರ್ಮ ಮಾಡುವನು. ಸ್ನಾನಾದಿಯಿಂದ ಅವನಿಗೇನೂ ಲಾಭವಿಲ್ಲ. ಮುಸಲ್ಮಾನನು ತನ್ನ ಧರ್ಮವನ್ನು ಕೊಂಡಾಡುವನು. ಗುರು ಪೀರನನ್ನು ತೊರೆದರೆ ಅವನು (ದರಗಾದಲ್ಲಿ) ಯಾವ ಸ್ಥಾನವನ್ನು ಪಡೆಯನು. ಗುರು ತೋರಿಸಿದ ಮಾರ್ಗದಲ್ಲಿ ನಡೆಯುವವರು ಯಾರು? ಸತ್ಕರ್ಮದ ವಿನಾ ಸ್ವರ್ಗ ಹೇಗೆ ಪಡೆಯುವಿರಿ?" ಎಂದು ಪ್ರಶ್ನಿಸುವುದರ ಮೂಲಕ – ಕೇವಲ ಧಾರ್ಮಿಕ ಲಾಂಛನಗಳನ್ನು ಧರಿಸುವುದರ ಮೂಲಕ ವ್ಯಕ್ತಿ ಒಳ್ಳೆಯವನಾಗುವುದಿಲ್ಲ.

ಸ್ನಾನ, ಸಂಧ್ಯಾ ವಂದನೆ, ನಮಾಜಿನ ನಾಟಕ ಇವುಗಳಿಂದ ಪರಮಾತ್ಮನನ್ನು ಮರುಳು ಮಾಡಲು ಸಾಧ್ಯವಿಲ್ಲ.

"ಕಾಯವನ್ನು ಪ್ರಕ್ಷಾಲನ ಮಾಡಿಕೊಂಡು ಕುಳಿತವರು ಸ್ವಚ್ಛರಲ್ಲ. ಮನದಲ್ಲಿ ಪ್ರಭುವಿನ ನಿವಾಸವಿದ್ದವರೇ ನಿರ್ಮಲರು."

"ಕುಬುದ್ಧಿಯು ಡೊಂಬಳು. ನಿರ್ದಯಿ ಕೊಲೆಗಡುಕಳು. ಪರನಿಂದೆ ಶರೀರದಲ್ಲಿರುವ ಭಂಗಿಯವಳು, ಕ್ರೋಧ ಚಾಂಡಾಲಿನಿಯು. ಮಡಿಯ ಗೆರೆಯನ್ನು ಎಳೆಯುವುದರಿಂದೇನು ಪ್ರಯೋಜನ, ಈ ನಾಲ್ವರು ನಿಮ್ಮ ಅಂಗ–ಸಂಗದಲ್ಲಿ ಕುಳಿತಿರುವಾಗ?" ಎಂದು ಮನ ಶುದ್ಧವಾಗದೆ ಯಾವ ಧರ್ಮಕ್ಕೂ ಯಾವುದೇ ಅರ್ಥವೂ ಇಲ್ಲವೆಂಬುದನ್ನು ನೇರವಾದ ಮಾತುಗಳಲ್ಲೇ ನುಡಿಯುತ್ತಾರೆ.

ಸತ್ಯವೇ ಸಂಯಮ, ಸತ್ಕರ್ಮಗಳೇ ಗೆರೆಗಳು. ಹರಿ ನಾಮಸ್ಮರಣೆಯೇ ಸ್ನಾನವೆಂದು ನಿಜವಾದ ಮಡಿವಂತಿಕೆಯನ್ನು ಉಪದೇಶಿಸುತ್ತಾರೆ.

"ಯೋಗಿಗಳು – ಮಂತ್ರದಿಂದ, ಪವಾಡಗಳಿಂದ ಮನುಷ್ಯ ಜಗತ್ತನ್ನು ನೋವಿನಿಂದ, ದುಃಖದಿಂದ, ಬಡತನದಿಂದ ಪಾರು ಮಾಡಲು ಸಾಧ್ಯವೇ?" ಎಂದು ಆಧ್ಯಾತ್ಮಿಕ ಜಗತ್ತಿನ ಗುತ್ತಿಗೆದಾರರಿಗೆ ಸವಾಲು ಹಾಕುತ್ತಾರೆ.

"ಸಿದ್ಧಿಯ ಹೆಸರಿನಲ್ಲಿ ತಾವು ಗಳಿಸಿದ ಅಪೂರ್ವ ಶಕ್ತಿಯಿಂದ ಪವಾಡಗಳನ್ನು ತೋರಿ, ಜನ ಸಾಮಾನ್ಯರನ್ನು ಬೆರಗು ಮಾಡುವುದರಿಂದ, ಮರಳು ಮಾಡುವುದರಿಂದ ಸಾಮಾನ್ಯ ಮಾನವನಿಗೆ ಆಗಿರುವ ಪ್ರಯೋಜನವೇನು ?" ಎಂದು ಪ್ರಶ್ನಿಸುತ್ತಾರೆ.

ಮಠಾಧಿಪತಿಗಳಾಗಿ ಜಗತ್ತಿಗೆ ಉಪದೇಶ ಮಾಡುವವರು, ತಮ್ಮ ಆಸನ ಬಿಟ್ಟು ಹೇಗೆ ಸತ್ಯವನ್ನು, ಶಾಂತಿಯನ್ನು ಪಡೆಯುವರು. ಅವರು ಮಮತೆ, ಮೋಹ, ಕಾಮಿನಿಯ ಹಿತೈಷಿಗಳು. ಅವರು ಅವಧೂತರಾಗಿಯೂ ಇರುವುದಿಲ್ಲ, ಗೃಹಸ್ಥರಾಗಿಯೂ ಇರುವುದಿಲ್ಲ" ಎಂದು ಮಠಾಧಿಪತಿಗಳ ಇಬ್ಬಂದಿಯ ಬದುಕನ್ನು ಬಯಲು ಮಾಡುತ್ತಾರೆ.

ತಾವು ದೈವವನ್ನು ನಂಬಿದವರು ಎಂದು ಜಗತ್ತಿಗೇ ಸಾರಿ, ತಮ್ಮ ಹೊಟ್ಟೆಪಾಡಿಗಾಗಿ ಭಿಕ್ಷೆ ಬೇಡುವ ಜನರನ್ನು ಕಂಡು ಗುರು ನಾನಕರಿಗೆ ಅಸಹ್ಯವಾಗುತ್ತದೆ.

"ಯೋಗಿಗಳೇ, ನಿಮ್ಮ ಆಸನದ ಮೇಲೆ ಭದ್ರವಾಗಿ ಕೂತಿರಿ. ದುಃಖಗಳು ದೂರ ಓಡಿ ಹೋಗುವುವು. ಮನೆ ಮನೆ ತಿರುಗಿ ಬೇಡಲಿಕ್ಕೆ ನಿಮಗೆ ನಾಚಿಕೆಯುಂಟಾಗುವುದಿಲ್ಲವೆ ? ಗೀತಗಳನ್ನು ಹೇಳುವಿರಿ. ಆದರೆ ನಿಮ್ಮನ್ನು ನೀವು ಅರಿಯುವುದಿಲ್ಲ. ಹೀಗಿದ್ದರೆ ನಿಮ್ಮ ಪರಿತಾಪ ಹೇಗೆ ದೂರಾದೀತು? ಭಸ್ಮ ಲೇಪಿಸಿಕೊಂಡು ಆಡಂಬರ ತೋರಿಸುತ್ತೀರಿ. ಮಾಯಾ ಮೋಹದಲ್ಲಿ ಸಿಲುಕಿ ಯಮದಂಡವನ್ನು ಸಹಿಸುವಿರಿ. ಒಡೆದ ಕಪ್ಪರದಲ್ಲಿ ಭಾವದ ಭಿಕ್ಷೆ ನಿಲ್ಲುವುದಿಲ್ಲ. ಯತಿಗಳೆನ್ನಿಸಿಕೊಳ್ಳುವಿರಿ, ವೀರ್ಯವನ್ನು ರಕ್ಷಿಸಿಕೊಳ್ಳಲಾರಿರಿ. ತಾಯಿ ಎಂದು ಬೇಡುವಿರಿ. ಆದರೆ ಆಕೆಯನ್ನೆ ಮೋಹಿಸುವಿರಿ. ಓ ನಿರ್ದಯರೆ, ಒಳಗಿಲ್ಲ ಜ್ಯೋತಿ. ಅಡಿಯಿಂದ ಮುಡಿಯವರೆಗೆ ಪ್ರಪಂಚದ ಜಂಜಾಟದಲ್ಲಿ ಮುಳುಗಿರುವಿರಿ. ಚಿಂದಿಗಳ ದುಪ್ಪಟ ಹೊದೆದು ವೇಷಧಾರಿಗಳಾಗುವಿರಿ. ಡೊಂಬರಂತೆ ಬಹಳ ಆಟಗಳ ಆಡುವಿರಿ. ಚಿಂತೆಯೆಂಬ ಬೆಂಕಿ ಮನವನ್ನು ಸುಡುತ್ತಿರುವುದು. ಸತ್ಕರ್ಮಗಳನ್ನು ಮಾಡದೆ ಹೇಗೆ ಭವ ಸಾಗರ ದಾಟುವಿರಿ. ವಿದ್ಯಾ-ವಿಜ್ಞಾನ ಹೀನರೇ ಹೇಗೆ ಪಡೆಯುವಿರಿ ಮುಕ್ತಿ ?" ನಾಲಿಗೆಯೆಂಬ ಇಂದ್ರಿಯವು ರುಚಿಗೆ ಮೋಹಗೊಂಡಿದೆ. ಇಂದ್ರಿಯಗಳು ಪಶು ಸಮಾನ ಎಂದು ಡಾಂಭಿಕತೆಯನ್ನು ಕತ್ತಿಯ ಅಲುಗಿನಂತಹ ಮಾತುಗಳಿಂದ ಕತ್ತರಿಸಿದ್ದಾರೆ ಗುರು ನಾನಕರು.

ಅಧಿಕಾರಸ್ಥನಾದ ಮುಸಲ್ಮಾನರನ್ನು ಮೆಚ್ಚಿಸಲು, ಅವರಿಂದ ಉಪಕೃತರಾಗಲು ಶ್ರಮಿಸುತ್ತಾ, ಮತ್ತೆ ತಾವು ಹಿಂದುಗಳು ಎಂದು ಹೇಳಿಕೊಳ್ಳುತ್ತಾ ತೋರಿಕೆಯ ಹಿಂದುಗಳಾಗಿರುವ ಜನರನ್ನು ಕುರಿತು "ಸಗಣಿಯು ನಿಮ್ಮನ್ನು ಪವಿತ್ರ ಮಾಡಲಾರದು. ನೀವು ಧೋತರ ಉಟ್ಟಿರುವಿರಿ. ಹಣೆಯ ಮೇಲೆ ಗಂಧದ ತಿಲಕ ಹಚ್ಚಿಕೊಂಡಿರುವಿರಿ. ಆದರೆ ಮ್ಲೇಚ್ಛರು ಕೊಟ್ಟ ಧಾನ್ಯವನ್ನು ಉಣ್ಣುವಿರಿ. ಮನೆಯಲ್ಲಿ ಪೂಜೆ ಮಾಡುವಿರಿ. ಹೊರಗಡೆ

ಕುರಾನ್ ಓದುವಿರಿ. ಎಲ್ಲಾ ನಡತೆ–ನಡಾವಳಿ, ರೀತಿ–ನೀತಿ ತುರಕರದು. ಈ ತೋರಿಕೆ ಆಡಂಬರ ಎಲ್ಲಾ ಬಿಟ್ಟು ಬಿಡಿ" ಎಂದು ಕಳಕಳಿಯಿಂದ ಬುದ್ಧಿ ಹೇಳುತ್ತಾರೆ.

ಯೋಗವು ದುಪ್ಪಟಿಯಲ್ಲಿಲ್ಲ. ದಂಡದಲ್ಲಿಲ್ಲ. ಭಸ್ಮಲೇಪನದಲ್ಲಿಲ್ಲ. ಮುದ್ರೆಯಿಂದ ಯೋಗಿಯಾಗುವುದಿಲ್ಲ. ತಲೆ ಬೋಳಿಸಿಕೊಳ್ಳುವುದರಲ್ಲಿ ಯೋಗವಿಲ್ಲ. ಮಾತಿನಿಂದ ಯೋಗವಾಗುವುದಿಲ್ಲ. ದೇಶ–ದೇಶಾಂತರಗಳ ಭ್ರಮಣದಿಂದ ಯೋಗಿಯಾಗುವುದಿಲ್ಲ. "ಮೋಹಗಳ ನಡುವೆ ಯಾರು ನಿರ್ಲಿಪ್ತನಾಗಿ ಉಳಿಯಬಲ್ಲನೋ, ಅವನೇ ನಿಜವಾದ ಯೋಗಿ. ಪ್ರಪಂಚದಲ್ಲಿ ಇದ್ದೂ ಇಲ್ಲದಂತೆ ಸಮಾಜದಲ್ಲಿ ಉಳಿದು ತನ್ನ ಹಾಗೂ ಸಮಾಜದ ವಿಕಾಸದಲ್ಲಿ ನಿರ್ಲಿಪ್ತತೆಯಿಂದ ಯಾರು ಭಾಗವಹಿಸುತ್ತಾನೋ ಆತನೇ ಯೋಗಿ. ಸೃಷ್ಟಿಯ ಸಮಸ್ತವನ್ನೂ ಸಮಭಾವದಿಂದ ನೋಡುವಾತ ನಿಜವಾದ ಯೋಗಿ. ನಿಜವಾದ ಯೋಗಿ ಪ್ರಚಾರವನ್ನು ಬಯಸುವುದಿಲ್ಲ. ನಾನು ಎಂಬ ಅಹಂಕಾರದಿಂದ ಮುಕ್ತನಾಗಿ, ತನ್ನನ್ನು ಸಂಪೂರ್ಣವಾಗಿ ಭಗವದ್ ಇಚ್ಛೆಯ ಉಪಕರಣವನ್ನಾಗಿ ಅರ್ಪಿಸಿಕೊಂಡು ಬಿಟ್ಟಿರುತ್ತಾನೆ."

ಕೆಲವರು ಸಾಮಾನ್ಯ ವ್ಯಕ್ತಿಗಳು ಅಸಮಾನ್ಯವಾದ ಯೋಗ ಸ್ಥಿತಿಯನ್ನು ತಮ್ಮ ಶ್ರದ್ಧೆ – ನಿಷ್ಠೆಗಳಿಂದ ಸಾಧಿಸಲಾಗದೆ, ಸಾಧನೆಯ ಮಧ್ಯದಲ್ಲಿಯೇ ಆಕರ್ಷಣೆಗೆ ತುತ್ತಾಗಿ, ಕ್ಷುಲ್ಲಕವಾದ ಮಾಟ–ಮಂತ್ರಗಳ ಪ್ರದರ್ಶನದಿಂದ ಸಾಮಾನ್ಯ ಜನರನ್ನು ತಮ್ಮತ್ತ ಆಕರ್ಷಿಸಿ, ಪ್ರಸಿದ್ಧರಾಗುವ, ಶ್ರೀಮಂತರಾಗುವ ಪ್ರಯತ್ನದಲ್ಲಿ ಸಫಲರಾಗುತ್ತಾರೆ. ಯೋಗದ ಹೆಸರಿನಲ್ಲಿ ಜನತೆಯನ್ನು ದಾರಿ ತಪ್ಪಿಸುವ ಇಂತಹ ಬೂಟಾಟಿಕೆಯವರನ್ನು ನಾನಕ್ ಖಂಡಿಸುತ್ತಾರೆ.

"ಸ್ವತಃ ಜ್ಞಾನ ಶೂನ್ಯನು; ಆದರೆ ಜ್ಞಾನ ಗೀತಗಳನ್ನು ಹಾಡುವವನು.ಹಸಿದ ಮುಲ್ಲಾ ಮನೆಯಲ್ಲಿಯೇ ಮಸೀದಿ ಮಾಡಿಕೊಳ್ಳುವನು. ಹೊಟ್ಟೆಯ ಪಾಡಿಗಾಗಿ ದುಡಿಯಲಾರ. ಆದ್ದರಿಂದ ಕಿವಿಯಲ್ಲಿ ಕುಂಡಲ ಹಾಕಿಕೊಂಡು ಫಕೀರನಾಗಿ ಮಾನ–ಮರ್ಯಾದೆಯಿಲ್ಲದೆ, ಗುರುಪೀರ ಎನಿಸಿಕೊಂಡು ಮನೆ ಮನೆಗೆ ಬೇಡುತ್ತಾ ಹೊರಟನು." ಇಂಥ ಗುರು, ಪೀರರ ಕಾಲನ್ನು ಹಿಡಿಯಬೇಡಿರಿ. ದುಡಿಯಿರಿ, ತಿನ್ನಿರಿ, ಉಣ್ಣಿರಿ, ದಾನವನ್ನು ಮಾಡಿರಿ. ಹೀಗೆ ದುಡಿದುಣ್ಣುವ, ದಾನ ಮಾಡುವ ವ್ಯಕ್ತಿಗಳೇ ಪ್ರಭು ಪ್ರಾಪ್ತಿಯ ಮಾರ್ಗವನ್ನು ಗುರುತಿಸುವರು.

"ಮನಸ್ಸಿನಲ್ಲಿ ಖೊಟ್ಟಿತನ, ಮೋಸಗಾರಿಕೆ, ತನುವಿನಲ್ಲಿ ಕಳ್ಳತನ, ಮೈಗಳ್ಳತನ ಇಟ್ಟುಕೊಂಡು ತೀರ್ಥಕ್ಷೇತ್ರಗಳಲ್ಲಿ ಸ್ನಾನ ಮಾಡಲು ಹೊರಟಿರಿ.

ಆದರೆ ಅಲ್ಲಿ ಸ್ನಾನ ಮಾಡುವುದರಿಂದ ಎಷ್ಟು ಹೊಲಸು ತೊಳೆದು ಹೋಗಬೇಕಾಗಿತ್ತೋ ಅಷ್ಟು ತೊಳೆದು ಹೋಗಲಿಲ್ಲ. ಆದರೆ ಇಮ್ಮಡಿ ಹೊಲಸು ಅಂಟಿತು. ಈಸು–ಕಹಿ ಕುಂಬಳ ಕಾಯಿಯನ್ನು ಹೊರಗಿನಿಂದ ಎಷ್ಟು ತೊಳೆದರೇನು? ಒಳಗೆ ವಿಷವು ತುಂಬೇ ಇರುವುದು. ಸ್ನಾನ ಮಾಡದಿದ್ದರೂ ಸಾಧು ಸಾಧುವೆ? ಪವಿತ್ರನೇ. ಆದರೆ ಕಳ್ಳರು" ಸ್ನಾನ ಮಾಡಿದ ಮೇಲೂ ಕಳ್ಳರೇ ಎಂಬುದಾಗಿ ಡಾಂಭಿಕರಿಗೆ ಮೋಸ ಹೋಗಬೇಡಿ ಎಂದು ಎಚ್ಚರಿಸುವುದರ ಜೊತೆಗೆ ಸಾಧು ವೇಷದ ಡಾಂಭಿಕರನ್ನು ಮಾತಿನ ಸೂಜಿಯಲ್ಲಿ ಚುಚ್ಚುತ್ತಾರೆ.

"ತೃಪ್ತಿಯನ್ನು ಕಿವಿಯ ಉಂಗುರವನ್ನಾಗಿ, ವಿನಯವನ್ನು ಭಿಕ್ಷಾ ಪಾತ್ರೆಯನ್ನಾಗಿ ಭಗವದ್ ನಾಮದ ಏಕಾಗ್ರತೆಯನ್ನು ಬೂದಿಯನ್ನಾಗಿ, ದೇಹದ ಅಶಾಶ್ವತೆಯನ್ನು ಅಸ್ಥಿರತೆಯನ್ನು ಚಾಪೆಯನ್ನಾಗಿ ನಿಯಮವನ್ನು ಯೋಗ ದಂಡವನ್ನಾಗಿ ಮಾಡಿಕೊಂಡು ಭಗವಂತನಲ್ಲಿ ನಿಷ್ಠೆಯನ್ನು ಹೊಂದಿದ ವ್ಯಕ್ತಿ ತನ್ನನ್ನೂ ಗೆಲ್ಲುತ್ತಾನೆ. ಲೋಕವನ್ನೂ ಗೆಲ್ಲುತ್ತಾನೆ" ಅಂತಹ ಮಹಾತ್ಮನಿಗೆ ಸಾವಿರ ಸಾವಿರ ಪ್ರಣಾಮಗಳು ಎನ್ನುತ್ತಾರೆ ನಾನಕ್.

ಯಾರ ಕಿವಿಗೆ ಬ್ರಹ್ಮಾಂಡದ ಸಾಮರಸ್ಯದ ಧ್ವನಿ ಕೇಳುತ್ತಿರುತ್ತದೋ, ಯಾರ ಹೃದಯ ಭಗವದ್ ಸಾಕ್ಷಾತ್ಕಾರದಿಂದ ಆನಂದ ಪರವಶವಾಗಿರುತ್ತದೋ. ಅಂತಹ ವ್ಯಕ್ತಿ ಅಮೃತಪಾನ ಮಾಡಿದಂತೆ, ಅಂತಹ ವ್ಯಕ್ತಿ ಜಗತ್ತಿನ ಎಲ್ಲಾ ಕೊಳಕುಗಳ ಮಧ್ಯೆ ಅತ್ಯಂತ ಶುದ್ಧಾತ್ಮನಾಗಿ ಎದ್ದು ಕಾಣುತ್ತಾನೆ. ಇದೇ ನಿಜವಾದ ಯೋಗ ಸಾಧನೆ ಎನ್ನುತ್ತಾರೆ ನಾನಕ್.

"ನಿಜವಾದ ಯೋಗ ಇರುವುದು
ಸೇವೆಯಲ್ಲಿ, ಸಮಾನ ದೃಷ್ಟಿಯಲ್ಲಿ
ಅಹಂಕಾರವನ್ನು ಗೆದ್ದ ಸದ್‌ವಿನಯದಲ್ಲಿ"

ಎಂಬುದನ್ನು ಅನುಮಾನಕ್ಕೆ ಆಸ್ಪದವಿಲ್ಲದಂತೆ ಸ್ಪಷ್ಟಪಡಿಸುತ್ತಾರೆ.

ಸಾಂಸಾರಿಕ ವಸ್ತುಗಳ ಅಸ್ಥಿರತೆ

ವ್ಯಕ್ತಿ ಹುಟ್ಟುವುದು ಸಂಸಾರದಲ್ಲಿ. ಬೆಳೆಯುವುದು ಸಂಸಾರದಲ್ಲಿಯೇ. ಸಾವು ಬರುವ ತನಕ ಉಳಿಯುವುದೂ ಸಂಸಾರದಲ್ಲಿಯೇ. ಸಂಸಾರ ಅರ್ಥಾತ್ ಕುಟುಂಬ ಸಮಾಜದ ಒಂದು ಮುಖ್ಯ ಘಟಕ. ವ್ಯಕ್ತಿಯ ದೇಹ ಮನಸ್ಸುಗಳ ವಿಕಾಸಕ್ಕೆ ಕುಟುಂಬದ ಕೊಡುಗೆ ಅಪಾರ. ವ್ಯಕ್ತಿಯ ಮಾನಸಿಕ ಸಂಸ್ಕಾರ, ಸಾಮಾಜಿಕ ನಡತೆಗಳು ರೂಪಗೊಳ್ಳುವುದೂ ಸಂಸಾರದ ವಲಯದಲ್ಲಿಯೇ.

ತಾಯಿ–ತಂದೆ; ಅಜ್ಜ–ಅಜ್ಜಿ; ಅಣ್ಣ–ತಮ್ಮಂದಿರು; ಅಕ್ಕ–ತಂಗಿಯರು; ಸ್ನೇಹಿತರು, ಗಂಡ–ಹೆಂಡತಿ–ಮಕ್ಕಳು ಮುಂತಾದ ಸಂಬಂಧ ತಂತುಗಳು ವ್ಯಕ್ತಿತ್ವದ ನಾನಾ ಮುಖಗಳನ್ನು ರೂಪಿಸುತ್ತವೆ. ಅನಾಗರಿಕ ಸ್ಥಿತಿಯಿಂದ ನಾಗರಿಕ ಸ್ಥಿತಿಗೆ ವಿಕಾಸ ಹೊಂದಿದ ಮಾನವನ ಇತಿಹಾಸವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಒಂದು ಕುಟುಂಬದ ಎಲ್ಲಾ ಅವಗುಣಗಳೂ, ಗುಣಗಳು ಅನುವಂಶಿಕವಾಗಿ ವ್ಯಕ್ತಿಯ ಬೆಳವಣಿಗೆಯಲ್ಲಿ ಅಥವಾ ಅವನತಿಯಲ್ಲಿ ಭಾಗಿಗಳಾಗುತ್ತವೆ ಎಂಬುದನ್ನು ಗಮನಿಸಬಹುದಾಗಿದೆ.

ಮಾನವನ ಬದುಕಿನ ಪ್ರಥಮವೂ; ಬಲಿಷ್ಠವೂ ಆದ ಸಂಸಾರವನ್ನು ಮಾಯೆ ಎಂದು ಕರೆದು, ಅದರ ಆಕರ್ಷಣೆಯಿಂದ ಬಿಡುಗಡೆ ಹೊಂದದೆ ಭಗವದ್ ಸಾಕ್ಷಾತ್ಕಾರ ಸಾಧ್ಯವಿಲ್ಲವೆಂದು ಪ್ರಪಂಚದ ಎಲ್ಲಾ ಕಾಲದ, ಎಲ್ಲಾ ಧರ್ಮದ ಗುರುಗಳೂ ಬೋಧಿಸುತ್ತಿದ್ದಾರೆ. ಈ ಬೋಧನೆ ಎಷ್ಟು ಉಚಿತವಾದುದು? ಎಷ್ಟು ಅನುಚಿತವಾದುದು ಎಂಬ ಪ್ರಶ್ನೆ ಪ್ರತಿಯೊಂದು ಧರ್ಮದ ಹಿಂಬಾಲಕನನ್ನು ಒಂದಲ್ಲ ಒಂದು ಸಂದರ್ಭದಲ್ಲಿ ಕಾಡುತ್ತದೆ. ತತ್ವಜ್ಞಾನಿಗಳು ಮಾಯೆ ಎಂದು ಕರೆಯುವ ಸಂಸಾರ ಕೇವಲ ಕುಟುಂಬವನ್ನು ಮಾತ್ರ ಒಳಗೊಳ್ಳುವುದಿಲ್ಲ. ವ್ಯಕ್ತಿ ವ್ಯವಹರಿಸುವ ಲೌಕಿಕ ಪ್ರಪಂಚವನ್ನೆಲ್ಲಾ ಒಳಗೊಳ್ಳುತ್ತದೆ. ನಾವು ಬದುಕುತ್ತಿರುವ ಈ ಪ್ರಪಂಚವನ್ನೇ ಅವರು ಮಾಯೆ ಎಂದು ಕರೆದಾಗ, ನಾವು–ನೀವುಗಳೂ ಆ ಮಾಯೆಯ ಅವಿಭಾಜ್ಯ ಅಂಗಗಳೇ ಆಗುವುದಿಲ್ಲವೇ?

ಗುರು ನಾನಕರು ಕುಟುಂಬವನ್ನು ತೊರೆದು ಕಾಡಿಗೆ ಹೋಗುವುದನ್ನಾಗಲಿ, ಸಮಾಜವನ್ನು ತೊರೆದು ಒಂಟಿಯಾಗಿ ಇರುವುದನ್ನಾಗಲಿ ಪುರಸ್ಕರಿಸಲಿಲ್ಲ.

ವ್ಯಕ್ತಿಯೊಬ್ಬ ಕುಟುಂಬ, ಸಮಾಜಗಳ ಸದಸ್ಯನಾಗಿ ಇದ್ದುಕೊಂಡೇ, ಅನವರತ ಭಕ್ತಿಪೂರ್ವಕವಾಗಿ ಭಗವದ್ ಧ್ಯಾನದಿಂದ ಭಗವಂತನ ಕರುಣೆಗೆ ಪಾತ್ರವಾಗಬಹುದು ಎಂದು ಬೋಧಿಸಿದರು.

ಆದರೂ ಗ್ರಂಥ ಸಾಹೇಬ್‌ನಲ್ಲಿ ಸುಮಾರು ನಲವತ್ತು ರಚನೆಗಳಲ್ಲಿ ಸಾಂಸಾರಿಕ ವಸ್ತುಗಳ ಅಸ್ಥಿರತೆ ಮತ್ತು ಮಾಯಾಜಾಲದಿಂದ ಬಿಡುಗಡೆಯ ಅಗತ್ಯದ ಬಗ್ಗೆ ಪ್ರಸ್ತಾಪಿಸಿದ್ದಾರೆ.

> "ಹಣ ಹಾಗೂ ಹರೆಯ ಹೂವಿನ ಹಾಗೆ
> ನಾಲ್ಕು ದಿನಗಳಲ್ಲಿ ನಷ್ಟವಾಗುವುವು.
> ನೀರಿಳಿದ ಬಳಿಕ ನಾಲ್ಕೆಲೆಗಳ

ಎಲೆಗಳು ಬಾಡಿ ಹೋಗುವಂತೆ,
ಎಲ್ಲಿಯವರೆಗೆ ಹೊಸ ಹರೆಯ ಇರುವುದೋ.
ಪ್ರಿಯನೇ ಆನಂದವನ್ನು ಅನುಭವಿಸು.
ಸ್ವಲ್ಪೇ ದಿನ ಅದು ಇರುವುದು.
ಹರೆಯ ದಣಿದ ಅನಂತರ
ಈ ಅಂಗಿ ಹಳೆಯದಾಗುವುದು"

"ಸುಂದರ ದ್ವಾರಗಳ ಮನೆಗಳು
ಸಹಸ್ರಾರು ಗಟ್ಟಿ ಮುಟ್ಟಾದ ಕೋಟೆಗಳು
ಆನೆಗಳು, ಜೀನು ಸಹಿತವಾದ ಕುದುರೆಗಳು
ಲಕ್ಷಾಂತರ ಅಪಾರ ಸೈನ್ಯ.
ಇವುಗಳಲ್ಲಿ ಯಾವುದೂ
ಯಾರ ಜೊತೆಗೂ ಹೋಗಲಿಲ್ಲ.
ಎಲ್ಲರೂ ಹಣ್ಣಾಗಿ, ಸುಣ್ಣಾಗಿ ಸತ್ತರು.
ಎಲ್ಲವೂ ಸಾರಹೀನವಾದುದು,
ಬಂಗಾರ, ಬೆಳ್ಳಿಯ ಸಂಗ್ರಹ
ಧನ, ವಸ್ತು ಎಲ್ಲವೂ ಜಂಜಾಟ.
ಇವುಗಳ ದರ್ಪ ಸಮಸ್ತ ಪ್ರಪಂಚದ ಮೇಲೆ ಇರಬಹುದು.
ನಾಮ ವಿಹೀನನ ತಲೆಯ ಮೇಲೆ ಕಾಲನು ಇದ್ದೇ ಇರುವನು.
ಪಿಂಡವು ಬೀಳುವುದು. ಜೀವವು ಹೊರಟು ಹೋಗುವುದು."

"ಹೆಂಡತಿಯನ್ನು ಹಾಸಿಗೆಯ ಮೇಲೆ ಕಂಡು ಗಂಡನಿಗೆ
ಸಂತೋಷವಾಗುವುದು.
ಕುಂಕುಮ, ಚಂದನ ಹಚ್ಚಿಕೊಳ್ಳುವರು, ಬಟ್ಟೆ ತೊಡುವರು.
ರೂಪವನ್ನು ಸಿಂಗರಿಸಿಕೊಳ್ಳುವರು.
ಕೊನೆಗೆ ಮಣ್ಣಿನಲ್ಲಿ ಮಣ್ಣಾಗಿ ಬೆರೆಯುವರು.
ಮನೆ, ಮಠ ಎಲ್ಲವನ್ನೂ ತೊರೆದು ಹೋಗುವರು.
ಸರದಾರ, ಬಾದಶಾಹ, ರಾಜಾ, ರಾವ್, ಖಾನ
ಎನ್ನಿಸಿಕೊಳ್ಳುವವರು
ಸ್ವಾಭಿಮಾನದಿಂದ ಜ್ವಲಿಸುತ್ತಿರುವವರು.
ದಾವಾಗ್ನಿಯಲ್ಲಿ ಕಾನನವು ಸುಟ್ಟಂತೆ ಮನ ಮುಖನು

ನಾಮವನ್ನು ಮರೆತು ಬಿಟ್ಟವನು.
ಜಗತ್ತಿಗೆ ಬಂದು ಅಹಂಕಾರಪಡುತ್ತಿದ್ದವನು
ಕೊನೆಗೆ ಹೊರಟು ಹೋಗುವನು.
ಇಡೀ ಜಗತ್ತು ಕಾಡಿಗೆಯ ಕೊಠಡಿ, ತನು, ಮನಗಳು
ಬೂದಿಯಿಂದ ಮುಸುಕಿವೆ.''

“ಮಾಯೆ, ಮಾಯೆ, ಎನ್ನುತ್ತ ಸತ್ತು ಹೋದರು.
ಆದರೆ ಮಾಯೆ ಯಾರ ಜೊತೆಗೂ ಹೋಗಲಿಲ್ಲ.
ದ್ವಿಮನಸ್ಕವಾಗಿ ‘ಹಂಸ’ವು ಹಾರಿಹೋಗುವುದು
ಮಾಯೆ ಇಲ್ಲಿಯೇ ಇರುವುದು.
ಅವಗುಣಗಳು ಅದರ ಜೊತೆಯಲ್ಲಿ ಹೋಗುವುವು.
ಸದ್ಗುಣಗಳು ಜೊತೆಗೆ ಬಂದರೆ
ಮನಸ್ಸು, ಮಾಯೆಯಿಂದ ಹಿಮ್ಮೆಟ್ಟಿ ತನ್ನಲ್ಲಿ ತಾನೇ
ಲೀನವಾಗಿರುವುದು.
ನನ್ನದು, ನನ್ನದು, ಎನ್ನುತ್ತ ಜನರು ಸತ್ತು ಹೋದರು.
‘ನಾಮ’ವನ್ನು ಬಿಟ್ಟು ದುಃಖವನ್ನು ಹುಡುಕಿದರು.''

“ಜನರು ದುಡ್ಡಿಗಾಗಿ ನಾಚಿಕೆಯನ್ನು, ಧರ್ಮವನ್ನೂ
ತ್ಯಜಿಸುವರು.
ಧನವು ಮಿತ್ರನೆಂದು ತಿಳಿಯಬೇಡಿರಿ.
ಯಾರ ಬಳಿಯಲ್ಲಿ ಧನ ಇರುವುದೋ ಅವರಿಗೆ ಫಕೀರ
ರೆಂದು ಹೆಸರು, ಅಂದರೆ ಅವರು ಕಂಗಾಲರು.
ನೀನು ಯಾರ ಹೃದಯದಲಿ ನೆಲೆಸಿರುವೆಯೋ ಆ
ನರರು ಗಂಭೀರರು, ಗುಣವಂತರು.
ಧನ ಸಂಚಯದಲ್ಲಿ ದುಃಖ ಇರುವುದು.
ಧನವು ಹೊರಟು ಹೋದರೂ ದುಃಖವಾಗುವುದು.''
....
....

“ಲಕ್ಷಾಂತರ ಮಣ ಬಂಗಾರ, ಲಕ್ಷಾಂತರ ಮಣ ಬೆಳ್ಳಿ.
ಲಕ್ಷಾಂತರ ರಾಜರ ಮಹಾರಾಜ್ಯಗಳು,
ಸರ್ವೋತ್ತಮ ಬಾದಶಾಹರು

ಲಕ್ಷಾಂತರ ಸಿಪಾಯಿಗಳ ಸೈನ್ಯ
ಲಕ್ಷಾಂತರ ವಾದ್ಯಗಳು, ಕುದುರೆಗಳು ಮುಳುಗಿ ಹೋದವು.
ಸಾಗರವನ್ನು ದಾಟುವುದಿದೆ.
ಆದರೆ ಅದರಲ್ಲಿ ಅಗಾಧ ಬೆಂಕಿಯ ನೀರು ಇರುವುದು,
ದಡವು ಕಾಣಿಸುವುದಿಲ್ಲ.
ಹಾಹಾಕಾರವುಂಟು, ಕ್ರಂದನವುಂಟು.
'ಅವನಲ್ಲಿಗೆ' ಈ ಸಾಗರವನ್ನು ದಾಟಿ ಹೋಗುವ
ರಾಜನಾರು ? ಚಕ್ರವರ್ತಿ ಯಾರು ?"

ಈ ಎಲ್ಲಾ ಮಾತುಗಳು ಸಂಸಾರದ ಅಸ್ಥಿರತೆಯನ್ನು ಚಿತ್ರಿಸುತ್ತಲೇ ಸ್ಥಿರವಾದ ಭಗವದ್ ಶಕ್ತಿಯತ್ತ ಮಾನವ ತಿರುಗಬೇಕು ಎಂಬುದನ್ನು ಸೂಚಿಸುತ್ತವೆ.

ಲೋಕದಲ್ಲಿ ಸಕಲವೂ ಚಂಚಲವೇ. ಸದಾ ಪರಿವರ್ತನಾಶೀಲವಾದ ಜಗತ್ತಿನಲ್ಲಿ ಶಾಶ್ವತ ತತ್ವವೆಂದರೆ ಭಗವಂತನೊಬ್ಬನೇ ಎಂಬುದು ಎಲ್ಲಾ ಧರ್ಮಗಳ ಸಾರವತ್ತಾದ ಮಾತು.

ವ್ಯಕ್ತಿಯ ಜನನಕ್ಕೆ, ದೇಹ ಮತ್ತು ಮನಸ್ಸಿನ ವಿಕಾಸಕ್ಕೆ ಕುಟುಂಬದ ಅಗತ್ಯ ಪ್ರಾಥಮಿಕವಾಗಿ ಇದ್ದರೂ, ಮಾನವ ಮನಸ್ಸಿನ ಅವಿಭಾಜ್ಯ ಅಂಶಗಳಾಗಿರುವ ಮೋಹ, ಕಾಮ, ಕ್ರೋಧ, ಮಾತ್ಸರ್ಯ, ಮದ, ಮುಂತಾದ ಗುಣಗಳು ಮನುಷ್ಯನನ್ನು ದೇವರಿಂದ ದೂರ ಮಾಡುತ್ತಾ ಆತನನ್ನು ಸಂಸಾರಕ್ಕೆ ಪೂರ್ಣವಾಗಿ ಅಂಟಿಕೊಂಡು ಬಿಡುವಂತೆ ಬಲಾತ್ಕರಿಸುತ್ತವೆ.

ಇಂತಹ ಅಪಾರ ಆಕರ್ಷಕ ಪ್ರಪಂಚದಲ್ಲಿ – ಮನಸ್ಸನ್ನು ಪ್ರಪಂಚದಿಂದ ಸೆಳೆದು – ಭಗವಂತನತ್ತ ಕೇಂದ್ರೀಕರಿಸುವ ಕಾರ್ಯ ಅತಿ ಕಷ್ಟದ್ದು.

ಅದಕ್ಕೆ ನಾನಕ್ ಉಪಾಯವನ್ನು ಹೇಳುತ್ತಾರೆ. ಚಂಚಲ ಚಿತ್ತರು ಒಂದೆಡೆ ಸ್ಥಿರವಾಗಿ ನಿಲ್ಲುವುದಿಲ್ಲ. ಮೃಗವು ಕದ್ದು ಕದ್ದು ದ್ರಾಕ್ಷಿ ತಿನ್ನುವುದು. ಚಿತ್ತದಲ್ಲಿ ಪ್ರಭುವಿನ ಚರಣ ಕಮಲಗಳು ನೆಲೆಸಿದರೆ ಚಿರಜೀವನವೂ, ನಿತ್ಯ ಚೈತನ್ಯವೂ ದೊರೆಯುವುವು. "ಎಲ್ಲರೂ ಚಿಂತಾಕುಲರಾಗಿಯೇ ಕಾಣುವರು. ಜಾಗೃತನಾದವನಿಗೆ ಮಾತ್ರ ಸುಖವು ಸಿಗುವುದು. ಯಾರ ಚಿತ್ತದಲ್ಲಿ ಹರಿನಾಮವು ನೆಲಸುವುದೋ ಅವನು ಮುಕ್ತನಾಗುವನು."

ಪುಣ್ಯ ಸಂಪಾದನೆಗಾಗಿ ಕಷ್ಟಪಡುವ ಸಾಮಾನ್ಯರನ್ನು ಕಂಡು ನಾನಕ್ ಕಾರುಣ್ಯಪೂರಿತರಾಗಿ ಹೇಳುತ್ತಾರೆ. ಮನಸ್ಸು ಭಗವಂತನಲ್ಲಿ ನೆಲೆಸದೆ, ಯಾವ ಪುಣ್ಯಕ್ಷೇತ್ರ – ತೀರ್ಥಸ್ನಾನಗಳಿಂದಲೂ ಪ್ರಯೋಜನವಿಲ್ಲ.

"ತೀರ್ಥ ಸ್ನಾನಕ್ಕೆ ಹೋಗಲೇಕೆ ? ಪರಮಾತ್ಮನ ನಾಮವೇ ತೀರ್ಥ. ಶಬ್ದವಿಚಾರ. ಅಂತರ್ಜ್ಞಾನ ಇವೇ ತೀರ್ಥ. ಗುರುಜ್ಞಾನವೇ ನಿಜವಾದ ತೀರ್ಥ ಸಾಧನ ಎನ್ನುವುದಲ್ಲದೆ ಪ್ರಿಯ–ಪ್ರೇಯಸಿಯರು ಹೇಗೆ ಒಬ್ಬರಿಂದ ಒಬ್ಬರು ಅಗಲಲು ಇಚ್ಛಿಸದೆ ಪರಸ್ಪರರ ಸಹವಾಸದಲ್ಲಿ ತೃಪ್ತಿ–ಸಂತೋಷಗಳನ್ನು ಕಾಣುತ್ತಾರೋ ಹಾಗೆಯೇ ಲೌಕಿಕರಾದ ನಾವು ಭಗವಂತನಲ್ಲಿ ಅನನ್ಯ ಪ್ರೇಮವನ್ನು ಬೆಳೆಸಿಕೊಳ್ಳಬೇಕು. ಆಗ ಮಾತ್ರ ಈ ಸಂಸಾರದ ಆಕರ್ಷಣೆಯಿಂದ ಬಿಡುಗಡೆ ಹೊಂದಲು ಸಾಧ್ಯವಾಗುತ್ತದೆ.

"ನಿಜವಾದ ಪ್ರೇಮಿಗಳ ದಾರಿಯ ಬುತ್ತಿ ಎಂದರೆ ಸಂತೋಷ,
ಧೈರ್ಯ.
ಪಾಥೆಯವೆಂದರೆ ತಾಳ್ಮೆ.
ಅವರು ಪ್ರಭುವಿನ ಪೂರ್ಣ ದರ್ಶನ ಪಡೆಯುವರು.
ಮೂರ್ಖರಿಗೆ ಎಲ್ಲಿಯೂ ಸ್ಥಾನವಿಲ್ಲ."

ಮಾನವ ಜನ್ಮದ ಮಹೋನ್ನತ ಉದ್ದೇಶಗಳನ್ನು ಮರೆಯಾಗಿಸಿ ಮನುಷ್ಯನ ಮನಸ್ಸು ಸದಾ ಭೋಗ ಮಗ್ನವಾಗಿರುವಂತೆ ಸಂಸಾರ ಪ್ರಚೋದಿಸುತ್ತದೆ.

ತಂದೆ–ತಾಯಿ, ಹೆಂಡತಿ–ಮಕ್ಕಳು, ಸ್ನೇಹಿತರು, ಅಧಿಕಾರ, ಸಂಪತ್ತು, ಕೀರ್ತಿಗಳು, ವ್ಯಕ್ತಿಯನ್ನು ಸಂಸಾರದಲ್ಲಿ ಸೆರೆ ಹಿಡಿದು ನಿಲ್ಲಿಸುವ ಮುಖ್ಯ ಆಕರ್ಷಣೆಗಳು. ಎಲ್ಲಿಯವರೆಗೆ ಈ ಆಕರ್ಷಣೆಯ ಬಂಧನದಲ್ಲಿ ಮನುಷ್ಯ ತೊಳಲಾಡುತ್ತಾ ಇರುತ್ತಾನೋ, ಅಲ್ಲಿಯವರೆಗೆ ವಿಶ್ವ ಸೃಷ್ಟಿಯ ಶಕ್ತಿಯ ಅರಿವನ್ನು ತನ್ನದಾಗಿಸಿಕೊಳ್ಳುವಲ್ಲಿ ವಿಫಲನಾಗುತ್ತಾನೆ.

ದೈವ ಸಾಕ್ಷಾತ್ಕಾರವೇ ಮಾನವ ಜನ್ಮದ ಅತ್ಯುನ್ನತ ಗುರಿ. ಪರಮಾತ್ಮನ ಜ್ಞಾನವೇ ಪರಮ ಜ್ಞಾನ. ಸಾಕ್ಷಾತ್ಕಾರವೇ ಜೀವನದ ಸಾರ್ಥಕತೆ ಎಂದು ನಂಬಿರುವ, ಹಾಗೂ ಅದನ್ನು ತಮ್ಮ–ತಮ್ಮ ಜೀವನದಲ್ಲಿ ಸಾಧಿಸಿಕೊಂಡಿರುವ, ಪರಮನ ಜ್ಞಾನದಿಂದ ಸಂತುಷ್ಟ ಮಾನಸರಾದ ಜಗತ್ತಿನ ಸಾಧು ಸಂತರು, ಅನಾದಿ ಕಾಲದಿಂದಲೂ ಸಂಸಾರದ ಅನಿತ್ಯತೆಯನ್ನು, ಜೀವಿಗಳಿಗೆ ಮನದಟ್ಟು ಮಾಡಿಸಲು, ಆ ಮೂಲಕ ಜೀವಿ ಅಸ್ಥಿರವಾದ ಸಂಸಾರದಲ್ಲಿದ್ದರೂ, ಸ್ಥಿರವಾದ ಭಗವದ್ ಶಕ್ತಿಯತ್ತ ತನ್ನ ಗಮನ ಹರಿಸಲು ಸಾಧ್ಯವಾಗುವಂತೆ ಲೋಕದ ಎಲ್ಲಾ ಧರ್ಮದ ಸಾಧು ಸಂತರೂ ಪ್ರಯತ್ನಿಸುತ್ತಲೇ ಬಂದಿದ್ದಾರೆ.

ದೇಶಪ್ರೇಮ

ವ್ಯಕ್ತಿ ಯಾರೇ ಆಗಿರಲಿ, ತನ್ನ ಸಮಕಾಲೀನ ಬದುಕಿಗೆ ಸ್ಪಂದಿಸದೇ ಇರುವವನು ಇದ್ದರೂ ಸತ್ತಂತೆ. ದೇವರ ಬಗ್ಗೆ, ಮುಕ್ತಿಯ ಬಗ್ಗೆ, ಧರ್ಮದ ಬಗ್ಗೆ ಕಾಳಜಿ ಇರುವ ಜನ, ಸಮಾಜದ ಬಗ್ಗೆಯೂ ಕಾಳಜಿಯನ್ನು ಹೊಂದಿರಬೇಕು. ಲೋಕದಲ್ಲಿ ಒಳಿತು ಉಳಿಯಬೇಕಾದರೆ, ಒಳಿತು ಬೆಳೆಯಬೇಕಾದರೆ, ಸಮಾಜ ಮೂಲಭೂತ ಶಕ್ತಿಯಾಗಿ ಒಳಿತನ್ನು ಪೋಷಿಸುತ್ತದೆ.

ಸಮಾಜ ಸಂಕಷ್ಟಕ್ಕೆ ಸಿಲುಕಿದಾಗ, ತನಗೂ–ಸಮಾಜಕ್ಕೂ ಸಂಬಂಧವಿಲ್ಲದಂತೆ ಯಾವ ಮಾನವನೂ ವರ್ತಿಸಬಾರದು ಎಂಬುದಕ್ಕೆ ಉದಾಹರಣೆಯಾಗಿ, ಬಾಬರನ ಅಮಾನವೀಯ ಆಕ್ರಮಣದಿಂದ ತತ್ತರಿಸಿ ಹೋದ ಪಂಜಾಬಿನ ಸ್ಥಿತಿಯನ್ನು ಕಂಡು ನಾನಕರ ಹೃದಯ ನೋವಿನಿಂದ ಮೊರೆಯಿಟ್ಟಿರುವುದನ್ನು ಗ್ರಂಥ ಸಾಹೇಬ್‌ನಲ್ಲಿ ಸಂಕಲನಗೊಂಡಿರುವ ನಾಲ್ಕು ವಚನಗಳು ಪ್ರಚುರಗೊಳಿಸುತ್ತವೆ.

ತನ್ನ ದೇಶಕ್ಕೆ ಒದಗಿದ ದುಃಸ್ಥಿತಿಗಾಗಿ, ಅದರಲ್ಲೂ ಸರ್ವ ರೀತಿಯಲ್ಲೂ ನಿರಪರಾಧಿಗಳಾದ ಸ್ತ್ರೀಯರಿಗೆ ಒದಗಿದ ಧಾರುಣ ಪರಿಸ್ಥಿತಿಗಾಗಿ ನಾನಕರ ಹೃದಯ ದುಃಖದಿಂದ, ನೋವಿನಿಂದ ಪರಮಾತ್ಮನಲ್ಲಿ ಮೊರೆಯಿಡುವುದನ್ನು ಈ ವಚನಗಳು ಇಂದಿಗೂ ನಮ್ಮ ಕರ್ಣಗಳಲ್ಲಿ ಪ್ರತಿಧ್ವನಿಸುತ್ತವೆ.

ಧ್ಯಾನಶೀಲವಾದ ಮನಸ್ಸಿಗೆ ಬಾಬರನ ಆಕ್ರಮಣ ಮುಂದಾಗಿಯೇ ಗೋಚರವಾಗುತ್ತದೆ.

ಮೊಗಲರ ಧಾಳಿಯನ್ನು ಎದುರಿಸಿ ನಿಲ್ಲುವ ಭವಿಷ್ಯವೂ, ಗೆಲವು ಸಾಧಿಸುವ ತನ್ನ ನಾಡಿನವರ ಪರಾಕ್ರಮವೂ ನಾನಕರ ಧ್ಯಾನಶೀಲವಾದ ಮನಸ್ಸಿಗೆ ಎಷ್ಟು ಸ್ಪಷ್ಟವಾಗಿ, ನಿಖರವಾಗಿ ಗೋಚರವಾಗಿತ್ತು ಎನ್ನುವುದಕ್ಕೆ ಈ ಕೆಳಗಿನ ವಚನವೇ ಸಾಕ್ಷಿ ನುಡಿಯುತ್ತಿದೆ.

“ನನಗೆ ಸ್ವಾಮಿಯ ಎಂಥ ಗುರುವಾಣಿಯು
ಸಿಕ್ಕಿರುವುದೋ ಅಂತಹ ಜ್ಞಾನವನ್ನೇ ನಿಮಗೆ
ಕೊಡುವೆನು.
ಪ್ರಿಯ ಬಂಧುಗಳೇ,
ಕಾಬುಲದಿಂದ ಪಾಪದ ನಿಬ್ಬಣ ಬರಲಿರುವುದು.
ಬಲವಂತವಾಗಿ ಕನ್ಯಾದಾನವನ್ನು ಬೇಡುವರು.
ನಾಚಿಕೆ–ಧರ್ಮ ಎರಡೂ ಅಡಗಿ ಹೋಗುವುವು.

ಸುಳ್ಳು ಎಲ್ಲೆಡೆ ಹಬ್ಬಿ, ಮುಖ್ಯಸ್ಥವಾಗುವುದು.
ಕಾಜಿಗಳ ಮತ್ತು ಬ್ರಾಹ್ಮಣರ ಮಾತುಗಳು ನಿಂತು ಹೋಗುವುದು.
ಇನ್ನು ಸೈತಾನನು ಲಗ್ನ ಮಾಡಿಸುವನು.
ಮುಸಲ್ಮಾನ ಸ್ತ್ರೀಯರು ಕುರಾನ್ ಓದುತ್ತಾ ಕಷ್ಟದಿಂದ
ಯಾ, ಖುದಾ, ಯಾ ಅಲ್ಲಾಹ ಎನ್ನುವರು.
ಉಚ್ಚ ಮತ್ತು ನೀಚ ವರ್ಣಗಳ ಹಿಂದೂ ಮಹಿಳೆಯರ
ಗತಿಯೂ ಹೀಗೆ ಆಗುವುದು.
ಕೊಲೆಯ ಗೀತಗಳನ್ನು ಹಾಡುವರು.
ರಕ್ತದ ಕೇಸರಿಯನ್ನು ಸಿಂಪಡಿಸುವರು.
ಇದೇ ಮಾಂಸಪುರಿಯಲ್ಲಿ ನಾನಕನು ಸ್ವಾಮಿಯ ಗುಣಗಾನ
ಮಾಡುವನು.
ಬಣ್ಣ ಬಣ್ಣದ ಸೃಷ್ಟಿಯನ್ನು ನಿರ್ಮಿಸಿದವನು ಒಬ್ಬನೇ
ಕುಳಿತು ಸ್ವತಹ ಇದನ್ನು ನೋಡುವನು. ಅವನೇ
ನಿಜವಾದ ಸ್ವಾಮಿಯು. ಅವನ ನ್ಯಾಯವೂ ಸತ್ಯದ್ದು.
ಈ ಸಮಸ್ಯೆಯ ವಿಧಾನವೂ ಸತ್ಯವೇ.
ಕಾಯದ ಬಟ್ಟೆ ಜೀರ್ಣವಾಗುವುದು.
ನನ್ನ ವಚನಗಳನ್ನು ಹಿಂದುಸ್ಥಾನವು ಸದಾ ಸ್ಮರಿಸುತ್ತಿರುವುದು.
೭೮ರಲ್ಲಿ ಬರುವರು, ಐವತ್ತೇಳರಲ್ಲಿ ಹೋಗುವರು.
ಮತ್ತು ಆಗ ಒಬ್ಬ ಗಂಡಸಿನ ಶಿಷ್ಯನು ಮೇಲೇಳುವನು.
ನಾನಕನು ಸತ್ಯವಾಣಿ ನುಡಿಯುತ್ತಾನೆ.
ಸತ್ಯದ ಸಮಯದಲ್ಲಿ ಸತ್ಯವನ್ನೇ ಹೇಳುತ್ತಾನೆ.
(೭೨೨-೨೩)

ಬಾಬರನ ಆಕ್ರಮಣ ನಾನಕನ ಭವಿಷ್ಯ ವಾಣಿಯಂತೆಯೇ ನಡೆಯಿತು. ಸಾವಿರಾರು ಜನ ನಿರಪರಾಧಿಗಳ ಪ್ರಾಣ-ಮಾನಗಳು ನಷ್ಟವಾದವು. ದೇಶದ ಸಂಪತ್ತು ಲೂಟಿಯಾಯಿತು. ಸಾವಿರಾರು ಜನ ನೆಲೆತಪ್ಪಿದರು. ಸಾವಿರಾರು ಜನ ಬಲವಂತದ ಮತಾಂತರಕ್ಕೆ ಒಳಗಾದರು. ಆಗ ನಾನಕರು ತನ್ನ ದೈವದೊಡನೆ ಸಂಭಾಷಿಸುತ್ತಾರೆ.

"ಖುರಾಸನವನ್ನು ಉಳಿಸಿಕೊಂಡನು. ಭಾರತವನ್ನು ಹೆದರಿಸಿದನು. ಕರ್ತಾರನು ದೋಷವನ್ನು ತನ್ನ ಮೇಲೆ ತೆಗೆದುಕೊಳ್ಳುವುದಿಲ್ಲ. ಮೊಗಲರನ್ನು ಯಮರನ್ನಾಗಿ ಮಾಡಿ ಭಾರತಕ್ಕೆ ಕಳುಹಿಸಿದನು. ಇಷ್ಟು ಸಂಹಾರವಾಯಿತು.

ಇಷ್ಟು ಆಕ್ರಂದನವಾಯಿತು. ನಿನಗೆ ದಯೆ ಬರಲಿಲ್ಲವೇ? ನಿನಗೆ ಎಲ್ಲರೂ ಒಂದೇ ಸಮರು. ಶಕ್ತಿವಂತರು ಶಕ್ತಿವಂತರನ್ನು ಕೊಂದರೆ ಮನದಲ್ಲಿ ರೋಷವುಂಟಾಗುವುದಿಲ್ಲ. ಒಂದು ವೇಳೆ ಶಕ್ತಿಶಾಲಿ ಸಿಂಹವು ಗೋವುಗಳ ಗುಂಪನ್ನು ಕೊಂದರೆ ಅದರ ಹೊಣೆಯು ಸ್ವಾಮಿಯ ಮೇಲೆ" ಎಂದು ಭಾರತದಲ್ಲಿ ಅನ್ಯಾಯವಾಗಿ ನಡೆದ ರಕ್ತಪಾತದ ಹೊಣೆಯನ್ನು ದೇವರ ಮೇಲೆ ಹೊರೆಸುತ್ತಾರೆ. ಈ ದೇಶವನ್ನು ಆಳುತ್ತಿದ್ದ ಯಾವ ದೊರೆಯು ಬಾಬರನ್ನು ತಡೆಯಲು ಶಕ್ತರಾಗಲಿಲ್ಲ. ತಮ್ಮ ಪ್ರಜೆಗಳ ಮಾನ-ಪ್ರಾಣಗಳನ್ನು ರಕ್ಷಿಸಲು ಸಮರ್ಥರಾಗಲಿಲ್ಲವೆಂಬುದನ್ನು" ರತ್ನದಂಥ ದೇಶವಿತ್ತು. ನಾಯಿಗಳು ಅದನ್ನು ಕೆಡಿಸಿದವು. ಎಲ್ಲರೂ ಸತ್ತರು. ನೀನು ಕೂಡಿಸುವವನು, ಸ್ವತಃ ಬೇರೆ ಮಾಡುವವನು. ಇದು ನಿನ್ನ ಮಹಿಮೆ ಎಂದು ಸಮಾಧಾನ ತಂದುಕೊಳ್ಳಲು ಯತ್ನಿಸುತ್ತಾರೆ.

ಭಾರತದ ಸಂಪತ್ತೇ ಅದರ ನೋವಿಗೆ ಕಾರಣವಾಯಿತು ಎಂದು ಚಿಂತಿಸುತ್ತಾರೆ. ಐಕ್ಯ ಮತ್ಯವಿಲ್ಲದಿದ್ದ ಜನ, ಒಗ್ಗಟ್ಟಿಲ್ಲದೆ, ಪರಸ್ಪರರ ಏಳಿಗೆಯಲ್ಲಿ ಕುದಿಯುತ್ತಿದ್ದ ರಾಜರು. ಇವರುಗಳ ದೆಸೆಯಿಂದ ಜನತೆಗೆ ಒದಗಿದ ಧಾರುಣ ಸ್ಥಿತಿಯು ಪದೇ ಪದೇ ನಾನಕರ ಶಾಂತಿಯನ್ನು ಕದಡುತ್ತದೆ.

"ಯಾರ ತಲೆಯ ಮೇಲೆ ಕೇಶ ವಿನ್ಯಾಸವು ಶೋಭಿಸುತ್ತಿತ್ತೋ, ಬೈತಲಲ್ಲಿ ಸಿಂಧೂರವು ಕಂಗೊಳಿಸುತ್ತಿತ್ತೋ ಅವರ ತಲೆಯ ಕತ್ತರಿಸಲ್ಪಟ್ಟಿತು. ಕುತ್ತಿಗೆಯವರೆಗೆ ಮಣ್ಣು ತುಂಬಲ್ಪಟ್ಟಿತು. ಅವರು ಮಹಲುಗಳಲ್ಲಿರುತ್ತಿದ್ದರು. ಈಗ ಅವರು ಮಹಲುಗಳ ಹತ್ತಿರವೂ ಹೋಗುವಂತಿಲ್ಲ. ನಮಸ್ಕಾರ, ಪ್ರಭು, ನಮಸ್ಕಾರ, ಓ, ಆದಿ ಪುರುಷ ನಿನ್ನ ರಹಸ್ಯವನ್ನು ಯಾರೂ ಅರಿಯಲಾರರು. ಇವರ ವಿವಾಹವಾದಾಗ ಇವರ ಜೊತೆಯಲ್ಲಿ ವರಗಳು ಶೋಭಿಸುತ್ತಿದ್ದರು. ಇವರು ಪಲ್ಲಕ್ಕಿಯಲ್ಲಿ ಕುಳಿತು ಬಂದರು. ಇವರಿಗೆ ಕದಲಾರತಿ ಎತ್ತಿ ಅತ್ತೆಂದಿರು ನೀರು ಕುಡಿದರು. ಇವರ ಮೇಲೆ ಬೀಸಣಿಗೆಗಳು ಬೀಸುತ್ತಿದ್ದವು. ಇವರು ಬಂದು ಕುಳಿತಾಗ ಲಕ್ಷಾಂತರ ಅಭಿನಂದನೆಗಳು. ಇವರು ಎದ್ದಾಗ ಲಕ್ಷಾಂತರ ಶುಭಾಶಯಗಳು. ಹಾಸಿಗೆಯ ಆನಂದವನ್ನು ಅನುಭವಿಸುತ್ತಿದ್ದರು. ಇಂದು ಇವರ ಕೊರಳಿಗೆ ಹಗ್ಗಗಳು ಬಿದ್ದಿವೆ. ಮುತ್ತಿನ ಮಾಲೆಗಳು ಹರಿದು ಹೋಗಿವೆ."

ನಮಸ್ಕಾರ – ಪ್ರಭು – ನಮಸ್ಕಾರ
ಧನ ಯೌವ್ವನದಿಂದಾಗಿ ಇದ್ದ ವೈಭವ ವಿಲಾಸಗಳು
ಇಂದು ವೈರಿಗಳಾಗಿರುವುವು.

....

....

"ಈಗ ಬಾಬರನ ರಾಜ್ಯವು ಸ್ಥಾಪಿತವಾಯಿತು. ಈಗ ರಾಜಕುಮಾರರ ಭೋಜನವು ಅಪಹೃತವಾಯಿತು. ನಮಾಜದ ವೇಳೆಯೂ ಕಳೆದುಹೋಯಿತು. ಪೂಜೆಯ ಸಮಯವೂ ಹೋಯಿತು. ಹಿಂದು–ಮುಸಲ್ಮಾನರ ಮಡಿಯ ಸ್ಥಳವೆಲ್ಲಿ ಉಳಿಯಿತು ? ಅವರು ಹೇಗೆ ಸ್ನಾನ ಮಾಡುವರು? ಹಣೆಯ ಮೇಲೆ ಹೇಗೆ ಗಂಧ–ತಿಲಕ ಹಚ್ಚಿಕೊಂಡು ಕುಳಿತುಕೊಳ್ಳುವರು ? ರಾಮನಾಮದ ಭಜನೆ ಇಲ್ಲ. ಖುದಾನ ಹೆಸರು ಹೇಳುವುದೂ ಕಠಿಣ .... ಕೂತು ಆಳುವುದು ಅನೇಕರ ಭಾಗ್ಯವಾದರೂ ದುಃಖ ತೀರದು" ಎನ್ನುವಲ್ಲಿ ಹೊರಗಿನ ಆಕ್ರಮಣಕಾರರ ಶಕ್ತಿಗಿಂತಲೂ ಹಿಂದು–ಮುಸ್ಲಿಂರ ನಡುವಿದ್ದ ಪರಸ್ಪರ ದ್ವೇಷ, ಅನೈಕಮತ್ಯಗಳೇ ಬಾಬರನ ದಾಳಿಯ ವಿಜಯಕ್ಕೆ ಕಾರಣವೆಂಬುದನ್ನು ನಾನಕ್ ಸೂಚಿಸುತ್ತಾರೆ. ತಮ್ಮ–ತಮ್ಮ ಮತಗಳ ಶ್ರೇಷ್ಠತೆಯ ವ್ಯಸನದಲ್ಲಿ ದುರ್ಬಲರಾಗಿ–ಹೊರಗಿನಿಂದ ನುಗ್ಗಿ ಬಂದ ಪಾಶವೀ ಶಕ್ತಿಯನ್ನು ಸಮರ್ಥವಾಗಿ ಎದುರಿಸಿ ನಿಲ್ಲುವಲ್ಲಿ ವಿಫಲರಾದ ಬಗೆಯನ್ನು ಈ ಮಾತುಗಳು ಸೂಚಿಸುತ್ತವೆ.

"ಕುದುರೆಯ ಮೇಲೆ ಕುಳಿತು ಆಡುವ ಆಟವೆಲ್ಲಿ ?
ಅಶ್ವಶಾಲೆಯ ಕುದುರೆಗಳೆಲ್ಲಿ?
ಆ ಭೇರಿಗಳೆಲ್ಲಿ? ಶಹನಾಯಿಯೆಲ್ಲಿ? ಕನ್ನಡಿಗಳೆಲ್ಲಿ ?
ಆ ಖಡ್ಗಧಾರಿ ಸೈನಿಕರೆಲ್ಲಿ? ಆ ತೋಪಿನ ಗಾಡಿಯ ಸೈನಿಕರೆಲ್ಲಿ ?
ಏನೂ, ಯಾವುವು ಕಾಣಿಸುವುದಿಲ್ಲ.
ಈ ಜಗತ್ತು ನಿನ್ನದು ಗೋಸ್ವಾಮಿ.
ಕ್ಷಣದಲ್ಲಿ ಸ್ಥಾಪಿಸುವೆ, ಕ್ಷಣದಲ್ಲಿ ಕೆಡಿಸುವೆ"

ಎಂಬ ಮಾತುಗಳಲ್ಲಿ ರಾಜರ, ನವಾಬರ ವಿಲಾಸಿ ಜೀವನವೇ ಹೇಗೆ ಅವರನ್ನು ಮೆದುವಾಗಿಸಿ ಬಿಟ್ಟಿತು. ವೈಭವದಲ್ಲಿಯೇ ಮನನೆಟ್ಟ ಜನ ಹೇಗೆ ವೀರತ್ವದಿಂದ ವಂಚಿತರಾದರು ಎಂಬುದನ್ನೂ ನಾನಕರು ಸೂಚಿಸುತ್ತಾ ಇದ್ದಾರೆ.

"ಆ ಮನೆಗಳೆಲ್ಲಿ, ಬಾಗಿಲುಗಳೆಲ್ಲಿ?
ಮಂಟಪ–ಮಹಲುಗಳೆಲ್ಲಿ ?
ಆ ಧರ್ಮಶಾಲೆಗಳು, ಬಂಕಣಗಳು ಎಲ್ಲಿ ಹೋದವು ?
ನೋಡಿದೊಡನೆ ನಿದ್ರೆಯನ್ನು ಹಾರಿಸುವ
ಶಯ್ಯಾಸುಖವನ್ನೀವ ಕಾಮಿನಿಯರೆಲ್ಲಿಗೆ ಹೋದರು ?
ಎಲ್ಲಿದೆ ಅಂತಃಪುರ? ಎಲ್ಲಿದ್ದಾರೆ ವೀಳ್ಯದೆಲೆ ಮಾರುವವರು ?

ಇಲ್ಲಿ ಏನೂ ಕಾಣಿಸುತ್ತಿಲ್ಲ"

ಶಾಂತಿ ಕಾಲದ ಸುಖ–ಸಂತೋಷಗಳು ಯುದ್ಧ ಕಾಲದಲ್ಲಿ ಹೇಗೆ – ನಾಶವಾಗಿ ಹೋಗುತ್ತವೆ. ಸದಾ ಸುಖ ವಿನೋದಗಳಲ್ಲಿ ಮಗ್ನರಾದ ಜನ ಹೇಗೆ ಎಚ್ಚರಿಕೆಯನ್ನು ಕಳೆದುಕೊಳ್ಳುತ್ತಾರೆ ಎಂಬುದನ್ನು ನಾನಕ್ ಸೂಚಿಸುತ್ತಾರೆ.

"ಧನದಿಂದಾಗಿ ದೊಡ್ಡವರಾದವರು ನಷ್ಟರಾದರು.
ಧನದಿಂದ ದೊಡ್ಡವರಾದವರು ಪ್ರಭುಮಾರ್ಗವನ್ನು
ಕಳೆದುಕೊಂಡು ಬಿಟ್ಟರು.
ಪಾಪವಿಲ್ಲದೆ ಧನ ಸಂಚಯವಾಗುವುದಿಲ್ಲ.
ಸತ್ತ ಬಳಿಕ ಧನವು ಜೊತೆಗೆ ಬರುವುದಿಲ್ಲ.
ಯಾರನ್ನು ಪ್ರಭುವು ಭ್ರಮಣ ಮಾಡಿಸಬಯಸು
ವನೋ ಅವರಿಂದ ಸದ್ಗುಣವನ್ನು ಕಸಿದು
ಕೊಂಡು ಬಿಡುವನು"

ಐಶ್ವರ್ಯದಿಂದ ಮತ್ತರಾದ ಜನ ಅಪಾಯವನ್ನು ಆಹ್ವಾನಿಸುತ್ತಾರೆ. ಹಲವು ವಿಧಗಳಲ್ಲಿ ದೊಡ್ಡವರಾಗಬಹುದು. ಆದರೆ ಹಣದಿಂದಲೇ ದೊಡ್ಡವರಾದವರಲ್ಲಿ ಅಹಂಕಾರ ಮೈಮರವೆಯನ್ನುಂಟು ಮಾಡುತ್ತದೆ.

ಧನ ಎಲ್ಲವನ್ನೂ ಕೊಳ್ಳಬಹುದೆಂಬ, ಎಲ್ಲರನ್ನೂ ತನ್ನಿಷ್ಟದಂತೆ ನಡೆಸಬಹುದೆಂಬ–ಭ್ರಮೆಯನ್ನುಂಟು ಮಾಡುತ್ತದೆ. ಧನದ ಆಸೆಗೆ ಸೈನಿಕನಾದವನು–ರಾಜನನ್ನು ರಕ್ಷಿಸಲಾರ.

"ವೀರ ಬಾಬರನು ಧಾಳಿ ಮಾಡಿದಾಗ
ಅವನನ್ನು ತಡೆಯುವುದಕ್ಕಾಗಿ ಮಾಟ–ಮಂತ್ರ ಮಾಡಿದರು.
ಬಾಬರನ ಸೈನಿಕರು
ವೀರರ ಪವಿತ್ರ ಸ್ಥಳಗಳನ್ನು ಹಿಂದುಗಳ ಮಂದಿರ
ಗಳನ್ನೂ ಸುಟ್ಟರು.
ರಾಜಕುಮಾರನನ್ನು ತುಂಡರಿಸಿ ಮಣ್ಣುಗೂಡಿಸಿದರು.
ಮಾಟ–ಮಾಯಗಳು ತನ್ನ ಚಮತ್ಕಾರ ತೋರಲಿಲ್ಲ.
ಯಾವ ಮೊಗಲನು ಕುರುಡಾಗಲಿಲ್ಲ.
....
ಹಿಂದು ಸ್ತ್ರೀಯರ, ತುರುಕ ಸ್ತ್ರೀಯರ ಭಟ್ಟರ
ಸ್ತ್ರೀಯರ, ಜಮೀನುದಾರರ ಸ್ತ್ರೀಯರ ವಸ್ತ್ರಗಳು

ಅಡಿಯಿಂದ ಮುಡಿಯವರೆಗೆ ಹರಿದು ಹೋದವು.
ಅನೇಕರು ಸ್ಮಶಾನವಾಸಿಗಳಾದರು.
ಯಾರಿಗೆ ಫಿರ್ಯಾದಿ ಹೇಳುವುದು ?
ಸುಖ, ದುಃಖಗಳು ನಿನ್ನ ಇಚ್ಛೆಯ ಮೇರೆಗೆ ಬರುವುವು.
ನಮ್ಮ ರೋಧನವನ್ನು ಯಾರಿಗೆ ಕೇಳಿಸೋಣ ?"

ಎಂಬ ಮಾತುಗಳು ಬಾಬರನ ಆಕ್ರಮಣದಿಂದ ಉಂಟಾದ ಘೋರ ಪರಿಸ್ಥಿತಿಯನ್ನು ಚಿತ್ರಿಸುವುದರ ಜೊತೆಗೆ, ನಾನಕರ ಅನುಕಂಪವನ್ನು ದಾಖಲು ಮಾಡುತ್ತವೆ.

ನಾನಕರ ವಿಚಾರಧಾರೆ ಸಾರ್ವಕಾಲಿಕವಾದುದು. ಸಹಜವಾದುದು. ಸದ್ ಸಂಕಲ್ಪದಿಂದ ಕೂಡಿದ ಅವರ ವಿಚಾರಗಳಲ್ಲಿ ಸಂಕುಚಿತ ದೃಷ್ಟಿಯಿಲ್ಲ. ಸರ್ವ ಜನ ಹಿತವೇ ಅದರ ಗುರಿ. ಮಾನವ ಸಮಾಜ ತನ್ನ ಪರಿಮಿತಿಯಲ್ಲಿಯೇ ಸಾಧಿಸಬಹುದಾದ ಎತ್ತರ. ವಿಸ್ತಾರಗಳತ್ತ ಬೆರಳು ಮಾಡುವ ಅವರ ವಿಚಾರಗಳು, ಹಿಂದು ಧರ್ಮದ ಅನಿಷ್ಟ ಪರಂಪರೆಯನ್ನು ಧಿಕ್ಕರಿಸುತ್ತವೆ.

ಬ್ರಾಹ್ಮಣರು–ಉಳಿದ ಜಾತಿಯವರಿಗಿಂತ ತಾವು ಉತ್ತಮರೆಂದು – ಭಾವಿಸಿಕೊಂಡು ನಡೆಸುತ್ತಿದ್ದ ಕಾರ್ಯಗಳನ್ನು ನಾನಕರು ತೀವ್ರವಾಗಿಯೇ ನಿರಾಕರಿಸಿದರು. ಮುಂದೆ ಗುರು ಗೋವಿಂದ ಸಿಂಗ್ ನಾನಕರ ದಾರಿಯಲ್ಲೇ ನಡೆದು ತಮ್ಮ ಸಿಖ್ ಸಮುದಾಯವನ್ನು ಬ್ರಾಹ್ಮಣರ ಮುಷ್ಠಿಯಿಂದ ಪೂರ್ಣವಾಗಿ ಪಾರು ಮಾಡಿದರು. ನಾನಕ್, ಬಾಬರನ ಆಕ್ರಮಣ ಕಾಲದಲ್ಲಿ ದೇಶಿ ರಾಜರುಗಳ ಬಲಹೀನತೆಯನ್ನು ಗುರ್ತಿಸಿ. ಜನಾಂಗ, ರಾಜರ ಕೈಗೊಂಬೆಯಾಗಿ ಉಳಿಯದೆ, ಸ್ವತಂತ್ರ ಅಸ್ತಿತ್ವ ಘನತೆಗಳನ್ನು ರೂಢಿಸಿಕೊಳ್ಳಬೇಕೆನ್ನುವತ್ತ ಸೂಕ್ಷ್ಮವಾಗಿ ಸೂಚಿಸಿದ್ದರು.

ಗುರು ಗೋವಿಂದ ಸಿಂಗ್‌ರು, ನಾನಕರ ಸೂಚನೆಯನ್ನು ಕಾರ್ಯಗತಗೊಳಿಸಲು ಪ್ರಯತ್ನಿಸಿ, ನೀತಿಯುತವೂ, ಶಿಸ್ತು ಪೂರ್ಣವೂ, ಧೀರತೆಯನ್ನುಳ್ಳದ್ದು ಆದ ಸಮುದಾಯವೊಂದನ್ನು ಮೊಗಲರ ಧಾಳಿಯನ್ನು ಎದುರಿಸಲು, ಲಫಂಗರ ಲಡಾಯಿಯನ್ನು ನಿರ್ನಾಮಗೊಳಿಸಲು ಸಿದ್ಧಪಡಿಸಿದರು.

ಗುರು ನಾನಕ್‌ರು ಗುರುವಿನ ದೇಹಕ್ಕಿಂತ, ಗುರುವಿನ ವಿಚಾರಕ್ಕೆ ಗೌರವ ಸಲ್ಲಿಸತಕ್ಕದೆಂದು ಹೇಳಿದ ವಿಚಾರ – ಗುರು ಗೋವಿಂದ ಸಿಂಗ್‌ರಲ್ಲಿ ಪೂರ್ಣ ಕಾರ್ಯ ರೂಪಕ್ಕೆ ಬಂದಿತು.

ಸಿಖ್ ಪಂಥ – ಹತ್ತು ಜನ ಗುರುಗಳಲ್ಲಿ ಮುಕ್ತಾಯಗೊಂಡು, ಗ್ರಂಥ ಸಾಹೇಬ್ ಗುರು ಸ್ಥಾನಕ್ಕೆ ಏರಿದ್ದು – ಬಹುದೊಡ್ಡ ಮಾರ್ಪಾಟು.

ಸಿಖ್ ಪಂಥದಲ್ಲಿ ಸ್ತ್ರೀಯರಿಗೆ ಪುರುಷರಷ್ಟೇ ಗೌರವ, ಸ್ಥಾನಗಳು ನಾನಕರ ವಿಚಾರದಿಂದಲೇ ಲಭ್ಯವಾದವು.

ಗುರುನಾನಕ್‌ರ ಕಾಲದಲ್ಲಿಯೇ ಸರ್ವ ಜಾತಿಯವರು ಒಟ್ಟಿಗೆ ಊಟ ಮಾಡುವ ಪದ್ಧತಿ ರೂಢಿಗೆ ಬಂದದ್ದು ನಂತರ ವಿಶಾಲವಾಗಿ ವಿಕಾಸವನ್ನು ಪಡೆಯಿತು. ಸಮಾಜದ ಸರ್ವರಿಗೂ ಸಮಾನವಾದ ಗೌರವ ಎಂಬ ಆಚರಣೆಗೆ ನಾಂದಿಯಾದದ್ದು ಗುರು ನಾನಕ್ ಅವರ ಆಚರಣೆ ಹಾಗೂ ವಿಚಾರಗಳಿಂದ. ಹೀಗೆ ನಾನಕರ ವಿಚಾರ ಒಂದು ಶಕ್ತ ಸಮಾಜ ರಚನೆಗೆ ಪೂರಕ – ಮಾರ್ಗದರ್ಶಕ ಶಕ್ತಿಯಾಗಿ ಕೆಲಸ ಮಾಡಿತು ಎಂಬುದನ್ನು ಗಮನಿಸುವುದು ಅಗತ್ಯ.

ಹಿಂದು ಮುಸ್ಲಿಂರ ನಡುವಿನ ಸೌಹಾರ್ದ ಬದುಕು ನಾನಕರು ಕಂಡ ಕನಸು. ಕಂಡ ಕನಸು ನನಸಾಗುವಂತೆ ತಮ್ಮ ಇಡೀ ಬದುಕನ್ನು ಮುಡುಪಾಗಿಟ್ಟು ಭಾವ–ಭಾಷೆ, ವೇಷ–ಭೂಷಣಗಳಲ್ಲಿ ಹೆಚ್ಚು–ಕಡಿಮೆ ಮುಸ್ಲಿಂರಂತೆಯೇ ಕಂಡರು. ತಮ್ಮ ಹಿಂದುತ್ವದ ವಿಶಾಲ ದೃಷ್ಟಿಕೋನವನ್ನು ಕಳೆದುಕೊಳ್ಳದೆ ಅದನ್ನು ವಿಸ್ತರಿಸಿಕೊಂಡು ಹಿಂದು–ಮುಸ್ಲಿಂ ಇಬ್ಬರಿಗೂ ಸಮಾನವಾಗಿ ಗುರುಸ್ಥಾನದಲ್ಲಿ ನಿಂತವರು ಹಿಂದುಗಳಿಗೆ ಗುರು; ಮುಸ್ಲಿಂರಿಗೆ ಪೀರ್ ಎಂಬ ವಿಶೇಷಣಕ್ಕೆ ಪಾತ್ರರಾದ ಮಹಾನ್ ಸಂತ. ತಮ್ಮ ಸಾವಿನಲ್ಲೂ ಜನಾಂಗಗಳ ಸಾಮರಸ್ಯಕ್ಕೆ ಧಕ್ಕೆ ಬಾರದಂತೆ ಅಂತರ್ಧಾನರಾದ ಅವಧೂತ.

ಗುರು ನಾನಕ್ ವಾಣಿ

ಪರಾಭೌತಿಕ ಸಿದ್ಧಾಂತ : ಈಶ್ವರ

೧. ಓಂ ಎಂದು ವಾಚ್ಯವಾಗಿರುವ ಪರಮತತ್ವ ಒಬ್ಬನೇ. ಅವನು ಸತ್ಯನು. ಯಾವಾಗಲೂ ಇರತಕ್ಕವನು. ಅವನು ಸೃಷ್ಟಿಕರ್ತನು ಹೇಗೋ ಹಾಗೆ ಅದರಲ್ಲಿ ವ್ಯಾಪ್ತನೂ ಹೌದು. ಅವನು ನಿರ್ಭಯನು, ಯಾರೊಡನೆಯೂ ಅವನ ಹಗೆತನವಿಲ್ಲ. ಅವನ ಅಸ್ತಿತ್ವದ ಮೇಲೆ ಕಾಲದ ಪ್ರಭಾವವಿಲ್ಲ. ಅವನು ಜನಿಸುವುದಿಲ್ಲ. ಅವನು ಸ್ವಯಂ ಪ್ರಕಾಶನು, ಗುರು ಕೃಪೆಯಿಂದ ಅವನ ಸಾಕ್ಷಾತ್ಕಾರ ಸಾಧ್ಯ. (ಮೂಲ ಮಂತ್ರ ಜಪು)

೨. ಅವನು ಒಬ್ಬನೇ. ಒಬ್ಬನೇ ಎಂದು ಎಲ್ಲರೂ ಹೇಳುವವರೇ. ಆದರೆ ಗರ್ವ, ಅಹಂಕಾರ ಎಲ್ಲೆಡೆ ವ್ಯಾಪಿಸಿರುವುದು. ಒಳಗೂ ಹೊರಗೂ ಒಬ್ಬನೇ ಇರುವನೆಂದು ಅರಿತರೆ ಅವನ ಅರಮನೆ ಎಲ್ಲಿರುವುದೆಂಬುದು ತಿಳಿಯುವುದು. ಪ್ರಭು ಹತ್ತಿರವಿರುವನು. ಅವನು ದೂರ ಇರುವನೆಂದು ತಿಳಿಯಬೇಡ. ಸಮಸ್ತ ಸೃಷ್ಟಿಯೂ ಒಂದೇ. ಒಂದು ಓಂಕಾರದ ಹೊರತು ಬೇರೊಂದಿಲ್ಲ. ಅವನೊಬ್ಬನೇ ಎಲ್ಲೆಡೆಯಲ್ಲಿ ತುಂಬಿರುವನು. (೭೩೦)

೩. ಒಂದೇ ಆಕಾರ, ಬಣ್ಣ, ರೂಪ ಒಂದೇ. ವಾಯು, ಜಲ, ಅಗ್ನಿ ಅವನದೇ ಸ್ವರೂಪಗಳು. ಒಂದೇ ಭ್ರಮರವು ಮೂರು ಲೋಕಗಳಲ್ಲಿ ಸುತ್ತುತ್ತಿರುವುದು. ಒಬ್ಬನನ್ನು ಅರಿಯುವುದರಿಂದ ಸನ್ಮಾನ ಲಭಿಸುವುದು. ಜ್ಞಾನ ಮತ್ತು ಧ್ಯಾನದಲ್ಲಿ ಸಮರಸನಾದಂಥ ಗುರುಮುಖನು ಸಿಗುವುದು ಅಪರೂಪ. ಅವನ ಕೃಪೆ ಪಡೆದವನಿಗೇ ಸುಖ ಪ್ರಾಪ್ತಿ. ಗುರುವಿನ ದ್ವಾರದಲ್ಲಿ ಇದನ್ನು ಹೇಳಲಾಗುತ್ತದೆ. (೯೩೦)

೪. ಅಲ್ಲಾನು ಅಗೋಚರನು. ಆಗಮನು, ಕಾದರನು, ಕರ್ತಾರನು, ಕರೀಮನು ದಯಾಳು. ಈ ಎಲ್ಲಾ ಜಗತ್ತು ಬರುವುದು, ಹೋಗುವುದು. ಕಾಯಂ ಇರುವವನು ಆ ದಯಾಳು ಮಾತ್ರ. ಹಣೆಯಲ್ಲಿ ಕರ್ಮ ರೇಖೆಯಿರದವನೇ ಕಾಯಂ ಇರುವವನೆಂದು ಹೇಳುವರು. ಆಕಾಶವೂ, ಭೂಮಿಯೂ ಒಂದು ದಿನ ಹೋಗತಕ್ಕವೇ. ಅಚಲನಾಗಿರುವವನು ಅವನೊಬ್ಬನೇ. ಹಗಲಲ್ಲಿ ರವಿ, ರಾತ್ರಿಯಲ್ಲಿ ಚಂದ್ರ ಚಲಿಸುತ್ತಲೇ ಇರುವರು. ಲಕ್ಷಾಂತರ ತಾರೆಗಳು ಚಲಿಸುವುವು, ಲೋಪವಾಗುವುವು. ಅವನೊಬ್ಬನೇ ಅಚಲನು ಎಂದು ನಾನಕನು ಸತ್ಯ ಹೇಳುತ್ತಾನೆ. (೬೯)

೫. ಸತ್ಯವೆಂದಿಗೂ ಹಳೆಯದಾಗುವುದಿಲ್ಲ. ಸತ್ಯದೊಡನೆ ಹೊಲಿದುದೆಂದಿಗೂ ಹರಿಯುವುದಿಲ್ಲ. ಅವನೊಬ್ಬನೇ ಸರ್ವೋಪರಿ ಸತ್ಯ. ಆತನನ್ನು ಜಪಿಸುತ್ತಿರಿ. ಎಲ್ಲಿಯವರೆಗೆ ಅವನ ಸಾಕ್ಷಾತ್ಕಾರವಾಗುವುದಿಲ್ಲವೋ ಅಲ್ಲಿಯವರೆಗೆ ಎಂದು ನಾನಕನು ಹೇಳುತ್ತಾನೆ. (೯೫೫–೯೫೬)

೬. ಸಹಸ್ರ ಕಣ್ಣುಗಳು ನಿನ್ನವು. ಆದರೆ ಒಂದು ಕಣ್ಣೂ ನಿನ್ನದಲ್ಲ. ಸಹಸ್ರ ಮೂರ್ತಿಗಳು ನಿನ್ನವು. ಒಂದು ಮೂರ್ತಿಯೂ ನಿನ್ನದಲ್ಲ. ಸಹಸ್ರ

ನಿರ್ಮಲ ಚರಣಗಳು ನಿನ್ನವು. ಆದರೆ ಒಂದು ಚರಣವೂ ನಿನ್ನದಲ್ಲ. ಗಂಧ ಹೀನನು ನೀನು. ಆದರೆ ಸಹಸ್ರ ಗಂಧಗಳು ನಿನ್ನವು. ನಿನ್ನೀ ಲೀಲೆ ನನ್ನ ಮನ ಮೋಹಿಸಿತು. ಎಲ್ಲದರಲ್ಲಿಯೂ ಜ್ಯೋತಿ, ಅದೇ ನಿನ್ನ ಜ್ಯೋತಿ. ಅದರ ಬೆಳಕಿನಿಂದಲೇ ಜಗವು ಬೆಳಗುತ್ತಿದೆ. (೧೩)

೭. ಸಕಲ ಪ್ರಕೃತಿಯಲ್ಲಿರುವವನೇ, ನಿನಗೆ ನಾನು ಸಮರ್ಪಿತನು. ನಿನ್ನ ಅಂಶವು ಅಗೋಚರವಾದುದು. ಜಾತಿಯಲ್ಲಿ ಜ್ಯೋತಿ, ಜ್ಯೋತಿಯಲ್ಲಿ ಜಾತಿ. ಅಖಂಡ ಸೃಷ್ಟಿಯಲ್ಲಿ ನೀನು ಪರಿವ್ಯಾಪ್ತನು. ನೀನೇ ನಿಜವಾದ ಸ್ವಾಮಿ, ನಿನ್ನ ಸ್ತವನ ಸುಂದರ, ನಿನ್ನ ಸ್ತವನ ಮಾಡಿದವನು ಭವಸಾಗರದಿಂದ ಮುಕ್ತನು. (೪೬೯)

೮. ಈ ಜಗತ್ತು ಅವನ ನೆರಳು. ಅವನಿಗೆ ತಂದೆ ಇಲ್ಲ. ತಾಯಿ ಇಲ್ಲ. ಅವನಿಗೆ ಅಣ್ಣ–ಅಕ್ಕ ತಂಗಿ–ತಮ್ಮ ಇಲ್ಲ; ಜನನ–ಮರಣ ಇಲ್ಲ. ಕುಲ–ಜಾತಿ ಇಲ್ಲ. ಅವನು ಅಜರನು, ಅಮರನು. ಆ ಪರಮಾತ್ಮನಲ್ಲಿ ನನ್ನ ಮನವು ಲೀನವಾಗಿದೆ. ನೀನು ಅಕಾಲ ಪುರುಷನು. ನಿನ್ನ ತಲೆಯ ಮೇಲೆ ಕಾಲವಿಲ್ಲ. ನೀನು ಅಗೋಚರ. ಅಗಮ್ಯ, ಅದ್ವಿತೀಯ ಪುರುಷನು. ಸತ್ ಸಂತೋಷ ಶಬ್ದವು ಬಹು ತಂಪಾದುದು. ಶಬ್ದದ ಮುಖಾಂತರ ಸಹಜ ಭಾವದಿಂದ ನನ್ನ ಮನವು ನಿನ್ನಲ್ಲಿ ನೆಟ್ಟಿದೆ. (೧೦೩೮)

೯. ಅವನು ಅಜ್ಞೇಯನು, ಅಪಾರನು, ಆಗಮನು, ಅಗೋಚರನು. ಅವನು ಕಾಲ ರಹಿತನು, ಕರ್ಮರಹಿತನು. ಅವನು ಜಾತಿರಹಿತ, ಅಯೋನಿಜ, ಸ್ವಯಂಭೂ, ಅವನಿಗೆ ಭಾವವೂ ಇಲ್ಲ. ಭ್ರಮೆಯೂ ಇಲ್ಲ. ಅಚರ ಸತ್ಯನಿಗೆ ನಾನು ಸಮರ್ಪಿತನು. ಅವನಿಗೆ ಯಾವ ರೂಪವೂ ಇಲ್ಲ. ಬಣ್ಣವೂ ಇಲ್ಲ. ರೇಖೆಯೂ ಇಲ್ಲ. ಸತ್ಯ ಶಬ್ದದಿಂದ ಅವನ ಗುರುತು ಲಭಿಸುವುದು. ಅವನಿಗೆ ತಾಯಿಯಿಲ್ಲ, ತಂದೆಯಿಲ್ಲ, ಪುತ್ರನಿಲ್ಲ, ಸೋದರರಿಲ್ಲ, ಅವನು ಕಾಮ ರಹಿತನು, ಅವನಿಗೆ ಹೆಂಡತಿ ಇಲ್ಲ. ಓ ಕುಲರಹಿತ ನಿರಂಜನ ಅಪರಂಪಾರನೇ, ಈ ವಿಶ್ವವೆಲ್ಲವೂ ನಿನ್ನ ಜ್ಯೋತಿಯ ಪ್ರಕಾಶವೇ. (೫೯೭)

೧೦. ಸ್ತುತಿಸುವವರು ನಿನ್ನನ್ನು ಸ್ತುತಿಸುವರು. ಆದರೆ ಅವರು ನಿನ್ನ ಪಾರವನ್ನು ಕಾಣುವರೇ? ನದಿಗಳು ನಾಲೆಗಳು ಸಾಗರವ ಸೇರುವುವು. ಆದರೆ ಅವು ಅದರ ಪಾರವನ್ನು ಹೇಗೆ ಕಾಣಬಲ್ಲವು ? ಧನಿಕ ಗಿರಿಯಂತೆ

ಅವನು ಸಾಗರ ಪತಿಯ ಸಾಮ್ರಾಟನು. ಅವು ಕೀಟಗಳಿಗೆ ಸಮಾನ. ಯಾರನ್ನು ಪ್ರಭುವು ಮರೆಯಲಾರನೊ ಅವನಿಗೆ ಸರಿಸಮಾನವಾಗಿಯೂ ಅವು ಇರುವುದಿಲ್ಲ. (೫)

೧೧. ಅವನು ಪರಮಪಿತ ಪರಮೇಶ್ವರನು. ನೋಡುವ ಸಲುವಾಗಿ ಅವನು ಈ ಪ್ರಪಂಚವನ್ನು ರಚಿಸಿದನು. ಅವನು ನೋಡುವವನು, ಅರಿಯುವವನು ಮತ್ತು ಎಲ್ಲವನ್ನೂ ತಿಳಿದವನು. ಅವನು ಎಲ್ಲರಲ್ಲಿ ಒಳಗೂ ಹೊರಗೂ ತುಂಬಿರುವನು. (೫೩)

ಜಗತ್ ಉತ್ಪತ್ತಿ

೧೨. ಹತ್ತು ಹತ್ತು ಕೋಟಿ ಯುಗಗಳವರೆಗೆ ಹಬ್ಬಿತ್ತು ಕಗ್ಗತ್ತಲು. ಆಗಿರಲಿಲ್ಲ ಧರಣಿ, ಗಗನ, ಹಬ್ಬಿತ್ತು ಅಪಾರ ಹುಕುಮು, ಹಗಲು–ರಾತ್ರಿಯಿರಲಿಲ್ಲ. ಸೂರ್ಯ, ಚಂದ್ರರಿರಲಿಲ್ಲ. ಆಗವನು ಶೂನ್ಯ ಸಮಾಧಿಯಲ್ಲಿ ಕುಳಿತಿದ್ದನು. ವಾಣಿ ಇರಲಿಲ್ಲ, ಜಲವಿರಲಿಲ್ಲ, ಪವನವಿರಲಿಲ್ಲ ಇನಿತೂ, ಜನನ–ಮರಣ–ವಿರಲಿಲ್ಲ ಆಗ. ನವಖಂಡಗಳು, ಸಪ್ತ ಸಾಗರಗಳೂ ಪಾತಾಳಗಳೂ ಇರಲಿಲ್ಲವಾಗ. ನರಕ–ಸ್ವರ್ಗ–ತ್ರಿಲೋಕಗಳಿರಲಿಲ್ಲ. ಬ್ರಹ್ಮ–ವಿಷ್ಣು–ಮಹೇಶರಾರೂ ಇರಲಿಲ್ಲ. ಕೇವಲ ಅವನೊಬ್ಬನೇ ಇದ್ದನು. ಬೇರಾವನೂ ಇರಲಿಲ್ಲ. ನಾರಿಯಿರಲಿಲ್ಲ, ಪುರುಷನಿರಲಿಲ್ಲ. ಜನ್ಮವಿರಲಿಲ್ಲ, ಜಾತಿ ಇರಲಿಲ್ಲ. ಯತಿ, ಸತಿ, ವನವಾಸಿಗಳಾರು ಇರಲಿಲ್ಲ ಆಗ. ಸಿದ್ಧರು, ಸಾಧಕರು, ಸುಖವಾಸಿಗಳೂ ಸಹ ಇರಲಿಲ್ಲ. ಆಗ ತಾನು ನಾಥನು, ಒಡೆಯನು ಎಂದು ಹೇಳಿಕೊಳ್ಳುವವರು ಯಾರು ? ಜಪ, ತಪ, ಸಂಯಮಗಳು ಇರಲಿಲ್ಲ. ವ್ರತಗಳಿರಲಿಲ್ಲ, ಪೂಜೆಯಿರಲಿಲ್ಲ. ಆಗ ಅವನು ಹೊರತು ಅನ್ಯರ ವರ್ಣನೆ ಮಾಡುವವರು ಯಾರು ? ಅವನು ತನ್ನಿಂದ ತಾನೇ ಹುಟ್ಟಿದವನು, ಬೆಳೆದವನು. ತನ್ನ ಬೆಲೆಯನ್ನು ಕಟ್ಟುವವನೂ ಅವನೇ ಆಗಿದ್ದನು. ಶುಚಿ ಸಂಯಮ, ತುಳಸೀ ಮಾಲೆ, ಮುಂತಾದವು ಇರಲಿಲ್ಲ. ಗೋಪಿಕೆಯರು, ಕೃಷ್ಣನು, ಗೋವುಗಳು, ಗೋಪಾಲಕರು ಇರಲಿಲ್ಲ. ತಂತ್ರ–ಮಂತ್ರ ದಬ್ಬಾಳಿಕೆ. ಕರ್ಮ ಧರ್ಮ; ಮಾಯೆ, ಮೋಹ ಇರಲಿಲ್ಲವಾಗ. ಮುಲ್ಲಾ ಕಾಜೀ ಶೇಖ್, ಮಶಾಇಬ, ಹಾಜಿಗಳು ಇರಲಿಲ್ಲ. ಯಾವ ಅಹಂನ ಪ್ರಪಂಚವೂ ಇರಲಿಲ್ಲ. ತನಗೆ ಇಷ್ಟ ಬಂದಾಗ ಜಗತ್ತನ್ನು ರಚಿಸಿದನು. ನಿರಾಧಾರ ಆಕಾಶವನ್ನು ನಿಲ್ಲಿಸಿದನು.

ಆಮೇಲೆ ಬ್ರಹ್ಮ ವಿಷ್ಣು ಮಹೇಶರನ್ನು ಹುಟ್ಟಿಸಿದನು. ಮಾಯೆಯ ಮೋಹವನ್ನು ಹಬ್ಬಿಸಿದನು. ಅವನ ಹುಕುಂನಿಂದಲೇ ಉತ್ಪತ್ತಿ, ರಚನೆ, ಪಾಲನೆ–ಪೋಷಣೆ. ಅವನ ಹುಕುಮನಿಂದಲೇ ಬ್ರಹ್ಮಾಂಡ, ಖಂಡ, ಪಾತಾಳಗಳು ಆರಂಭವಾದವು. ಗುಪ್ತವಿದ್ದುದನ್ನು ಪ್ರಕಟಗೊಳಿಸಿದನು. (೧೦೩೫–೩೬)

೧೩. ಪಾತಾಳಗಳ ಕೆಳಗೆ ಲಕ್ಷಾಂತರ ಪಾತಾಳಗಳು. ಆಕಾಶದ ಮೇಲೆ ಆಕಾಶಗಳು. ವೇದಗಳು ಇಷ್ಟು ಹೇಳುವುವು. ನಾವು ಸೀಮೆಯನ್ನು ಹುಡುಕುತ್ತಾ ಹುಡುಕುತ್ತಾ ದಣಿದೆವು. ಹದಿನೆಂಟು ಗ್ರಂಥಗಳು ಸಹಸ್ರಾರು ವಿಶ್ವಗಳ ಮಾತು ಹೇಳುವುವು. ಸೃಷ್ಟಿಗೆ ಪಾರಾವಾರವು ಇದ್ದರೆ ಲೆಕ್ಕ ಬರೆಯಬಹುದು. ಆದರೆ ಲೆಕ್ಕವಿಡುವಲ್ಲಿಯೇ ಜೀವನವು ಕಳೆದು ಹೋಗಿಬಿಡುವುದು. ಅದು ಸುದೀರ್ಘವಾದುದು. ಎಷ್ಟು ದೊಡ್ಡದು ಎಂಬುದು ಸ್ವತಃ ಅವನಿಗೇ ಗೊತ್ತು. (೫)

೧೪. ಎಷ್ಟೋ ವಾಯು ದೇವರು, ಜಲದೇವರು, ಅಗ್ನಿದೇವರು, ಎಷ್ಟೋ ಕೃಷ್ಣರು, ಮಹೇಶರು. ಅದೆಷ್ಟೋ ಬ್ರಹ್ಮರು ಸೃಷ್ಟಿ ರಚಿಸುವರು. ಅದರ ರೂಪ ಅಗಣಿತ. ಅದರ ವರ್ಣ ಅಗಣಿತ. ಅಗಣಿತ ಕರ್ಮ ಭೂಮಿಗಳು, ಅಗಣಿತ ಧ್ರುವ, ನಾರದರು. ಅಗಣಿತ ಇಂದ್ರರು, ಸೂರ್ಯರು, ಚಂದ್ರರು ಮತ್ತು ಭೂಮಂಡಲಗಳು, ಅಗಣಿತ ಸಿದ್ಧರು, ಬುದ್ಧರು ಮತ್ತು ನಾಥರು. ದೇವಿಯರು ಅಗಣಿತ, ದೇವ–ದಾನವರು ಅಗಣಿತ, ಮುನಿಗಳು ಅಗಣಿತ, ಅಗಣಿತ ಸಮುದ್ರಗಳು, ಅಗಣಿತ ಜೀವರಾಶಿಗಳು, ಜೀವ ಜಾತಿಗಳು, ವಾಣಿಗಳೂ ಅಗಣಿತ. ಅಗಣಿತ ಅರಸರು, ಚಕ್ರವರ್ತಿಗಳು, ಅವುಗಳ ಬಗೆಗೆ ಹೇಳುವುದಕ್ಕೆ ಇತಿಮಿತಿಯಿಲ್ಲ ಎಂದು ನಾನಕನು ಹೇಳುತ್ತಾನೆ. (೭)

೧೫. ಆಕಾರ ಸೃಷ್ಟಿಯಾದಾಗ ಯಾವ ಸಮಯ ಕಾಲ, ತಿಥಿ, ದಿವಸ? ಯಾವ ಋತು, ಮಾಸ ಇತ್ತು ? ಪಂಡಿತರಿಗೂ ತಿಳಿಯದೆ ಹೋಯಿತು. ಇಲ್ಲದಿದ್ದರೆ ಪುರಾಣಗಳಲ್ಲಿ ಬರೆದಿಡುತ್ತಿದ್ದರು. ವೇಳೆ ಕಾಜಿಗಳಿಗೂ ಗೊತ್ತಾಗಲಿಲ್ಲ. ಇಲ್ಲದಿದ್ದರೆ ಕುರಾನ್‌ನಲ್ಲಿ ಬರೆದಿಡುತ್ತಿದ್ದರು. ಯೋಗಿಗಳಿಗೂ ತಿಥಿ, ದಿವಸ ತಿಳಿಯಲಿಲ್ಲ. ಯಾವ ಕರ್ತಾರನು ಈ ಸೃಷ್ಟಿಯನ್ನು ರಚಿಸಿದನೋ ಅವನಿಗೇ ಗೊತ್ತು. ನಾನು ಹೇಗೆ ಶ್ಲಾಘಿಸಲಿ ? ಹೇಗೆ ವರ್ಣಿಸಲಿ ? ನಾನು ಹೇಗೆ ಅರಿಯಬಲ್ಲೆ ?

ಒಬ್ಬರಿಗಿಂತ ಒಬ್ಬರು ಬುದ್ಧಿವಂತರೆಂದು ಹೇಳುವವರೇನೋ ಹೇಳುವರು. (೪)

ಜೀವಾತ್ಮ–ಅಹಂಕಾರ–ಕರ್ಮ ಸಿದ್ಧಾಂತ

೧೬. ಪವನ, ಜಲ, ಅಗ್ನಿಗಳ ಮೇಳ ಈ ಶರೀರ. ಇದರಲ್ಲಿ ಚಂಚಲ, ಚಪಲ, ಬುದ್ಧಿಯ ಆಟ. ಒಂಬತ್ತು ಬಾಗಿಲುಗಳು, ಹತ್ತನೆಯ ದ್ವಾರವೂ ಒಂದುಂಟು. ಜ್ಞಾನಿಯೇ ಇದನ್ನು ತಿಳಿದು ನೋಡು. ಅವನೇ ವಕ್ತಾ, ಶ್ರೋತಾ ಮತ್ತು ವ್ಯಾಖ್ಯಾತಾ. ಆತ್ಮವಿಚಾರ ಮಾಡುವವನೆ ಜ್ಞಾನಿ. ಮಣ್ಣಿನಿಂದಾದುದು ಈ ಶರೀರ. ಇದರಲ್ಲಿ ಮಾತಾಡುವುದು ಪವನ. ಜ್ಞಾನಿಯೇ, ಯಾರಿಗೆ ಸಾವು ಎಂಬುದನ್ನು ಅರಿತುಕೊ. ಸಾಯುವುದು ಸುರತಿ, ವ್ಯರ್ಥ ಅಹಂಕಾರ. ಇದನ್ನು ನೋಡುವವನು ಸಾಯುವುದಿಲ್ಲ. ಯಾರಿಗೋಸ್ಕರ ತೀರ್ಥ ಯಾತ್ರೆ ಮಾಡುವರೋ, ಆ ರತ್ನ ಪದಾರ್ಥ– ಅವನು, ಅವನು ಶರೀರದಲ್ಲಿಯೇ ಇರುವನು. ಪಂಡಿತರು ಓದುವರು, ವಾದ ಮಾಡುವರು. ತಮ್ಮೊಳಗಿರುವ ವಸ್ತುವನ್ನೇ ಅರಿಯರು, 'ನಾನು' ಸಾಯಲಿಲ್ಲ. ಆದರೆ ಸಾಯುವುದು ನನ್ನ ಅವಿದ್ಯೆ. ರೋಮ, ರೋಮದಲ್ಲಿ ವ್ಯಾಪಿಸಿದವನು ಸಾಯಲಿಲ್ಲ. ಗುರುಬ್ರಹ್ಮನನ್ನು ತೋರಿಸಿದನು. ಯಾರೂ ಸಾಯುವುದು ಕಾಣಿಸದು ಎಂದು ನಾನಕನು ಹೇಳುತ್ತಾನೆ. (೧೫೨)

೧೭. ಅಹಂಕಾರಪಡುತ್ತಾ ಬಹು ವೇಷ ತಾಳಿದರು. ಆದರೆ ಅವನನ್ನು ಅರಿಯಲಾರದೆ ಹೋದರು. ಭಕ್ತಿಯ ಮುಖಾಂತರ ಅಪರೂಪವಾಗಿರುವ ಗುರುಮುಖರು ಅವನನ್ನು ಅರಿಯುವರು. ಅಹಮ್ ಇರುವವರೆಗೆ ಸತ್ಯವನ್ನು ಹೊಂದಲಾಗದು. ಅಹಂಕಾರದ ನಾಶದಿಂದಲೇ ಪರಮಪದ ದೊರೆವುದು. ಅಹಂಕಾರಕ್ಕೆ ವಶರಾಗಿಯೇ ರಾಜರು ಒಬ್ಬರು ಇನ್ನೊಬ್ಬರ ಮೇಲೆ ಧಾಳಿ ಮಾಡುವರು. ಅಹಂಕಾರದಿಂದಾಗಿಯೇ ನಿರ್ವಹಿಸುವರು. ಜನ್ಮ–ಮರಣಗಳನ್ನು ಪಡೆಯುವರು. ಗುರು ಶಬ್ದ ವಿಚಾರಣ – ಚಿಂತನದಿಂದ ಅಹಂಕಾರದ ನಿವಾರಣ ಆಗುವುದು. ಚಂಚಲ ಬುದ್ಧಿಯನ್ನು ಬಿಡುವುದರಿಂದ ಪಂಚವೈರಿಗಳ (ಕಾಮ, ಕ್ರೋಧ, ಲೋಭ, ಮೋಹ, ಮದ) ನಾಶವಾಗುವುದು. ಅಂತರಂಗದಲ್ಲಿ ಸತ್ಯನು ನೆಲೆಸಿದಲ್ಲಿ ವ್ಯಕ್ತಿ ಸಹಜಾವಸ್ಥೆಯನ್ನು ತಲುಪುವನು. ಆ ಮಹಾರಾಜನನ್ನು ಅರಿತು

ಪರಮಗತಿಯನ್ನು ಪಡೆಯುವನು. ಗುರುವು ಅವನ ಭ್ರಮೆಯನ್ನು ದೂರ ಮಾಡುವನು. ಅವನ ವ್ಯವಹಾರದಲ್ಲಿ ಸತ್ಯವು ಬರುವುದು. ನಿರ್ಭಯ ಪಥದಲ್ಲಿ ಅವನ ಮನವು ಲೀನವಾಗುವುದು. ಅಹಂಕಾರದಲ್ಲಿಯೇ ಮುಳುಗೇಳುವವರು ಏನನ್ನು ಪಡೆಯುವರು? ಕಾಣುತ್ತಿರುವುದೆಲ್ಲವೂ ನಾಶವಾಗುವಂತಹುದು. ಅಹಂಕಾರವು ಒಂದು ಬಂಧನ. ಅದು ವ್ಯಕ್ತಿಗಳನ್ನು ಬೇರೆ, ಬೇರೆ, ಯೋನಿಗಳಲ್ಲಿ ಅಲೆದಾಡಿಸುತ್ತದೆ. (೨೨೬-೨೭)

೧೮. ನಾನು ಇರುವ ಕಡೆ ನೀನು ಇಲ್ಲ. ನೀನು ಇರುವ ತನಕ ನಾನು ಇಲ್ಲ. ಓ ಜ್ಞಾನಿಯೇ, ವಿವರಿಸಲಾಗದ ಈ ಉಕ್ತಿಯನ್ನು ಮನದಲ್ಲಿ ಅರಿತುಕೊ. ಅಲಕ್ಷ್ಯನು, ಅಗೋಚರನು ಸರ್ವರಲ್ಲಿ ನೆಲೆಸಿರುವನು. ಗುರುವಿಲ್ಲದೆ ಈ ತತ್ವದ ಜ್ಞಾನವಾಗದು. ಸದ್ಗುರು ದೊರೆತ ಮೇಲೆ ಮನದಲ್ಲಿ ಶಬ್ದವು ತುಂಬುವುದು. ಆಗ ಆಗುವುದು ಅರಿವು. ಅಹಮ್ ಹೋದರೆ ಭ್ರಮೆಯೂ, ಭಯವೂ ಹೋಯಿತು. ಜನನ-ಮರಣದ ದುಃಖ ನಾಶವಾಯಿತು ಎಂದು ತಿಳಿ. ಗುರುಮತಿ ಅಗೋಚರನನ್ನು ತೋರಿದನು. ಸೋಹಮ್‌ನನ್ನು ಜಪಿಸಿರಿ ಅವನೇ ತ್ರಿಭುವನದಲ್ಲಿ ತುಂಬಿರುವನು. (೧೦೯೨-೯೩)

೧೯. ಕರ್ಮವೇ ಕಾಗದ. ಮನವೇ ಮಸಿ, ಒಳಿತು, ಕೆಡಕು ಹೀಗೆ ಎರಡನ್ನೂ ಬರೆಯಲಾಗುವುದು. ಓ, ಹರಿ. ನಿನ್ನ ಗುಣಗಳು ಅನಂತ. ಓ, ಮನವೇ ನೀನೇಕೆ ಎಚ್ಚೆತ್ತು ಹರಿಸ್ಮರಣೆ ಮಾಡಲಿಲ್ಲ ? ....ಮನಸ್ಸು ಕಬ್ಬಿಣದಂತೆ ಕಾಯುತ್ತಿದೆ. ಪಾಪವೆಂಬ ಇದ್ದಿಲು ಅದರಲ್ಲಿ ಬಿದ್ದಿದೆ. ಚಿಂತೆಯೆಂಬ ಚಿಮ್ಮಟಿಗೆ ಅದನ್ನು ಹಿಡಿದು ಬಿಟ್ಟಿದೆ. (೯೯೦)

ಮುಕ್ತಿ ಮತ್ತು ನಿರ್ಭಯತೆ

೨೦. ಕರ್ಮಫಲದಿಂದ ದೊರೆವುದು ಶರೀರ. ಮುಕ್ತಿ ದೊರೆವುದು ಪ್ರಭುವಿನ ಪ್ರಸಾದದಿಂದ (ಜಪು-೨)

೨೧. ಪ್ರಭುವಿನಲ್ಲಿ ಮನವು ಲೀನವಾದರೆ, ಬುದ್ಧಿ ಸತ್ಯವನ್ನು ಕೊಂಡಾಡುವುದು. ಮಾಯೆ, ಮೋಹಗಳ ವಶದಲ್ಲಿರುವುದು ಜಗತ್ತು, ಯಮನು ಅದನ್ನು ಕಟ್ಟಿ ಹಾಕಿರುವನು. ಈ ಕಟ್ಟು ಬಿಚ್ಚುವುದು ಶ್ರೀಹರಿಯ ನಾಮ ಸ್ಮರಣೆ ಮಾಡುವುದರಿಂದ. ಗುರುವೇ ಸುಖದಾತನು. ಇಹಲೋಕದಲ್ಲಿ, ಪರಲೋಕದಲ್ಲಿ ಅವನೇ ನಿಮ್ಮ ಜೊತೆಗೆ ಬರುವವನು.

ಶಬ್ದದಿಂದ ಅಹಂಕಾರವನ್ನು ನಷ್ಟಗೊಳಿಸಿ, ಮನವು ಅಚಲವಾದಾಗ ಎಲ್ಲ ಭ್ರಮೆಗಳೂ ದೂರಾಗುವುವು. ಮನದಲ್ಲಿ ನಾಮವು ನೆಲೆಸಿದರೆ ಜೀವನ ಮುಕ್ತಿ ದೊರೆಯುವುದು. (೪೧೨)

೨೨. ಅಸತ್ಯವಂತನಿಗೆ ಪ್ರಭುವಿನ ನಾಮದಲ್ಲಿ ಆಸ್ಥೆ ಇರುವುದಿಲ್ಲ. ಒಂದು ಹಕ್ಕಿ ಪಂಜರದಲ್ಲಿ ಬಂಧಿತವಾಗಿರುವುದು. ಒಳಗೇ ಸುತ್ತುತ್ತಿರುವುದು ಮುಕ್ತವಾಗುವುದಿಲ್ಲ. ಸ್ವಾಮಿಯು ಬಿಡಿಸಿದಾಗಲೇ ಬಿಡುಗಡೆ ಹೊಂದುವುದು. ಗುರುಮತಿಯೊಡನೆ ಮಿಳನವಾದರೆ ಭಕ್ತಿ ಧೃಡವಾಗುವುದು. (೮೩೮)

೨೩. ಸತ್ಯ–ಸಂತೋಷಗಳು ಶರೀರವುಳ್ಳವನಾಗಿದ್ದರೆ, ಸಪ್ತ ಸಮುದ್ರಗಳು ನಿರ್ಮಲ ನೀರಿನಿಂದ ತುಂಬಿದ್ದರೆ, ಶೀಲವೇ ಸ್ನಾನವಾದರೆ, ಹೃದಯದಲ್ಲಿ ಸತ್ಯದ ಚಿಂತನವು ಸಾಗುತ್ತಿದ್ದರೆ ಗುರುವಿನ ಶಬ್ದದ ಮುಖಾಂತರ ಸರ್ವ ಜ್ಞಾನವನ್ನು ಪಡೆದುಕೊಂಡಿದ್ದರೆ, ಮನದಲ್ಲಿ ಸತ್ಯವಿದ್ದರೆ, ಹಣೆಯ ಮೇಲೆ ಸತ್ಯದ ಮುದ್ರೆ ಇದ್ದರೆ ಯಾವನು ಅಡ್ಡಗಟ್ಟಬಲ್ಲನು ? (೮೩೯)

ಜೀವನದ ಗುರಿ

೨೪. ಕದ್ದು–ಮುಚ್ಚಿ ಪಾಪಕರ್ಮ ಮಾಡುವವನಿಗೆ ಸ್ವಾಮಿಯ ಅರಿವು ಹೇಗಾದೀತು ? ತಮ್ಮನ್ನು ತಾವು ಅರಿಯದವರು ಹುಚ್ಚರು. .... ನಾಸ್ತಿಕತೆಯ ಮಾತನಾಡುವವರು ನಾಸ್ತಿಕತೆಯ ದುರಾಗ್ರಹದ ಬೆಂಕಿಯಲ್ಲಿ ಬಿದ್ದು ಸುಟ್ಟು ಹೋಗುವರು. ಸತ್ಯಲೀನರಾದರೆ ಜಗತ್ತು ಸ್ತುತಿಸುವುದು. ಅಹಂನ್ನು ಕಳೆದುಕೊಂಡರೆ ಪ್ರಭುವಿನ ಚರಣಗಳಲ್ಲಿ ತಾನಾಗಿಯೇ ಸಾಫಲ್ಯವು ದೊರೆಯುವುದು. (೧೪೨)

೨೫. ಕ್ಷಮಾಗುಣವನ್ನು ಅಳವಡಿಸಿಕೊಂಡು ಶೀಲ ಸಂತೋಷಗಳ ವ್ರತವನ್ನು ಹಿಡಿದವರಿಗೆ ರೋಗವು ಬರುವುದಿಲ್ಲ. ಯಮ ದೋಷವು ತಗಲುವುದಿಲ್ಲ. ರೂಪ ವರ್ಣಗಳಿಲ್ಲದ ಪ್ರಭುವಿನಲ್ಲಿ ಅವರು ಬೆರೆತು, ಮುಕ್ತರಾಗುವರು. ಯೋಗಿಗೇನು ಭಯ, ರೂಕ್ಷ ವೃಕ್ಷದಲ್ಲೂ, ಮನೆಯ ಹೊರಗೂ ಅವನಿಗೋಸ್ಕರ ಪ್ರಭು ಇರುವನು. ನಿರ್ಭಯ, ಯೋಗಿ ನಿರಂಜನನ ಧ್ಯಾನ ಮಾಡುವನು. ಅನುದಿನ ಜಾಗೃತನಿರುವನು. ಸತ್ಯದಲ್ಲಿ ತಲ್ಲೀನನಾಗಿರುವನು. ಅವನು ಬ್ರಹ್ಮಜ್ವಾಲೆಯಿಂದ ಕಾಲನ ಜಾಲವನ್ನು ಸುಟ್ಟು ಹಾಕುವನು. ಜರಾ ಮರಣಗಳಿಂದ ದೂರಾಗಿ

ಅಹಂಕಾರದ ನಿವಾರಣೆ ಮಾಡುವನು, ಅವನು ಸ್ವತಃ ಮುಕ್ತನಾಗುವುದಲ್ಲದೆ, ತನ್ನ ಪಿತೃಗಳನ್ನು ಮುಕ್ತರನ್ನಾಗಿಸುವನು. (೨೨೩-೨೪)

ಗುರು

೨೬. ಸತ್ಯನೊಡನೆ ಭೇಟಿ ಮಾಡಿಸುವ ಗುರುವಿನ ಶಿಷ್ಯರಾಗಿರಿ. ಹರಿಯ ಜನರಿಗೆ ಬೇರಾವ ಕೆಲಸವೂ ಇಲ್ಲ. .... ಸದ್ ಗುರುವು ದೊರೆತರೆ ಅವನು ಸೇವಕನನ್ನು ಪ್ರಭುವಿನ ಚರಣಗಳ ಬಳಿಗೆ ಕರೆದುಕೊಂಡು ಹೋಗುವನು. ಪ್ರಭುವಿನ ಸಾಕ್ಷಾತ್ಕಾರ ಮಾಡಿಸುವನು. (೬೮೬)

೨೭. ಒಬ್ಬನಲ್ಲಿ ಸರ್ವವೂ, ಸರ್ವರಲ್ಲಿ ಒಬ್ಬನು ಇರುವುದನ್ನು ಸದ್ಗುರುವು ನೋಡಿ, ತೋರಿಸಿದನು. ಖಂಡ, ಮಂಡಲ, ಬ್ರಹ್ಮಾಂಡಗಳನ್ನು ರಚಿಸಿದ ಪ್ರಭುವು ಅಗೋಚರ. ಗುರು ದೀಪದಿಂದ ಕಾಣುವಂತೆ ಮಾಡಿದನು. ತ್ರಿಭುವನದಲ್ಲಿ ಜ್ಯೋತಿಯನ್ನು ತೋರಿಸಿದನು. ಸತ್ಯದ ಮಹಲಿನಲ್ಲಿ ಸತ್ಯದ ಸಿಂಹಾಸನದ ಮೇಲೆ ನಿರ್ಭಯನು ಕುಳಿತನು. ಗುರುವು ಅವನಲ್ಲಿ ಮನಸ್ಸು ನೆಡುವಂತೆ ಮಾಡಿದನು. ಸದ್ಗುರುವೇ ನಿಜವಾದ ಮಿತ್ರ ಎಂದು ನಾನಕನು ಹೇಳುತ್ತಾನೆ (೬೦೭)

೨೮. ಜ್ಞಾನವೆಂಬ ಅಮೃತ ಜಲದಲ್ಲಿ ಮನವು ಸ್ನಾನ ಮಾಡುವುದು. ಗುರುವಿನ ಉಪದೇಶವು ವಜ್ರ-ಮಾಣಿಕ್ಯಕ್ಕೆ ಸಮ. ಗುರುವಿಗೆ ಸಮಾನವಾದ ತೀರ್ಥವಿಲ್ಲ. ಗುರುವು ಸಂತೋಷದ ಸರೋವರ, ಸದಾ ನಿರ್ಮಲವಾಗಿರುವ ನದಿಯೇ ಗುರು, ಅವನನ್ನು ಸೇರುವುದರಿಂದ ದುರ್ಮತಿಯ ಹೊಲಸು ಕಳೆದು ಹೊಗುವುದು. ಸದ್ಗುರುವಿನ ಮಿಳನವೇ ಪೂರ್ಣ ಸ್ನಾನ. ಅವನು ಪಶುವನ್ನು ಪಿಶಾಚಿಯನ್ನು ದೇವತೆಯಾಗಿ ಮಾಡುವನು. ಗುರುವಿಗೆ ಪರಿಮಳವೆನ್ನುವರು. ಅವನ ಸುಗಂಧದಿಂದ ವನಸ್ಪತಿಗಳು ಸುಗಂಧಿಗಳಾಗುವುವು. ಅವನ ಚರಣದಲ್ಲಿ ಧ್ಯಾನಮಗ್ನರಾಗಿರಿ. ಗುರುವಿನ ಮುಖಾಂತರವೇ ಶಿವಗೃಹದಲ್ಲಿ ಪ್ರವೇಶ ಸಿಗುವುದು. ಗುರುವಿನ ಮುಖಾಂತರವೇ ಸತ್ಯದಲ್ಲಿ ಸಮಾವೇಶವಾಗುವುದು. ಗುರುವಿನ ಮೂಲಕವೇ ನಿಜ ಪದದ ಪ್ರಾಪ್ತಿ. (೧೩೨೮-೨೯)

೨೯. ನಾನಕನು ಹೇಳುವುದೇನೆಂದರೆ ಗುರು ಸಂತೋಷ ವೃಕ್ಷ, ಧರ್ಮವು ಹೂವು, ಜ್ಞಾನವು ಫಲ. ಅದು ಸದಾ ಹಚ್ಚ ಹಸಿರು.

ರಸಪೂರ್ಣವಾದುದು............. ಗುರುವಿನ ಹರಿ ಮುಖದಿಂದ ಹೊರಟ ಮಾತುಗಳು ಹೃದಯವನ್ನು ಹರಿಗೆ ಪ್ರಸನ್ನವಾಗುವಂತೆ ಮಾಡುವುವು.......... ಹಿಂಸೆ, ಮೋಹ, ಲೋಭ, ಕ್ರೋಧ ಇವು ನಾಲ್ಕು ಬೆಂಕಿಯ ನದಿಗಳು. ಇವುಗಳಲ್ಲಿ ಮುಳುಗಿದವನು ಸುಟ್ಟು ಹೋಗುವವನು. ಗುರುವಿನ ಕೃಪೆಯಾದರೆ ಇವನ್ನು ಈಸಿ ಪಾರಾಗುವನು. (೧೪೭)

೩೦. ಗುರು ಎಂಬ ಶಬ್ದವೇ ನಾದವು, ಗುರು ಶಬ್ದವೇ ವೇದವು. ಗುರುವಿನ ಶಬ್ದದಲ್ಲಿಯೇ ಅವನು ಸಮಾವಿಷ್ಟನು. ಗುರುಶಬ್ದವೇ ಗಹನವಾದುದು. ಗಂಭೀರವಾದುದು. ಶಬ್ದವಿಲ್ಲದ ಈ ಜಗತ್ತು ಹುಚ್ಚು. ಯಾರ ಮನಸ್ಸು ಪ್ರಪಂಚದಿಂದ ಪೂರ್ಣ ವಿರಕ್ತವಾಯಿತೋ ಅವನು ಸಹಜ ಸೌಭಾಗ್ಯಶಾಲಿ. (೬೩೫)

ದೈನ್ಯ / ನಮ್ರತೆ

೩೧. ಮೃದು ವಚನ ಮತ್ತು ನಮ್ರತೆ ಈ ಎರಡು ಸದ್ಗುಣಗಳು ಸತ್ಕರ್ಮಗಳ ಸಾರತತ್ವ. ಪ್ರತಿಯೊಬ್ಬನೂ ತನ್ನ ಬಗ್ಗೆ ನಮ್ರತೆಯನ್ನು ಬಯಸುವನು. ಆದರೆ ಬೇರೆಯವರ ಬಗ್ಗೆ ನಮ್ರನಾಗಿರುವುದಿಲ್ಲ. ಮೃಗಹಂತಕನಂತೆ ಅಪರಾಧಿಯು ಹೆಚ್ಚು ಬಾಗುವನು. ಹೃದಯವು ಅಶುದ್ಧವಿರುವಾಗ ತಲೆ ಬಾಗುವುದರಿಂದ ಏನು ಪ್ರಯೋಜನ ? (೪೭೭)

೩೨. ಕರ್ಮಗಳು ಶುಭವಾಗಿದ್ದರೆ, ಹೃದಯದಲ್ಲಿ ಸೇವಾಭಾವವಿದ್ದರೆ, ಮನವು ತೃಪ್ತವಾಗಿರುವುದು, ಅಗೋಚರ, ಅಗಮ್ಯ ಪ್ರಭುವು ದೊರೆಯುವನು.

ಲೋಕ ಸೇವೆ

೩೩. ಮನಸ್ಸಿನಲ್ಲಿ ಸಂತೋಷವುಳ್ಳವರಾಗಿ, ಸತ್ಯಾತಿ ಸತ್ಯನಲ್ಲಿ ಧ್ಯಾನವಿಟ್ಟವರೇ ಸೇವೆ ಮಾಡಬಲ್ಲರು. ಅವರೆಂದೂ ಕುಮಾರ್ಗದಲ್ಲಿ ಹೆಜ್ಜೆ ಇಡರು. ಸುಕೃತ ಮತ್ತು ಧರ್ಮ ಪಾಲನ ಮಾಡುವರು. ಅವರು ಪ್ರಪಂಚದ ಬಂಧನ ಹರಿದು ಹಾಕಿರುವರು. (೪೬೬–೬೭)

೩೪. ಸೇವೆಯಲ್ಲಿ ಮನವಿಟ್ಟು ಅವನ ಗುಣಗಾನ ಮಾಡಿದರೆ ಆನಂದವು ದೊರೆಯುವುದು. ಶೋಧದಿಂದ ಜ್ಞಾನವು ವೃದ್ಧಿಸುವುದು, ವಿವಾದದಿಂದ ನಾಶವಾಗುವುದು. ಗುರು ಕರ್ತಾರನಿಗೆ ನಾನು ಸಮರ್ಪಿತನು. (೧೨೫೫)

೩೫. ಒಳ್ಳೆ ವಿಚಾರ ಬಂದಾಗ ಅಹಂಕಾರ ಗರ್ವಗಳ ನಾಶವಾಗುವುದು. ಮನಕ್ಕೆ ಸತ್ಯದ ಆಧಾರವು ದೊರೆತರೆ ಸ್ವಾಮಿಯಲ್ಲಿ ಮನವು ನೆಡುವುದು. ಮನಸ್ಸು ಅಹರ್ನಿಶ ನಾಮ ಸ್ಮರಣೆಯಿಂದ ಸಂತೋಷ ಪಡೆದಾಗಲೇ ನಿಜವಾದ ಸೇವೆ ಘಟಿಸಿದಂತೆ ಎಂದು ತಿಳಿಯಿರಿ. (೪೨೧)

೩೬. ಬ್ರಹ್ಮ, ವಿಷ್ಣು, ಶಂಕರ, ಋಷಿ, ಮುನಿಗಳು ತಪಸ್ಸು ಮಾಡುತ್ತಿದ್ದರೂ ಭಿಕ್ಷುಕರು. ಪ್ರಭುವಿನ ಹುಕುಂನ ಮೇರೆಗೆ ಯಾರು ನಡೆಯುವರೋ ಅವರು ಪ್ರಭುವಿನ ಚರಣಗಳಲ್ಲಿ ಶೋಭಿಸುವರು. ಆಜ್ಞೆಯಂತೆ ನಡೆಯದವರು ಅಹಂಕಾರಿಗಳಾಗಿ ಅಲೆದಾಡುತ್ತಿರುವರು. ಸೇವೆ ಮಾಡದೆ ಫಲವನ್ನು ಪಡೆಯಲಾರಿರಿ. ಸೇವೆಯೇ ಶ್ರೇಷ್ಠವಾದುದು. (೪೨೧)

ದೈವ ಪ್ರೇಮ

೩೭. ಮನವೇ ಶ್ರೀ ಹರಿಯನ್ನು ಪ್ರೀತಿಸು, ಕಮಲವು ನೀರನ್ನು ಪ್ರೀತಿಸಿದಂತೆ. ಜಲ ಬಿಟ್ಟರೆ ಅದಕ್ಕೆ ಮರಣ. ಗುರುವಿನ ಕೃಪೆಯಿಂದ ಪ್ರಭು ಅಂತರಂಗದಲ್ಲಿ ನೆಲಸುವಾಗ, ಭಕ್ತಿಯ ನಿಧಿಯನ್ನು ದಾನಮಾಡುವಾಗ ಮನವೇ ನೀನು ಶ್ರೀಹರಿಯನ್ನು ಪ್ರೀತಿಸು, ಮೀನು ನೀರನ್ನು ಪ್ರೀತಿಸುವಂತೆ. ಜಲವನ್ನುಳಿದು ಅದು ಕ್ಷಣ ಮಾತ್ರವೂ ಜೀವಿಸದು. ಮನವೇ ಶ್ರೀ ಹರಿಯನ್ನು ಪ್ರೀತಿಸು, ಜಾತಕವು ಮೇಘವನ್ನು ಪ್ರೀತಿಸುವಂತೆ. ಮನವೇ ಶ್ರೀ ಹರಿಯನ್ನು ಪ್ರೀತಿಸು ಚಕೋರಿಯು ಚಂದ್ರಮನನ್ನು ಪ್ರೀತಿಸುವಂತೆ. ಮನ ಮುಖನಿಗೆ ಅರಿವಾಗುವುದಿಲ್ಲ. ಆದರೆ ಗುರುಮುಖನು ತನ್ನ ಹತ್ತಿರದಲ್ಲಿಯೇ ಶ್ರೀ ಹರಿಯನ್ನು ಹೊಂದಿರುವನು. (೯-೬೦)

೩೮. ನೀನು ನನ್ನವನು. ನಿನ್ನಿಂದಾಗಿ ಮಾನ ನನಗೆ, ನಿನ್ನನುಳಿದರೆ ನನಗೆಂಥ ಮಾನ. ಯಾವ ಮಾನ ? (೫೫೭)

೩೯. ನಾನು ನಿನ್ನವನಾದ ಬಳಿಕ ಎಲ್ಲವೂ ನನ್ನದೆ. ನಾನಿರುವುದಿಲ್ಲ, ನೀನಿರುವೆ. ಅವನ ಹುಕುಂನಿಂದ ಯಾರಿಗೆ ಅಂತರ್ಜ್ಞಾನವುಂಟಾಗುವುದೋ ಅವರು ನಿರಹಂಕಾರಿಯಾಗುವರು. (೧೨೪೨)

ನಿರರ್ಥಕ ಪದ್ಧತಿ

೪೦. ಕೇವಲ ನಾಮವೊಂದೇ ನನ್ನ ದೀಪ. ಅದರಲ್ಲಿ ದುಃಖದ ಎಣ್ಣೆ ಹಾಕಿರುವೆನು, ದೀಪವು ಬೆಳಕು ಕೊಟ್ಟಿತು. ಎಣ್ಣೆಯೆಲ್ಲ ತೀರಿಹೋಯಿತು. ಯಮನೊಡನೆ ಭೇಟಿ ತಪ್ಪಿತು. ಜನರೇ ನಿರರ್ಥಕ ನಡತೆ – ನಡಾವಳಿಗಳನ್ನು ನಡೆಸಬೇಡಿರಿ. ಲಕ್ಷಾಂತರ ಕಟ್ಟಿಗೆ ತುಂಡುಗಳನ್ನು ಒಟ್ಟಿಗೆ ಸುಡುವ ಶಕ್ತಿ ಒಂದು ಕಿಡಿಯಲ್ಲಿರುವುದು. ಕೇಶವನೇ ನನಗೆ ಪಿಂಡ. ಸತ್ಯನಾಮವೇ ನನಗೆ ಕ್ರಿಯಾಕರ್ಮ. ಕರ್ತಾರನು ಇಲ್ಲಿ–ಅಲ್ಲಿ, ಹಿಂದೆ, ಮುಂದೆ, ಇರುವನು. ಅವನೇ ನನಗೆ ಆಧಾರ; ಅವನ ಸ್ತುತಿಯೇ ನನಗೆ ಗಂಗೆ, ಕಾಶಿ. ಅದರಲ್ಲಿಯೇ ನನ್ನ ಆತ್ಮ ಮೀಯುವುದು. ನಾನು ಹಗಲು ರಾತ್ರಿ ಅವನ ಪ್ರೇಮದಲ್ಲಿ ಲೀನವಾಗಿರುವುದೇ ನಿಜವಾದ ಸ್ನಾನ. ಪಿಂಡವು ಕೆಲವು ದೇವತೆಗಳ ನಿಮಿತ್ತ, ಕೆಲವು ಪಿತೃಗಳ ನಿಮಿತ್ತವಾಗಿರುವುದು. ಬ್ರಾಹ್ಮಣರು ತಿಥಿ ಮಾಡುವವರು ಮತ್ತು ತಿಂದು ಹೋಗುವವರು (೩೫೮)

೪೧. ಸೂತಕವನ್ನು ಒಪ್ಪಿಕೊಂಡರೆ ಎಲ್ಲ ಕಡೆಗೂ ಸೂತಕವಿರುವುದು. ಕರುಳು, ಕುರುಳು, ಕಟ್ಟಿಗೆಗಳಲ್ಲಿ ಹುಳಗಳು ಇರುವುವು. ಸೂತಕ ಕೊಳೆ. ಕೊಳೆ ಎಲ್ಲಿಲ್ಲ? ಜ್ಞಾನದಿಂದ ಸೂತಕ ತೊಳೆದು ಹೋಗುವುದು. ಜ್ಞಾನದಿಂದ ಸೂತಕ ಬಿಟ್ಟು ಹೋಗುವುದು. ಮನದ ಸೂತಕ ಲೋಭ. ನಾಲಗೆಯ ಸೂತಕ ಸುಳ್ಳು. ಪರನಾರಿಯ ಪರಧನದ ಬಯಕೆ ಕಣ್ಣಿನ ಸೂತಕ. ಸೂತಕದ ವಿಚಾರವೆಲ್ಲವೂ ಒಂದು ಭ್ರಮೆ. ಗುರುವಿನ ಉಪದೇಶದಿಂದ ಯಾರಿಗೆ ಜ್ಞಾನವುಂಟಾಗಿದೆಯೋ ಅವರಿಗೆ ಸೂತಕವಿಲ್ಲ. (೪೭೨–೭೩).

ಅನುಬಂಧ–೧

ಗ್ರಂಥ ಸಾಹೇಬ್

ಎರಡನೆ ಗುರುಗಳಾದ ಗುರು ಅಂಗದ್, ಗುರು ನಾನಕರ ಸಂತಾನವಲ್ಲ. ಗುರು ನಾನಕರ ಶಿಷ್ಯರು. ಮೂರನೆ ಗುರು, ಗುರು ಅಮರದಾಸರು ಸಹ ಗುರು ಅಂಗದ್‌ರ ಶಿಷ್ಯರು. ಗುರು ಅಮರ್‌ದಾಸ್‌ರು ಶಿಷ್ಯ ರಾಮದಾಸರಿಗೆ ಗುರುಪೀಠವನ್ನು ಇತ್ತರು.

ಐದನೆ ಗುರುಗಳಾದ, ಗುರು ಅರ್ಜುನ್ ಅವರು ಗುರು ರಾಮದಾಸರ ಮಗ. ಗುರು ರಾಮದಾಸರ ಜ್ಯೇಷ್ಠಪುತ್ರ ಪೃಥ್ವಿ ಚಂದ್ ತಮಗೆ ಸಿಗಬೇಕಾಗಿದ್ದ ಸ್ಥಾನ–ಮಾನಗಳು ತಮ್ಮನಿಗೆ ದೊರೆತ ಕಾರಣದಿಂದ ಅಸಂತುಷ್ಟರಾದರು.

ಕವಿತಾ ಶಕ್ತಿಯನ್ನು ಹೊಂದಿದ ಪೃಥ್ವಿಚಂದ್ ತಾವೇ ಅನೇಕ ವಚನಗಳನ್ನು ರಚಿಸಿ, ಅವುಗಳನ್ನು ಪೂರ್ವದ ಗುರುಗಳ ಹೆಸರುಗಳಲ್ಲಿ ಜನಪ್ರಿಯಗೊಳಿಸುವ ಪ್ರಯತ್ನದಲ್ಲಿ ತೊಡಗಿದರು.

ಆಗ ಗುರು ಅರ್ಜುನ್ ಹಿಂದಿನ ಗುರುಗಳ ವಚನಗಳ ಪಾವಿತ್ರ್ಯವನ್ನು ಹಾಗೂ ಪಾಠ ಶುದ್ಧತೆಯನ್ನು ಕಾಪಾಡುವ ಸಲುವಾಗಿ ಪ್ರಸಿದ್ಧ ಕವಿಗಳು, ಸಿಖ್ ಸಿದ್ಧಾಂತದ ಪಂಡಿತರೂ ಆಗಿದ್ದ ಬಾಯಿ ಗುರುದಾಸ್ ಅವರಿಗೆ ಹಿಂದಿನ ಗುರುಗಳ ಕೃತಿ ಸಂಪಾದನೆಯ ಜವಾಬ್ದಾರಿಯನ್ನು ವಹಿಸಿದ್ದಲ್ಲದೆ ಪ್ರತಿಯೊಬ್ಬ ಗುರುಗಳ ವಚನಗಳನ್ನು ಸ್ವತಃ ತಾವೇ ಪರಿಶೀಲಿಸಿದರು.

ಬಾಯಿ ಗುರುದಾಸ್ ಅವರ ಪ್ರಯತ್ನದ ಫಲವಾಗಿ, ದೇಶದ ವಿವಿಧ ಭಾಗಗಳಲ್ಲಿ ಹರಡಿ ಹೋಗಿದ್ದ ಗುರು ನಾನಕ್ ಅವರ ೯೭೪ ವಚನಗಳನ್ನು ಸಂಪಾದಿಸಲು ಸಾಧ್ಯವಾಯಿತು. ಗುರು ಅಂಗದ್ ದೇವರ ೬೧ ವಚನ, ಗುರು ಅಮರ ದಾಸರ ೬೦೧ ವಚನಗಳು, ಗುರು ಅರ್ಜುನ್ ದೇವ್ ಅವರ ೬೩೬ ವಚನಗಳನ್ನು ಸಂಪಾದಿಸಿ, ಸಂಕಲಿಸಿ, ೧೬೦೪ರಲ್ಲಿ ಗುರು ಗ್ರಂಥ ಸಾಹೇಬ್‌ನ್ನು ಸಿದ್ಧಗೊಳಿಸಿದರು.

ಪವಿತ್ರ ಗ್ರಂಥ ಸಿದ್ಧವಾದ ತರುವಾಯ – ವಿಜೃಂಭಣೆಯಿಂದ ಹರಮಂದಿರದಲ್ಲಿ ವಿದ್ಯುಕ್ತವಾಗಿ ಪ್ರತಿಷ್ಠಾಪಿಸಿ, ಗುರು ನಾನಕರ ಶಿಷ್ಯರು, ವೃದ್ಧರೂ ಆಗಿದ್ದ ಬಾಯಿ ಬುಧ ಅವರಿಗೆ ಗ್ರಂಥ ಸಾಹೇಬ್‌ನ ಉಸ್ತುವಾರಿಯನ್ನು ವಹಿಸಿದರು.

ಬಾಯಿ ಗುರುದಾಸ್ ಅವರ ರಚನೆಗಳನ್ನು ಗುರುಗ್ರಂಥ ಸಾಹೇಬ್‌ನಲ್ಲಿ ಸೇರಿಸಲು ಗುರು ಅರ್ಜುನ್ ದೇವ್ ಇಚ್ಛಿಸಿದಾಗ, ಬಾಯಿ ಗುರು ದಾಸ್ ಅವರು ತಮ್ಮ ವಿನಯದ ಪರಾಕಾಷ್ಟತೆಯಲ್ಲಿ ಅಂತಹ ಪರಮ ಗೌರವವನ್ನು ನಿರಾಕರಿಸಿದರು.

ಗ್ರಂಥ ಸಾಹೇಬ್‌ನಲ್ಲಿ ಇಸ್ಲಾಂ ಮತದ ದೂಷಣೆ ಇರುವುದಾಗಿಯೂ, ಅದರಲ್ಲಿ ಇಸ್ಲಾಂ ಸಂತರ ವಚನಗಳನ್ನು ಸೇರ್ಪಡೆ ಮಾಡಿ ಸಂತರಿಗೆ ಅವಮಾನಿಸಿರುವುದಾಗಿ ಕುಹಕಿಗಳು ಚಕ್ರವರ್ತಿ ಅಕ್ಬರ್‌ಗೆ ಪುಕಾರು ನೀಡಿದ ಮೇರೆಗೆ ಚಕ್ರವರ್ತಿ – ಗ್ರಂಥ ಸಾಹೇಬ್‌ನ ಜೊತೆಗೆ ಗುರುಗಳು – ಆಸ್ಥಾನಕ್ಕೆ ಬರುವಂತೆ ಆಜ್ಞೆ ಮಾಡಿದ. ಗುರುಗಳು ತಮ್ಮ ಇಬ್ಬರು ಶಿಷ್ಯರನ್ನು ಗ್ರಂಥ ಸಾಹೇಬ್‌ನ ಜೊತೆಗೆ ಕಳುಹಿದರು.

ಚಕ್ರವರ್ತಿ ಗುರುಮುಖಿ ಲಿಪಿಯಲ್ಲಿದ್ದ ಎರಡು ವಚನಗಳನ್ನು ಸೂಚಿಸಿ ಓದುವಂತೆ ಸೂಚಿಸಿದ. ಎರಡೂ ವಚನಗಳು ಭಗವದ್ ಪ್ರೇಮದ ವಿಶ್ವ ವಿಶಾಲವಾದ ಭಾವನೆಗಳನ್ನು ವ್ಯಕ್ತಪಡಿಸಿದವು.

ಗುರುವಿನ ಶಿಷ್ಯರು ತಾವು ಬಾಯಿಪಾಠ ಮಾಡಿರಬಹುದಾದ ವಚನಗಳನ್ನು ಹೇಳುತ್ತಿರಬಹುದೆಂಬ ಅನುಮಾನದ ಮೇಲೆ ಗುರುಮುಖಿ ಬಲ್ಲ ಸಾಹಿಬ್ ದಯಾಲ್ ಎಂಬ ಸಾಮಾನ್ಯ ಪ್ರಜೆಯಿಂದ ವಚನಗಳನ್ನು ಓದಿಸಿದ. ಆ ವಚನಗಳೂ ಸಹ ನಿರಾಕಾರ ಭಗವಂತನ ಸ್ತೋತ್ರಗಳಾಗಿದ್ದವು.

ಅಕ್ಬರ್, ಗುರು ಅರ್ಜುನ್‌ರ ಕೃತಿ ಸಂಪಾದನೆಯ ಪ್ರಯತ್ನವನ್ನು ಮೆಚ್ಚಿಕೊಂಡು, ೫೧ ಚಿನ್ನದ ಮೊಹರ್‌ಗಳನ್ನು ಇತ್ತು ಗ್ರಂಥ ಸಾಹೇಬ್‌ನ್ನು ಗೌರವಿಸಿದ.

ಗ್ರಂಥ ಸಾಹೇಬ್‌ನಲ್ಲಿ ಸಂಕಲಿತವಾಗಿರುವ – ಗುರುಗಳ ವಚನಗಳಲ್ಲಿ ಒಂದೇ ಒಂದು ಅಕ್ಷರವನ್ನೂ ಬದಲಾಯಿಸುವುದು ಮಹಾ ಪಾಪವೆಂದು ಗುರು ಅರ್ಜುನ್ – ವಿಧಿಸಿದರು. ಹತ್ತನೆ ಗುರು – ಗುರು ಗೋವಿಂದಸಿಂಗ್ ಮತ್ತೆ ಈ ಪವಿತ್ರ ಗ್ರಂಥಕ್ಕೆ ಗುರು ತೇಜ್ ಬಹದ್ದೂರ್ ಅವರ ೫೯ ಪದ, ೫೭ ಶ್ಲೋಕಗಳನ್ನು ಸೇರಿಸಿ – ಸಿಖ್ ಗುರುಗಳ ವಾಣಿಯನ್ನು ಗ್ರಂಥ ಸಾಹೇಬ್‌ನ ಕೇಂದ್ರ ಬಿಂದುವನ್ನಾಗಿಸಿದರು ಇದಕ್ಕೆ ಗುರುಬಾನಿ ಎಂದು ಕರೆದು–ಈ ಭಾಗ ಪರಮ ಪವಿತ್ರವಾದುದೆಂದು ಬಿತ್ತರಿಸಿದರು.

ಗ್ರಂಥ ಸಾಹೇಬ್‌ನಲ್ಲಿ ಸಿಖ್ ಗುರುಗಳ ರಚನೆಗಳಲ್ಲದೆ ವಿವಿಧ ಜನಾಂಗ, ಹಾಗೂ ಜಾತಿಗೆ ಸೇರಿದ ೩೬ ಜನ ಸಂತರ ವಚನಗಳು ಸೇರ್ಪಡೆಯಾಗಿವೆ. ಗ್ರಂಥ ಸಾಹೇಬ್‌ನಲ್ಲಿ ಸಂಕಲಿತವಾಗಿರುವ ಒಟ್ಟು ರಚನೆಗಳು ೬೦೦೦.

ಧನಾ, ಜಯದೇವ್, ಸೂರದಾಸ್, ನಾಮದೇವ, ತ್ರಿಲೋಚನ, ಪರಮಾನಂದ, ಸದನ್, ರಮಾನಂದ, ರವಿದಾಸ್, ಯೋಗಿ ಶಂಭುನಾಥ್, ಸಂತ ಫರೀದ್, ಕಬೀರ್, ಸಂತ ಹುಸೇನ್ ಷಹಾ, ಇನಾಯತ್ ಕ್ವಾದ್ರಿ, ಷೇಕ್ ವಾಲಿ ಮುಂತಾದವರ ರಚನೆಗಳು ಗ್ರಂಥ ಸಾಹೇಬ್‌ನಲ್ಲಿ ಸೇರ್ಪಡೆಯಾಗಿವೆ. ಇವರಲ್ಲಿ ಕೆಲವರು ಉತ್ತಮ ಕುಲದವರು. ಮತ್ತೆ ಕೆಲವರು ಕಟುಕ, ನಾಪಿತ, ಚಮ್ಮಾರ ಮುಂತಾದ ಕಸುಬು ಮಾಡುತ್ತಿದ್ದವರು. ಭಕ್ತರಿಗೆ ಜಾತಿ ಮುಖ್ಯವಲ್ಲ, ನೀತಿ ಮುಖ್ಯವೆಂಬುದನ್ನು ಈ ಗ್ರಂಥ ಎತ್ತಿಹಿಡಿಯುತ್ತದೆ.

ಸಿಖ್ ಗುರುಗಳು ಕಾಯಾ, ವಾಚಾ, ಮನಸ ಜಾತ್ಯಾತೀತ ಸಮಾಜ ರಚನೆಗಾಗಿ ಶ್ರಮಿಸಿದ್ದರು. ಗ್ರಂಥ ಸಾಹೇಬ್ ಅದಕ್ಕೊಂದು ಉಜ್ವಲ ಉದಾಹರಣೆ. ಪ್ರತಿದಿನ ಗ್ರಂಥ ಸಾಹೇಬ್‌ಗೆ ವಂದಿಸುವ ಪ್ರತಿಯೊಬ್ಬ ಸಿಖ್‌ನು ಎಲ್ಲಾ ಜಾತಿಯ, ಪಂಗಡದ ಶ್ರೇಷ್ಠ ಭಕ್ತರಿಗೆ ವಂದಿಸುತ್ತಾನೆ. ಗ್ರಂಥ ಸಾಹೇಬ್‌ನಲ್ಲಿನ ರಚನೆಗಳನ್ನು ಹಿಂದುಸ್ತಾನಿ ಸಂಗೀತದ ೩೧ ವಿವಿಧ ರಾಗಗಳಿಗೆ ಅಳವಡಿಸಲಾಗಿದೆ.

ಹತ್ತನೆ ಗುರು – ಗುರು ಗೋವಿಂದ ಸಿಂಗ್ ಗ್ರಂಥ ಸಾಹೇಬ್‌ಗೆ ಗುರು ತೇಜ್ ಬಹದ್ದೂರ್ ಅವರ ರಚನೆಗಳನ್ನು ಸೇರಿಸಿ, ಹೊಸ ಆವೃತ್ತಿಯನ್ನು ಸಿದ್ಧಪಡಿಸಿದ್ದಲ್ಲದೆ – ಮುಂದೆ ಯಾರೂ ಗ್ರಂಥಕ್ಕೆ ಸೇರ್ಪಡೆ ಮಾಡದಂತೆ ನಿಯಮಿಸಿದರು.

ಗುರುಗಳಿಗೆ ಸಲ್ಲುತ್ತಿದ್ದ ಎಲ್ಲಾ ಗೌರವಗಳೂ ಗ್ರಂಥ ಸಾಹೇಬ್‌ಗೆ ದೊರೆಯುವಂತೆ ಮಾತ್ರವಲ್ಲ – ಗ್ರಂಥ ಸಾಹೇಬ್‌ನ್ನು ಗುರುವೆಂದೇ ಪರಿಗಣಿಸುವಂತೆ ಹುಕುಂ ನೀಡಿದರು.

ಗುರುಗಳ ಪೀಠಕ್ಕೆ ವ್ಯಕ್ತಿಗಳನ್ನು ಆರಿಸುವ ಕ್ರಮವನ್ನು ಕೈಬಿಟ್ಟು ಗ್ರಂಥ ಸಾಹೇಬ್‌ನ್ನು ಶಾಶ್ವತವಾಗಿ ಗುರು ಪೀಠದಲ್ಲಿ ಪ್ರತಿಷ್ಠಾಪಿಸಿ ಹೊಸ ಮನ್ವಂತರದ ಪ್ರವರ್ತಕರಾದರು. ಆಧ್ಯಾತ್ಮಿಕ ಬೆಳಕಿನ ಆಗರವಾಗಿ ಇಂದಿಗೂ ಗ್ರಂಥ ಸಾಹೇಬ್ ಸಿಖ್ ಸಮುದಾಯವನ್ನು ನಡೆಸುತ್ತಿದೆ.

ಗುರುಮುಖಿ

ಪಂಜಾಬಿ ಭಾಷೆಯ ಲಿಪಿ. ಪಂಜಾಬಿನಲ್ಲಿರುವ ಹಾಗೂ ಹೊರಗಿನ ಸಿಖ್ ಜನಾಂಗಕ್ಕೆ ಈ ಲಿಪಿ ಪವಿತ್ರವಾದುದು. ಕಾರಣ ಇದು ಧರ್ಮ ಗುರುಗಳಿಂದ ನಿರ್ಮಾಣಗೊಂಡ ಲಿಪಿ/ಭಾಷೆ ಎಂಬ ನಂಬಿಕೆ. ಎರಡನೆ

ಗುರು, ಗುರು ಅಂಗದ್ ಅವರಿಂದ ಈ ಲಿಪಿ ನಿರ್ಮಾಣಗೊಂಡಿದೆ ಎಂಬುದು ಪ್ರಾಚುರ್ಯದಲ್ಲಿದೆ.

ಆದರೆ ಸತ್ಯ ಸಂಗತಿ ಬೇರೆ. ಈ ಲಿಪಿ ಮತ್ತು ಭಾಷೆ ಹನ್ನೆರಡನೆ ಶತಮಾನದಷ್ಟು ಹಿಂದೆಯೇ ರೂಢಿಯಲ್ಲಿತ್ತು. ಪ್ರಸಿದ್ಧ ಸೂಫಿ ಕವಿ ಭಾಬ ಫರೀದ್ ಷಹಕಾರ್ ಗಂಜ್ ಪಂಜಾಬಿ ಭಾಷೆಯಲ್ಲಿ ಅಧಿಕಾರಯುತವಾಗಿ ಕೃತಿಗಳನ್ನು ರಚಿಸಿದ್ದ.

ಮೊದಲ ಸಿಖ್ ಗುರು–ನಾನಕ್ ತನ್ನೊಂದು ರಚನೆಯಲ್ಲಿ ಗುರುಮುಖಿಯ ೩೫ ಅಕ್ಷರಗಳನ್ನು ಬಳಸಿದ್ದರು. ಆದ್ದರಿಂದ ಗುರು ಅಂಗದ್‌ರ ಕಾಲಕ್ಕಿಂತ ಪೂರ್ವದಲ್ಲಿಯೇ ಪಂಜಾಬಿ ಭಾಷೆ ಮತ್ತು ಗುರುಮುಖಿ ಲಿಪಿ ಬಳಕೆಯಲ್ಲಿದ್ದವು. ಗುರು ಅಂಗದ್, ಗುರುಮುಖಿಯನ್ನು ಕಡ್ಡಾಯವಾಗಿ ಬಳಸಿ ಹೆಚ್ಚು ಪ್ರಚಾರಕ್ಕೆ ತಂದರು. ಹೊರಗಿನಿಂದ ಬಂದ ಮುಸಲ್ಮಾನರು ಪಂಜಾಬಿ ಭಾಷೆಯಲ್ಲಿ ಬರೆದರೂ ಅರೇಬಿಕ್ ಮತ್ತು ಪರ್ಷಿಯನ್ ಲಿಪಿಯನ್ನೇ ಬಳಸುತ್ತಿದ್ದರು.

ಗುರುನಾನಕ್‌ರು ಜನ ಬಳಸುತ್ತಿದ್ದ ಲಿಪಿಯನ್ನೇ ಬಳಸುವುದರ ಮೂಲಕ ಸಾಂಸ್ಕೃತಿಕ ಬೇರನ್ನು ಭದ್ರಗೊಳಿಸಿದರು. ಪಂಜಾಬಿ ಭಾಷೆಯ ಆತ್ಮವಾದ ಲಿಪಿಯನ್ನು ಗುರು ಸಂರಕ್ಷಿಸಿದ ಕಾರಣ ಅದಕ್ಕೆ ಗುರುಮುಖಿ ಎಂದು ಹೆಸರಾಯಿತು.

ಇಂದೂ ಗುರುಮುಖಿಯ ಬಳಕೆಯ ಬಗ್ಗೆ ವಾದ–ವಿವಾದಗಳು ಇದ್ದೇ ಇದೆ. ಪಶ್ಚಿಮ ಪಂಜಾಬಿನಲ್ಲಿ ಈಗಲೂ ಅರೇಬಿಕ್ ಲಿಪಿಯನ್ನೇ ಪಂಜಾಬಿ ಭಾಷೆಗೆ ಬಳಸಲಾಗುತ್ತಿದೆ.

●

ಅನುಬಂಧ – ೨

ಅಧ್ಯಯನದ ವಿಸ್ತಾರಕ್ಕೆ

೧. ಗುರುನಾನಕ್ – ಡಾ. ದೇಜಗೌ

೨. ಗುರುನಾನಕ್ – ಪ್ರೊ.ತ.ಸು. ಶಾಮರಾವ್

೩. ಗುರುನಾನಕ್ – ಬಿ.ವಿ. ಮಲ್ಲಾಪುರ

೪. ಗುರುನಾನಕ್ ವಾಣಿ – ಭಾ. ಈ. ಜೋಧ್ ಸಿಂಗ್: ಅನು : ಗುರುನಾಥ ಜೋಶಿ

೫. **Guru Nanak -** Guru Bhachan Singh Talib

೬. **Guru Nanak (His Personality and vision) -** Guru Bhachan Singh Talib.

೭. **Stories from Sikh History - Book I - Guru Nanak -** Kartar Singh, Gur Dial Singh Dhilon

೮. **Hymns of Guru Nanak -** Khuswant Singh

೯. **Ranjith Singh - Maharaja of the Pubjab -** Khuswant Singh

೧೦. **Fall of the Sikh Kingdom -** Khuswant Singh

೧೧. **The Sacred writings of the Sikhs -** Khuswant Singh

೧೨. **Guru Nanak and the origin of Sikh Faith -** Harbans Singh

೧೩. **Guru Nanak and his times -** A.C. Banerji

೧೪. **Guru Nanak in western scholarship -** J.C. Grewal

೧೫. **Guru Nanak and His mystic teachings -** J.R. Puri

೧೬. **Guru Nanak and the Indian Mystic Tradition -** Dewan Singh

೧೭. **A History of Sikhs -** Gopal Singh

೧೮. **History of the Sikhs Vol. I, II, III -** Khuswant Singh

೧೯. **The Sikhs -** Patwant Singh

೨೦. **Sikhism beliefs and practices -** W. Owen Cole, Piara Singh Sambhi

೨೧. **A History of Punjabi Literature -** Sant Singh Sekhon, Kartar Singh

Duggal

೨೨. **The Punjab under Mugals -** Muhammad Akbar

೨೩. **Japji - (Eng-Translation) -** O.P. Ghai

೨೪. **Guru Nanak and Patriarehy -** J.S. Grewal.

೨೫. **Secular perceptions - In Sikh Faith -** K.S. Duggal.

೨೬. **Warrior Diplomat -** Harbans Singh Virdi

೨೭. **Guru Nanak - Ideals and Institutions. Ed-**H.S. Soch and Madanjit Kaur

೨೮. **Sikhism -** Dr. Gobind Singh Mansu Khani

೨೯. **Guru Nanak - A Global vision -** Dr. Inder Pal Singh, Madanjit Kaur

೩೦. **The History of the origin and progress of the Sikhs -** Major James Browne - 1788

೩೧. **Observations on Sikhs -** Charles Wilkins - 1788

೩೨. **Sketch of the Sikhs -** John Malcolm - 1810

೩೩. **The sketch of the religious sects of the Hindus -** Part -I, 1828, Part-II, 1832-Horace Hayman Wilson.

೩೪. **History of Sikhs -** J.D. Cunningham - 1849

೩೫. **Views of the History, Literature-mythology of the Hindus-** (A chapter on Sikhs)-William Ward.

೩೬. **Adi Granth Translation by -** Ernest Trump - 1877

೩೭. **The Sikha religion -** Max Arthur Macauliffe

೩೮. **Religion of the Sikhs -** Dorothy Field - 1914.

೩೯. **Short History of Sikhs -** C.H. Payne - 1915

೪೦. **Religion ans Short Histroy of Sikhs -** (1469-1930)-George Batley Scott

೪೧. **Sikhs and their Books -** C.H. Lochlin - 1947

೪೨. **Guru Nanak and the Sikh religion -** W.H. Meleod - 1968

ಅನುಬಂಧ – ೩

ಸಿಖ್ ಗುರುಗಳು

೧. **ಗುರುನಾನಕ್** – ಸಿಖ್ ಮತದ ಪ್ರವರ್ತಕ, ಮೊದಲ ಗುರು. (೧೪೬೯– ೧೫೩೮)

  ೧. ಹಿಂದು – ಮುಸ್ಲಿಂ ಸಾಮರಸ್ಯ ಪ್ರಯತ್ನ
  ೨. ಗುರು ಮುಖಿ ಲಿಪಿಯ ಬಳಕೆ
  ೩. ಸಾಮೂಹಿಕ ಭೋಜನ – ವ್ಯವಸ್ಥೆ
  ೪. ಸಾಹಿತ್ಯ ಸೃಷ್ಟಿ

೨. **ಗುರು ಅಂಗದ್** (೧೫೩೮–೫೨)

  ೧. ಗುರುಮುಖಿ ವರ್ಣಮಾಲೆಯನ್ನು ಪ್ರಚುರಪಡಿಸುವ ಪ್ರಯತ್ನ
  ೨. ಸಾಹಿತ್ಯ ರಚನೆ

೩. **ಗುರು ಅಮರ್ ದಾಸ್** (೧೫೫೨–೭೪)

  ೧. ಸಿಖ್ ಬೋಧನೆಗಳನ್ನು ಅಭಿವೃದ್ಧಿಪಡಿಸಿದ್ದು
  ೨. ಜಾತಿ ಪದ್ಧತಿಯ ನಿರ್ಮೂಲನ – ಪ್ರಯತ್ನ 'ಲಂಗರ್' ಸಾಮೂಹಿಕ ಭೋಜನ ವ್ಯವಸ್ಥೆ
  ೩. ಸಾಹಿತ್ಯ ರಚನೆ

೪. **ಗುರು ರಾಮದಾಸ್** (೧೫೭೪–೮೧)

  ೧. ರಾಮದಾಸ್ ಪುರ – ನಗರ ಸ್ಥಾಪನೆ
  ೨. ಹರ್ ಮಂದಿರ್ ಸಾಹಿಬ್‌ನ ನಿರ್ಮಾಣ (ಸ್ವರ್ಣ ದೇವಾಲಯ)
  ೩. ಮೊಗಲ್ ಚಕ್ರವರ್ತಿ – ಅಕ್ಬರ್ ಜೊತೆ ಸ್ನೇಹ
  ೪. ಸಾಹಿತ್ಯ ರಚನೆ

೫. **ಗುರು ಅರ್ಜುನ್** (೧೫೮೧–೧೬೦೬)

  ೧. ಗ್ರಂಥ ಸಾಹಿಬ್‌ನ ಕೇಂದ್ರ ಭಾಗವಾದ ಆದಿ ಗ್ರಂಥದ ಸಂಕಲನ
  ೨. ಸಿಖ್ ಮತ – ಪ್ರಸಾರ ದ್ವಿಗುಣ

 ೩. ಧರ್ಮಗುರುಗಳ ಉಡುಪು
 ೪. ಸಾಹಿತ್ಯ ನಿರ್ಮಾಣ
 ೫. ಮೊಗಲ್ ಚಕ್ರವರ್ತಿ ಜಹಂಗೀರ್ – ಗುರುವನ್ನು ಸೆರೆಹಿಡಿದು ಅಮಾನುಷವಾಗಿ ಹಿಂಸಿಸಿ – ಕೊಂದನು.

೬. **ಗುರು ಹರ – ಗೋವಿಂದ್ (೧೬೦೬–೪೫)**

 ೧. ಗುರುಗಳ ಉಡುಪಿನ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ
 ೨. ಆಧ್ಯಾತ್ಮಿಕ ಅಧಿಕಾರ (ಫಕೀರಿ) ಸಂಕೇತವಾಗಿ ಒಂದು ಖಡ್ಗವನ್ನು ಲೌಕಿಕ ಅಧಿಕಾರ (ಅಮೀರೀ) ಸಂಕೇತವಾಗಿ ಒಂದು ಖಡ್ಗವನ್ನು ಧರಿಸಿದ
 ೩. ಹಿಂದುಗಳ ಮತ್ತು ಸಿಖ್ಖರ ರಕ್ಷಣೆಗಾಗಿ ಮೊದಲ ಸಿಖ್ಖರ ದುರ್ಗವನ್ನು ಸ್ಥಾಪಿಸಿದ
 ೪. ಸಿಖ್ಖರನ್ನು ಒಗ್ಗೂಡಿಸಿ – ಮೊಗಲರ ವಿರುದ್ಧ ಹೋರಾಡಲು ಸಜ್ಜುಗೊಳಿಸಿದ.

೭. **ಗುರು ಹರರಾಯ್ (೧೬೪೫–೬೧)**

 ೧. ಔರಂಗಜೇಬ್‌ನ ಅಣ್ಣ – ದಾರಾ ಷಕೋವಿನೊಡನೆ ಸ್ನೇಹ ಬೆಳೆಸಿದ
 ೨. ಔರಂಗಜೇಬ್‌ನೊಡನೆ ಸಂಘರ್ಷ – ಗುರುವಿನ ಮಗ ರಾಮ್‌ರಾಯ್‌ನ ಸೆರೆ
 ೩. ಸಂಧಾನ ಪ್ರಯತ್ನ ವಿಫಲ

೮. **ಗುರು ಹರ್ ಕೃಷ್ಣನ್ (೧೬೬೧–೬೪)**

ಪೀಠಕ್ಕೆ ಬಂದಾಗ ೫ ವರುಷ. ಔರಂಗಜೇಬ್ ಈತನನ್ನು ಸೆರೆಹಿಡಿದ. ೮ನೆ ವಯಸ್ಸಿನಲ್ಲಿ ಕಾರಾಗೃಹದಲ್ಲಿ ಮೃತನಾದ.

೯. **ಗುರು ತೇಜ್ ಬಹದ್ದೂರ್ (೧೬೬೪–೭೫)**

ಔರಂಗಜೇಬ್ ೧೬೭೫ರಲ್ಲಿ ಈತನನ್ನು ಸೆರೆಹಿಡಿದು ಗಲ್ಲಿಗೇರಿಸಿದ.

೧೦. **ಗುರು ಗೋವಿಂದ ಸಿಂಗ್ (೧೬೭೫–೧೭೦೮)**

 ೧. ತೇಜ್ ಬಹದ್ದೂರನ ಮಗ. ೬ನೆ ವಯಸ್ಸಿನಲ್ಲಿ ಗುರುಪೀಠವೇರಿದ

೨. ಗುರುನಾನಕ್ ನಂತರ ಅತ್ಯಂತ ಪ್ರಮುಖ ಗುರು
೩. ಮೊಗಲರ ವಿರುದ್ಧ ಹೋರಾಡಲು ಖಾಲ್ಸಾ – ಯುದ್ಧಾಸಕ್ತ ದೇವ ಪ್ರಭುತ್ವವನ್ನು ಸ್ಥಾಪಿಸಿದ.
೪. ಕೃಪಾಣದ ಸಂಪ್ರೋಕ್ಷಣೆಯಿಂದ ಜನರಿಗೆ ಧರ್ಮ ದೀಕ್ಷೆ ನೀಡಿ, ಅವರ ಹೆಸರಿನ ಹಿಂದೆ ಸಿಂಗ್ (ಸಿಂಹ) ಎಂಬ ವಿಶೇಷಣವನ್ನು ಹಚ್ಚಿ ಜನಾಂಗದಲ್ಲಿ ಕೆಚ್ಚು – ಕಲಿತನಗಳನ್ನು ತುಂಬಿದ. ಗುರುಗಳು ಅನುಕ್ರಮವಾಗಿ ಅಧಿಕಾರಕ್ಕೆ ಬರುವ ಪದ್ಧತಿಯನ್ನು ನಿಲ್ಲಿಸಿ – ವ್ಯಕ್ತಿ ರೂಪದ ಗುರುವಿಗೆ ಇದ್ದ ಪವಿತ್ರ ಸ್ಥಾನವನ್ನು ಗುರು ವಚನ ಸಂಕಲನವಾದ ಗ್ರಂಥ ಸಾಹಿಬ್‌ಗೆ ನೀಡಿದ.

––––––––––